ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಈ ಸಾವು ನ್ಯಾಯವೇ?
ಆಳ್ವಾಸ್ ಇತ್ತೀಚಿನ ಬಲಿ
ಕಾವ್ಯ




ಸಂಪುಟ 11 | ಸಂಚಿಕೆ 34 | ಪುಟ 16 | ಆಗಸ್ಟ್ 14–20, 2017 | ರೂ. 10/–

web: www.janashakthi.co.in | e-mail : js_weekly@yahoo.com

ರಾಜ್ಯಾದ್ಯಂತ ಆಗಸ್ಟ್ ೯
ಭಾರತ ಬಿಟ್ಟು ತೊಲಗಿ
ಚಳುವಳಿಯ 75 ನೇ ವರ್ಷಾಚರಣೆ

"ಕೋಮುವಾದಿ
ಮೂಲಭೂತವಾದಿ,
ಭಯೋತ್ಪಾದಕ ಶಕ್ತಿಗಳೇ
ದೇಶಬಿಟ್ಟು ತೊಲಗಿ"

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)





ಕೋಮುವಾದಿಗಳೇ ಮೂಲಭೂತವಾದಿಗಳೇ ಭಯೋತ್ಪಾದಕರೇ

ದೇಶ ಬಿಟ್ಟು ತೊಲಗಿ



ನವೆಂಬರ್ 9-11 ದೆಹಲಿಗೆ ಲಕ್ಷಾಂತರ ಕಾರ್ಮಿಕರ ಲಗ್ಗೆ



ಜೇಟ್ಲಿ ! ಕೇರಳ ಗೂಂಡಾ ರಾಜ್ಯವಲ್ಲ

ಕೇರಳ ದೇಶದ ನಂ.1 ರಾಜ್ಯ



ಮಳೆ ಕೊರತೆ : ರೈತರ ಆತಂಕ ನಿವಾರಿಸಿ



ಬಿಜೆಪಿಯ "ಬೇಟಾ ಬಚಾವೊ"



ಕ್ವಿಟ್ ಇಂಡಿಯಾ–75

ರಾಜ್ಯಸಭೆಯಲ್ಲಿ ಯೆಚೂರಿ ಭಾಷಣ



ಭಾರತ ವಿಜ್ಞಾನ ನಡೆ





ನವಂಬರ್ 9,10,11: ದಿಲ್ಲಿಗೆ ಲಕ್ಷ-ಲಕ್ಷ ಕಾರ್ಮಿಕರ ಲಗ್ಗೆ

ಜನ-ವಿರೋಧಿ, ಕಾರ್ಮಿಕ-ವಿರೋಧಿ ಧೋರಣೆಗಳ ವಿರುದ್ಧ ಮೂರು ದಿನಗಳ ಮಹಾಧರಣಿ ಅನಿರ್ದಿಷ್ಟಾವಧಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ-ರಾಷ್ಟ್ರೀಯ ಕಾರ್ಮಿಕ ಸಮಾವೇಶದ ನಿರ್ಧಾರ

ಆಗಸ್ಟ್ 8ರಂದು ದಿಲ್ಲಿಯಲ್ಲಿ ಸೇರಿದ ರಾಷ್ಟ್ರೀಯ ಕಾರ್ಮಿಕರ ಸಮಾವೇಶ ಈ ವರ್ಷದ ನವಂಬರ್ 9,10 ಮತ್ತು 11ರಂದು ಸಂಸತ್ತಿನ ಮುಂದೆ ಎನ್‌ಡಿಎ ಸರಕಾರದ ಜನ-ವಿರೋಧಿ, ಕಾರ್ಮಿಕ ವಿರೋಧಿ ಧೋರಣೆಗಳ ವಿರುದ್ಧ ಲಕ್ಷಾಂತರ ಕಾರ್ಮಿಕರನ್ನು ಅಣಿನೆರೆಸಿ ಮೂರು ದಿನಗಳ ಧರಣಿ ನಡೆಸಲು ಮತ್ತು ಅದನ್ನನುಸರಿಸಿ ಅನಿರ್ದಿಷ್ಟಾವಧಿ ಸಾರ್ವತ್ರಿಕ ಮುಷ್ಕರ ನಡೆಸಲು ನಿರ್ಧರಿಸಿದೆ.

ಎಲ್ಲ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ಈ ಸಮಾವೇಶವನ್ನು ಸಂಘಟಿಸಿತ್ತು. ಐಎನ್‌ಟಿಯುಸಿ, ಎಐಟಿಯುಸಿ, ಹೆಚ್‌ಎಂಎಸ್, ಸಿಐಟಿಯು, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಯುಟಿಯುಸಿ ಮತ್ತು ಎಲ್‌ಪಿಎಫ್ ಈ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಹಾಗೂ ರಾಜ್ಯ ಮತ್ತು ಕೇಂದ್ರ ಸರಕಾರೀ ನೌಕರರು, ಬ್ಯಾಂಕ್, ವಿಮಾ, ರಕ್ಷಣಾ ವಲಯಗಳ ನೌಕರರ ಮತ್ತು ಸ್ಕೀಮ್ ನೌಕರರ ರಾಷ್ಟ್ರೀಯ ಒಕ್ಕೂಟಗಳು, ಸಾರ್ವಜನಿಕ ವಲಯದ ಉದ್ದಿಮೆಗಳು, ರೈಲ್ವೆ, ಟೆಲಿಕಾಂ, ವಿದ್ಯುತ್, ಕಲ್ಲಿದ್ದಲು, ಉಕ್ಕು, ಇಂಧನ, ಪೆಟ್ರೋಲಿಯಂ, ರಸ್ತೆ ಸಾರಿಗೆ, ವಿಮಾನ ಸಾರಿಗೆ, ಜಲ ಸಾರಿಗೆ, ಬಂದರು ಮತ್ತು ಹಡಗುಕಟ್ಟೆಗಳು, ಲೋಹ ಮತ್ತು ಗಣಿಗಾರಿ-ಕೆ, ಮಾಹಿತಿ ತಂತ್ರಜ್ಞಾನ, ಔಷಧಿ ಕಂಪನಿಗಳು, ನಿರ್ಮಾಣ, ತೋಟಗಾರಿಕೆ ಮುಂತಾದ ಎಲ್ಲ ವಲಯಗಳ ಕಾರ್ಮಿಕರ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಸರಕಾರ ದೇಶದ ಸಮಸ್ತ ಕಾರ್ಮಿಕ ಆಂದೋಲನ ಒಂದುಗೂಡಿ ಕನಿಷ್ಟ ಕೂಲಿ, ಸಾಮಾಜಿಕ ಭದ್ರತೆ, ಸ್ಕೀಮ್ ನೌಕರರಿಗೆ ಕಾರ್ಮಿಕರೆಂಬ ಸ್ಥಾನಮಾನ, ಸಂಬಳ-ಸಾರಿಗೆ, ಖಾಸಗೀಕರಣಕ್ಕೆ ಮತ್ತು ಸಾಮೂಹಿಕ ಪ್ರಮಾಣದ ಕಾಂಟ್ರಾಕ್ಟೀಕರಣ-ಕ್ಕೆ ವಿರೋಧ ಮುಂತಾದವುಗಳನ್ನು ಕುರಿತಂತೆ ಮುಂದಿಟ್ಟಿರುವ 12 ಅಂಶಗಳ ಆಗ್ರಹ ಪಟ್ಟಿಯ ಬಗ್ಗೆ ಭಂಡ ಉಪೇಕ್ಷೆಯನ್ನು ಮುಂದುವರೆಸುತ್ತಲೇ ಎಂದು ಈ ಸಮಾವೇಶ ಗಮನಿಸಿತು. ಕೋಟ್ಯಂತರ ಕಾರ್ಮಿಕರು ಹಲವಾರು ರಾಷ್ಟ್ರವ್ಯಾಪಿ ಜಂಟಿ ಮುಷ್ಕರ ಕಾರ್ಯಾಚರಣೆಗಳ ಮೂಲಕ ತಮ್ಮ ಆಗ್ರಹಗಳತ್ತ ಸರಕಾರದ ಗಮನ ಸೆಳೆಯಲು ಪ್ರಯತ್ನಿಸಿದ್ದಾರೆ. ಇದನ್ನು ಪರಿಶೀಲಿಸುವ ಬದಲು ಕೇಂದ್ರದಲ್ಲಿ ಆಳುತ್ತಿರುವವರು ದೇಶದ ದುಡಿಯುವ ಜನಗಳ ಹಕ್ಕುಗಳು ಮತ್ತು ಜೀವನಾಧಾರಗಳ ಮೇಲೆ ಹೆಚ್ಚೆಚ್ಚು ಪ್ರಹಾರಗಳನ್ನು ನಡೆಸುತ್ತಿದ್ದಾರೆ ಎಂಬುದನ್ನೂ ರಾಷ್ಟ್ರೀಯ ಸಮಾವೇಶ ಗಮನಿಸಿತು.

ನಿರುದ್ಯೋಗ ಪರಿಸ್ಥಿತಿ ಉಲ್ಬಣಗೊಳ್ಳುತ್ತಿದೆ, ಹೆಚ್ಚು ಶ್ರಮಶಕ್ತಿ ಬೇಕಾಗುವ ವಲಯಗಳಲ್ಲೂ ಉದ್ಯೋಗಾವಕಾಶ ನಿರ್ಮಾಣ ಹೆಚ್ಚುವ ಬದಲು ಇಳಿಯುತ್ತಿದೆ. ಸರಕಾರ ಕಾರ್ಮಿಕ ಕಾನೂನುಗಳ ಸುಧಾರಣೆಯ ಹೆಸರಲ್ಲಿ ಮಾಲಕರ ಪರವಾದ ಮತ್ತು ಪಕ್ಕಾ ಕಾರ್ಮಿಕ-ವಿರೋಧಿ ಕಾರ್ಯಕ್ರಮವನ್ನು ಆಕ್ರಾಮಕ ರೀತಿಯಲ್ಲಿ ಮುಂದೊತ್ತುತ್ತಿದೆ. ಇತ್ತೀಚಿನ ಇಂತಹ ಪ್ರಹಾರವೆಂದರೆ ಈಗಿರುವ ಶಾಸನಾತ್ಮಕ ಸಾಮಾಜಿಕ ಭದ್ರತಾ ಮೂಲರಚನೆಯನ್ನು ಕಳಚಿ ಹಾಕಿ ಮತ್ತು ಧ್ವಂಸಮಾಡಿ ಒಂದು 'ಸಾಮಾಜಿಕ ಭದ್ರತಾ ಸಂಹಿತೆ'ಯನ್ನು ವಿಕಾಸಗೊಳಿಸಲು ಪ್ರಯತ್ನಿಸುತ್ತಿರುವುದು. ರಕ್ಷಣಾ ಉತ್ಪಾದನೆ, ಸಾರ್ವಜನಿಕ ವಲಯದ ಬ್ಯಾಂಕುಗಳು ಮತ್ತು ವಿಮೆ, ರೈಲ್ವೆ, ಸಾರ್ವಜನಿಕ ರಸ್ತೆ ಸಾರಿಗೆ, ತೈಲ, ವಿದ್ಯುತ್ ಇತ್ಯಾದಿ ಎಲ್ಲ ಆಯಕಟ್ಟಿನ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿನ ಹೂಡಿಕೆಗಳ ಹಿಂಪಡಿಕೆಗಳ ಮೂಲಕ ಖಾಸಗೀಕರಣ, ಆಯಕಟ್ಟಿನ ಮಾರಾಟ, ಖಾಸಗೀ ವಲಯಕ್ಕೆ ಅನುಕೂಲವಾಗುವಂತೆ ಹೊರಗುತ್ತಿಗೆ, ಹಲವು ಆಯಕಟ್ಟಿನ, ಮಹತ್ವದ ವಲಯಗಳಲ್ಲಿ 100% ಎಫ್‌ಡಿಐ ಗೆ ಉತ್ತೇಜನೆ ಇವೆಲ್ಲ ದಿನಗಳೆದಂತೆ ಹೆಚ್ಚುತ್ತ ಹೋಗುತ್ತಿದೆ. ವಿವಿಧ ಶಾಸನಾತ್ಮಕ ಮತ್ತು ಕಾರ್ಯಾಂಗದ ಕ್ರಮಗಳ ಮೂಲಕ ಸಾರ್ವಜನಿಕ ವಲಯದ ಬ್ಯಾಂಕುಗಳ ಮೇಲೆ ದಾಳಿಗಳನ್ನು ನಡೆಸುತ್ತಿದೆ. ಸರಕಾರ ರಸ್ತೆ ಸಾರಿಗೆಯ ಸಾರಾಸಗಟು ಖಾಸಗೀಕರಣಕ್ಕೆ ಅವಕಾಶ ಮಾಡಿಕೊಡುವ ಮೋಟಾರು ವಾಹನ (ತಿದ್ದುಪಡಿ) ಮಸೂದೆ, 2017ನ್ನು ಪ್ರಸಕ್ತ ಸಂಸತ್ ಅಧಿವೇಶನದಲ್ಲಿ ಪಾಸು ಮಾಡಿಸಿಕೊಳ್ಳುವ ತರಾತುರಿಯಲ್ಲಿದೆ ಎಂದು ರಾಷ್ಟ್ರೀಯ ಕಾರ್ಮಿಕ ಸಮಾವೇಶ ಹೇಳಿದೆ.

ರೈತರು ವಿವಿಧ ರಾಜ್ಯಗಳಲ್ಲಿ ಮತ್ತು ರೈತ ಸಂಘಟನೆಗಳ ರಾಷ್ಟ್ರೀಯ ವೇದಿಕೆಗಳ ಅಡಿಯಲ್ಲಿ ಹೋರಾಡುತ್ತಿದ್ದಾರೆ. ಅವರ ಹೋರಾಟಗಳಿಗೆ ರಾಷ್ಟ್ರೀಯ ಕಾರ್ಮಿಕರ ಸಮಾವೇಶ ಸಂಪೂರ್ಣ ಸೌಹಾರ್ದವನ್ನು ವ್ಯಕ್ತಪಡಿಸಿದೆ. ನಮ್ಮ ಸಮಾಜದ ಮೇಲೆ ಕೋಮುವಾದಿ ಮತ್ತು ವಿಭಜನಕಾರಿ ಕುತಂತ್ರಗಳಿಗೆ ಪ್ರಸಕ್ತ ರಾಜಕೀಯ ವ್ಯವಸ್ಥೆಯ ಸರಕಾರೀ ಯಂತ್ರ ಸಕ್ರಿಯ ಪೋಷಣೆ ನೀಡುತ್ತಿದೆ ಎಂದಿರುವ ರಾಷ್ಟ್ರೀಯ ಕಾರ್ಮಿಕ ಸಮಾವೇಶ ಇದನ್ನು ಬಲವಾಗಿ ಖಂಡಿಸಿದೆ.

ಇಂದಿನ ಕಾರ್ಪೊರೇಟ್-ಸ್ನೇಹಿ ಸರಕಾರ ಕಾರ್ಮಿಕ ವರ್ಗ ಮತ್ತು ಒಟ್ಟಾರೆಯಾಗಿ ಶ್ರಮಜೀವಿ ಜನತೆಯ ಹಕ್ಕುಗಳು ಮತ್ತು ಜೀವನಾಧಾರಗಳ ಮೇಲೆ ಹೆಚ್ಚೆಚ್ಚು ಸರ್ವತೋಮುಖ ದಾಳಿಗಳನ್ನು ನಡೆಸುತ್ತಿರುವಂತಹ ಸನ್ನಿವೇಶ ದೇಶದ ಮುಂದಿದೆ ಎಂದಿರುವ ರಾಷ್ಟ್ರೀಯ ಕಾರ್ಮಿಕ ಸಮಾವೇಶ ಈ ಸನ್ನಿವೇಶವನ್ನು ಎದುರಿಸಲು ಈ ಕೆಳಗಿನ ನಿರ್ಧಾರಗಳನ್ನು ಮಾಡಿದೆ:

1. ಆರ್ಥಿಕ ವ್ಯವಸ್ಥೆಯ ಎಲ್ಲ ವಲಯಗಳಲ್ಲಿ ಐಕ್ಯ ಹೋರಾಟಗಳನ್ನು ಸಾಧಿಸುವುದು ಮತ್ತು ತ್ವರಿತಗೊಳಿಸುವುದು. ಇದು ಈಗಾಗಲೇ ಆರಂಭವಾಗಿದೆ.
2. ಬ್ಲಾಕ್/ಜಿಲ್ಲಾ/ಕೈಗಾರಿಕಾ ಕೇಂದ್ರ/ರಾಜ್ಯಮಟ್ಟಗಳಲ್ಲಿ ಬೃಹತ್ ಪ್ರಮಾಣದಲ್ಲಿ ಕಾರ್ಮಿಕರನ್ನು ಅಣಿನೆರೆಸಿ ಪ್ರಚಾರಾಂದೋಲನ ಮತ್ತು ಪೂರ್ವಭಾವಿ ಸಮಾವೇಶಗಳನ್ನು ನಡೆಸುವುದು.
3. ರಾಷ್ಟ್ರೀಯ ರಾಜಧಾನಿಯಲ್ಲಿ ನವಂಬರ್ 9,10 ಮತ್ತು 11 ರಂದು ಮೂರು ದಿನಗಳ ಬೃಹತ್ ಧರಣಿ- ದೇಶದೆಲ್ಲೆಡೆಗಳಿದ ಲಕ್ಷಾಂತರ ಕಾರ್ಮಿಕರು ಇದರಲ್ಲಿ ಭಾಗವಹಿಸುತ್ತಾರೆ.
4. ಸರಕಾರದ ಜನ-ವಿರೋಧಿ, ರಾಷ್ಟ್ರ-ವಿರೋಧಿ ಚಟುವಟಿಕೆಗಳ ವಿರುದ್ಧ ದೇಶವ್ಯಾಪಿ ಅನಿರ್ದಿಷ್ಟ ಅವಧಿಯ ಮುಷ್ಕರ ಕಾರ್ಯಾಚರಣೆಗೆ ಸಿದ್ಧಗೊಳ್ಳುವಂತೆ ದುಡಿಯುವ ಜನಗಳಿಗೆ ಕರೆ.

ಎಲ್ಲ 10 ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಅಧ್ಯಕ್ಷರು/ಪ್ರತಿನಿಧಿಗಳಿದ್ದ ಅಧ್ಯಕ್ಷ ಮಂಡಳಿ ನಡೆಸಿಕೊಟ್ಟ ಸಮಾವೇಶವನ್ನು ಉದ್ದೇಶಿಸಿ ಹಿರಿಯ ಮುಖಂಡರಾದ ಸಿಯುಟಿಯುನ ತಪನ್ ಸೇನ್, ಎಐಟಿಯುಸಿಯ ಅಮರ್‌ಜಿತ್ ಕೌರ್ ಮತ್ತಿತರರು ಮಾತನಾಡಿದರು.

ದೇಶಾದ್ಯಂತ 150ಕ್ಕಿಂತಲೂ ಹೆಚ್ಚು ಜಿಲ್ಲೆಗಳಲ್ಲಿ ರೈತರ ಪ್ರತಿಭಟನೆ

ಭೂಮಿ ಅಧಿಕಾರ್ ಆಂದೋಲನದ ಕರೆಯ ಮೇರೆಗೆ ಆಗಸ್ಟ್ 9ರ ಕ್ವಿಟ್ ಇಂಡಿಯಾ ನೆನಪಿನ ದಿನದಂದು ದೇಶದ 150ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಸಾವಿರಾರು ರೈತರು ಮತಪ್ರದರ್ಶನ, ಧರಣಿ, ಜೈಲ್ ಭರೋಗಳನ್ನು ನಡೆಸಿದ್ದಾರೆ. ಎಲ್ಲ ಬೆಳೆಗಳಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ಲಭ್ಯವಾಗುವಂತೆ ಮಾಡುವ ಕಾನೂನು ತರಬೇಕು ಎಂಬ ಬೇಡಿಕೆ ಸೇರಿದಂತೆ ತಮ್ಮ ಏಳು ಬೇಡಿಕೆಗಳ ಮೇಲೆ ತಮ್ಮ ದೇಶವ್ಯಾಪಿ ಹೋರಾಟದ ಮುಂದಿನ ಹಂತವಾಗಿ ಈ ಪ್ರತಿಭಟನೆಗಳನ್ನು ನಡೆಸಿದ್ದಾರೆ.

ರಾಜಸ್ತಾನದ 15 ಜಿಲ್ಲೆಗಳಲ್ಲಿ ಈ ಪ್ರತಿಭಟನೆ ನಡೆದಿದೆ, ಹಲವೆಡೆಗಳಲ್ಲಿ ರೈತರ ಬಂಧನವಾಗಿದೆ. ಹರ್ಯಾಣದಲ್ಲಿ ರೋಹ್ತಕ್ ಕಮಿಶನರ್ ಕಚೇ-ರಿಯೆದುರು ಪ್ರಾದೇಶಿಕ ಪ್ರತಿಭಟನೆ ನಡೆದಿದೆ. ಶಿಮ್ಲಾದಲ್ಲಿ ಕೇಂದ್ರೀಯ ಪ್ರತಿಭಟನೆಯಲ್ಲಿ ಸಾವಿರಾರು ರೈತರು ಭಾಗವಹಿಸಿದ್ದಾರೆ. ಪಶ್ಚಿಮ ಬಂಗಾಲದ 19 ಜಿಲ್ಲೆಗಳು, ತ್ರಿಪುರಾದ 8 ಜಿಲ್ಲೆಗಳು, ಪಂಜಾಬಿನಲ್ಲಿ 13ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಮತ್ತು ಮಧ್ಯಪ್ರದೇಶದಲ್ಲಿ 13 ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಹೇಳಿದೆ.

ರೇವಾದಲ್ಲಿ ರೈತರು 400 ಜಾನುವಾರು ಗಳೊಂದಿಗೆ ಪ್ರತಿಭಟನೆ ನಡೆಸಿದರು. ಉತ್ತರಪ್ರದೇಶದಲ್ಲೂ 15ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ, ಬಿಹಾರದಲ್ಲಿ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಪ್ರತಿಭಟನಾ ಕಾರ್ಯಕ್ರಮಗಳು ನಡೆದಿವೆ. ಆಂಧ್ರಪ್ರದೇಶದ 15 ಜಿಲ್ಲೆಗಳಲ್ಲಿ ಮತ್ತು ತೆಲಂಗಾಣದ 10 ಜಿಲ್ಲೆಗಳಲ್ಲಿ ಮತ್ತು ಉತ್ತರಾಖಂಡದ 3 ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕರ್ನಾಟಕ, ಒಡಿಶಾ ಮತ್ತಿತರ ಕಡೆಗಳಲ್ಲೂ ಪ್ರತಿಭಟನೆಗಳು ನಡೆದಿವೆ ಎಂದಿರುವ ಎಐಕೆಎಸ್ ಇಡೀ ದೇಶದಲ್ಲಿ ಈ ಯಶಸ್ವೀ ಪ್ರತಿಭಟನೆಗಾಗಿ ರೈತಾಪಿ ಜನಗಳನ್ನು ಅಭಿನಂದಿಸಿದೆ ಹಾಗೂ ಐಕ್ಯತೆಯನ್ನು ಬಲಪಡಿಸಿಕೊಂಡು ಈ ಬೇಡಿಕೆಗಳು ಈಡೇರಿಸಲು ಹೋರಾಟವನ್ನು ಮುಂದುವರೆಸಬೇಕು ಎಂದು ಕರೆ ನೀಡಿದೆ.

ಕೊನೆಗೂ ಹರ್ಯಾಣಾ ಬಿಜೆಪಿ ಅಧ್ಯಕ್ಷರ ಮಗನ ಬಂಧನ, ಜನಾಂದೋಲನಕ್ಕೆ ಮೊದಲ ಜಯ-ಎಐಡಿಡಬ್ಲ್ಯುಎ

ಚಂಡೀಗಢದಲ್ಲಿ ವರ್ಣಿಕಾ ಕುಂಡು ಅವರ ಬೆನ್ನುಬಿದ್ದು ಕಿರುಕುಳ ಕೊಟ್ಟ ಬಿಜೆಪಿಯ ಹರ್ಯಾಣ ಅಧ್ಯಕ್ಷರ ಮಗ ವಿಕಾಸ್ ಬರಾಲಾ ಮತ್ತು ಆತನ ಮಿತ್ರನನ್ನು ಬಂಧಿಸಿ ತಕ್ಷಣವೇ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಕ್ಕೆ ವ್ಯಕ್ತವಾದ ವ್ಯಾಪಕ ಪ್ರತಿಭಟನೆಯ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ಮತ್ತೆ ಬಂಧಿಸಲಾಗಿದೆ. ಇದು ಜನಾಂದೋಲನಕ್ಕೆ ಸಂದ ಜಯ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಹೇಳಿದೆ.

ಪುಟ 14 ನೋಡಿ



ಮುಂಗಾರು ಮಳೆ ವೈಫಲ್ಯದ ಹಿನ್ನೆಲೆಯಲ್ಲಿ ಪ್ರಾಂತ ರೈತ ಸಂಘದ ಒತ್ತಾಯ

ರಾಜ್ಯ ಬರಗಾಲ ಪೀಡಿತ ಎಂದು ಘೋಷಿಸಿ! ಬರ ಪರಿಹಾರಕ್ಕೆ ಕ್ರಮವಹಿಸಿ

ಕರ್ನಾಟಕದಲ್ಲಿ ಮುಂಗಾರು ಮಳೆಯು ಸಂಪೂರ್ಣವಾಗಿ ವಿಫಲವಾಗಿದ್ದು ರಾಜ್ಯವನ್ನು ಮತ್ತೊಂದು ಭೀಕರ ಬರಗಾಲದೆಡೆಗೆ ತಳ್ಳಿದೆ. ಹಿಂದಿನ ವರ್ಷಕ್ಕಿಂತಲೂ ಈ ಭಾರಿ ಹೆಚ್ಚು ಹಾನಿಕಾರಕವಾಗಿದೆ. ಕಳೆದ 46 ವರ್ಷಗಳಲ್ಲಿ ಕಂಡು ಬರದ ಭೀಕರವಾದುದೆಂದು ಹೇಳಲಾಗುತ್ತಿದೆ. ಮಳೆಯಾಶ್ರಿತ ಪ್ರದೇಶದಲ್ಲಿ ಮಾತ್ರವೇ ಅಲ್ಲಾ, ನೀರಾವರಿ ಪ್ರದೇಶದಲ್ಲಿಯೂ ಕೂಡಾ ಮಲನಾಡು ಪ್ರದೇಶದಲ್ಲಿನ ಮಳೆಯ ಕೊರತೆಯಿಂದಾಗಿ, ನದಿಗಳ ಆನೆಕಟ್ಟುಗಳಲ್ಲಿನ ನೀರು ಈ ದಿನದವರೆಗೂ ಲಭ್ಯವಾಗದೇ ಶೇ 90 ಭಾಗ ಬಿತ್ತನೆಯಾಗಿಲ್ಲ. ನದಿಗಳಲ್ಲಿ ನೀರು ಹರಿಯದೇ ಹೋದುದರಿಂದ ನದಿ ನೀರಿನ ಆಶ್ರಯದ ಏತ ನೀರಾವರಿ, ಪಿಕ್–ಅಪ್ ಗಳು ಕಾರ್ಯನಿರ್ವಹಿಸುತ್ತಿಲ್ಲ.

ಕಳೆದ ಅವಧಿಯಲ್ಲಿ ಬತ್ತಿಹೋದ ಬೋರ್‌ವೆಲ್‌ಗಳು, ಬಾವಿಗಳಲ್ಲಿ ಅಂತರ್ಜಲ ಕಂಡು ಬರುತ್ತಿಲ್ಲ. ಬದಲಿಗೆ, ಇರುವವುಗಳು ಕೂಡಾ ಬತ್ತಿ ಹೋಗುತ್ತಿವೆ. ದೊಡ್ಡ ದೊಡ್ಡ ನಗರಗಳು, ಪಟ್ಟಣಗಳ ಕುಡಿಯುವ ನೀರಿನ ಭವಣೆ ಬೆಳೆಯುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ನೀರಿನ ಅಭಾವ ಮತ್ತು ಜಾನುವಾರುಗಳ ಮೇವಿನ ಅಭಾವ ತೀವ್ರಗೊಳ್ಳುತ್ತಿದೆ. ಕೂಲಿಕಾರರು, ರೈತರು, ಕಸುಬುದಾರರು ಕೆಲಸವಿಲ್ಲದೇ ಕಂಗಾಲಾಗಿದ್ದಾರೆ. ಹಲವೆಡೆ ಉದ್ಯೋಗ ಖಾತ್ರಿಯ ಕೆಲಸವು ಇಲ್ಲದೇ, ಕಳೆದ ಭಾರೀ ವಲಸೆ ಹೋದವರಿನ್ನೂ ವಾಪಾಸು ಬರದಿರುವಾಗ, ಮಳೆಯರಾಯನ ಕೃಪೆಗಾಗಿ ಸಲ್ಲಿಸಿದ ಹಲವು ರೀತಿಯ ಪ್ರಾರ್ಥನೆಗಳೂ ಫಲಿಸದಾದಾಗ, ನಿರಾಸೆಯಿಂದ ಮತ್ತಷ್ಟು ಜನರು ಗ್ರಾಮಗಳನ್ನು ತೊರೆದು ನಗರಗಳನ್ನು ಸೇರುವ ಕಡೆ ಮುಖ ಮಾಡುತ್ತಿದ್ದಾರೆ.

ಆರಂಭದಲ್ಲಿ ಮಳೆ ಸುರಿದ ಈಶಾನ್ಯ ಕರ್ನಾಟಕದ ಮೂಲೆಯ ಜಿಲ್ಲೆಗಳಲ್ಲಿ ಬಿತ್ತನೆಯಾದ ಪ್ರದೇಶವು ಕಳೆದ ಒಂದೂವರೆ ತಿಂಗಳಲ್ಲಿ ಅಗತ್ಯ ವಾಡಿಕೆಯ ಮಳೆಯನ್ನು ಕಾಣದೇ ಬೆಳೆಯು ಒಣಗಿ ಆರ್ಥಿಕ ನಷ್ಟವನ್ನು ಉಂಟುಮಾಡಿದೆ.

ರಾಜ್ಯದ ಕಾವೇರಿ, ತುಂಗಭದ್ರ, ಮಲಪ್ರಭಾ, ಘಟಪ್ರಭಾ ಮುಂತಾದ ಬಹುತೇಕ ಆಣೆಕಟ್ಟುಗಳು ಸಮಯಕ್ಕೆ ಅಗತ್ಯವಿರುವಷ್ಟು ಭರ್ತಿಯಾಗದೇ ಇರುವುದರಿಂದ ಕುಡಿಯುವ ನೀರನ್ನು ಉಳಿಸಿಕೊಂಡು ಉಳಿದ ನೀರಿನಲ್ಲಿ ಮುಂದೆ ಮಳೆ ಬರಬಹುದೆಂಬ ನಿರೀಕ್ಷೆಯಿಟ್ಟುಕೊಂಡಿದ್ದರೂ, ಹೆಚ್ಚು ನೀರನ್ನು ಬೇಡುವ ಬೆಳೆಗಳನ್ನು ನಾಟಿ ಮಾಡದಂತೆ ಸರಕಾರ ನೀರಾವರಿ ಪ್ರದೇಶದ ರೈತರಿಗೆ ಮನವಿ ಮಾಡುತ್ತಿದೆ. ಕಾವೇರಿ ಕಣಿವೆಯ ರಾಜ್ಯಗಳ ನಡುವಿ ಸಮಸ್ಯೆ ಮರಳಿ ಉಲ್ಬಣಗೊಳ್ಳುವ ಸಂಭವವಿದೆ.

ಈ ಸ್ಥಿತಿಯಿಂದಾಗಿ, ಒಂದೆಡೆ ತಮ್ಮ ಸಾಲಬಾಧೆಯ ನಿವಾರಣೆಗೆ ಸರಕಾರದಿಂದ ಅಗತ್ಯ ನೆರವು ದೊರೆಯದೇ, ಮತ್ತೊಂದೆಡೆ ಮರಳಿ ಮಳೆಯ ವಿಫಲತೆಯಿಂದಾಗಿ ಸಾಲದ ಮತ್ತು ಬದುಕಿನ ಹೊರೆಯನ್ನಿಳಿಸಿಕೊಳ್ಳಲಾಗದೇ ರೈತರು ಆತ್ಮಹತ್ಯೆಗಳಿಗೆ ತಳ್ಳಲ್ಪಡುತ್ತಿದ್ದಾರೆ. ರಾಜ್ಯ ಸರಕಾರ 50,000 ರೂಗಳ ಸಹಕಾರಿ ಬ್ಯಾಂಕುಗಳ ಸಾಲಮನ್ನಾದ ಘೋಷಣೆಯ ನಂತರವೂ ರೈತರು, ಕೂಲಿಕಾರರ ಆತ್ಮಹತ್ಯೆಗಳು ಹೆಚ್ಚುತ್ತಿವೆ.

ಒಟ್ಟಾರೇ, ಈ ಎಲ್ಲದರ ಪರಿಣಾಮವಾಗಿ ಈ ಭಾರಿ ಕೃಷಿ ಉತ್ಪಾದನೆ ದೊಡ್ಡ ಪ್ರಮಾಣದಲ್ಲಿ ಕುಸಿಯಲಿದೆ. ರೈತರು, ಕೂಲಿಕಾರರು ಮತ್ತು ಕಸುಬುದಾರರು ತಮ್ಮ ಕುಟುಂಬಗಳ ಅಗತ್ಯ ಆದಾಯದಿಂದ ವಂಚಿತರಾಗಲ್ಲಿದ್ದಾರೆ. ಜೀವನೋಪಯಕ್ಕಾಗಿ ಇದ್ದ–ಬದ್ದ ಸಣ್ಣ–ಮುಟ್ಟ ಆಸ್ತಿಗಳನ್ನು ಗ್ರಾಮೀಣ ಶ್ರೀಮಂತರಿಗೆ ಮಾರಾಟ ಮಾಡುವ ಒತ್ತಡಕ್ಕೊಳಗಾಗಿದ್ದಾರೆ. ಈ ಪರಿಸ್ಥಿತಿಯು ದಲಿತರು ಮತ್ತು ಹಿಂದುಳಿದ ವರ್ಗ ಹಾಗೂ ಜನಸಮುದಾಯಗಳು ಮತ್ತು ಮಹಿಳೆಯರು ಮತ್ತಷ್ಟು ದೌರ್ಜನ್ಯವನ್ನು ಎದುರಿಸುವಂತಾಗಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ರಾಜ್ಯದಲ್ಲಿ ಉಂಟಾಗಿರುವ ಈ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇದುವರೆಗೆ ಏನೊಂದು ಕ್ರಮ ಕೈಗೊಳ್ಳದಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ ಬಲವಾಗಿ ಖಂಡಿಸಿದೆ. ಅದೇ ರೀತಿ, ಎರಡೂ ಸರಕಾರಗಳು ಕೂಡಲೇ ರಾಜ್ಯವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಹಾಗೂ ತಕ್ಷಣವೇ ಬರಗಾಲ ಪರಿಹಾರ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು ಅಗತ್ಯ ನೆರವಿನ ಕ್ರಮವಹಿಸಬೇಕೆಂದು ಒತ್ತಾಯಿಸಿದೆ.

ಬೆಳೆನಷ್ಟ – ಉದ್ಯೋಗ ನಷ್ಟ ಪರಿಹಾರ ಒದಗಿಸಿ

ಬರಗಾಲದ ಹಿನ್ನೆಲೆಯಲ್ಲಿ ಉಂಟಾದ ಬೆಳೆಹಾನಿಗೆ ತಲಾ ಎಕರೆಗೆ ಕನಿಷ್ಠ 25,000 ರೂಗಳನ್ನು ನೀಡಬೇಕು ಹಾಗೂ ಉದ್ಯೋಗದ ಹಾನಿಯನ್ನು ತುಂಬಿಕೊಡಲು, ಮುಂಬರುವ ದಿನಗಳಲ್ಲಿ ಬರಗಾಲದ ಹಿನ್ನೆಲೆಯಲ್ಲಿ ವಿಶೇಷವಾಗಿ ಕನಿಷ್ಠ 200 ದಿನಗಳ ಕಾಲ ಉದ್ಯೋಗ ಖಾತ್ರಿ ಕೆಲಸವನ್ನು ಪ್ರತಿಯೊಬ್ಬ ರೈತ–ಕೂಲಿಕಾರ–ಕಸುಬುದಾರರಿಗೆ ಒದಗಿಸಬೇಕು ಇಲ್ಲವೇ ಕನಿಷ್ಠ 25,000 ರೂಗಳನ್ನು ತಲಾ ರೈತ–ಕೂಲಿಕರರಿಗೆ–ಕಸುಬುದಾರರಿಗೆ ನೀಡಬೇಕು.

ನೀರಾವರಿ ಪ್ರದೇಶದ ರೈತರು ಕೂಡಾ ಕನಿಷ್ಠ ಆದಾಯ ನೀಡಬಲ್ಲ ಅಥವಾ ಕಡಿಮೆ ಹಾನಿ ಮಾಡಬಲ್ಲ ಹೆಚ್ಚು ನೀರನ್ನು ಬೇಡುವ ವಾಣಿಜ್ಯ ಬೆಳೆಗಳಾದ ಭತ್ತ, ಕಬ್ಬು, ಹತ್ತಿ, ಮೆಣಸಿನಕಾಯಿ ಮುಂತಾಗಿ, ನೀರಿನ ಅಭಾವದಿಂದ ಬೆಳೆಯಲಾಗದೆಂದು ಸರಕಾರ ಹೇಳಿದಲ್ಲಿ, ಕಡಿಮೆ ನೀರನ್ನು ಬೇಡುವ ಜೋಳ, ರಾಗಿ, ಸಜ್ಜೆ, ನವಣೆ, ಅಕ್ಕಡಿಕಾಳು ಮುಂತಾದ ಬೆಳೆಗಳನ್ನು ಬೆಳೆಯುವುದೇ ಆದಲ್ಲಿ, ಈ ಬೆಳೆಗಳ ಬದಲಾವಣೆಯಿಂದುಂಟಾಗುವ ಆದಾಯದ ವ್ಯತ್ಯಾಸದ ಹಾನಿಯನ್ನು ಸರಕಾರಗಳು ತುಂಬಿಕೊಡಬೇಕು. ನೀರಿನ ಕೊರತೆಯಿಂದಾಗಿ ನೀರಾವರಿ ಪ್ರದೇಶದ ಕಾಲುವೆ ಮುಂಭಾಗ ಮತ್ತು ಕೊನೆ ಭಾಗದ ರೈತರ ನಡುವೆ ನೀರಿಗಾಗಿ ಸ್ಪರ್ಧೆ ಏರ್ಪಟ್ಟು ಕೊನೆ ಭಾಗದ ರೈತರಿಗೆ ನೀರು ದೊರೆಯದೆ ಉಂಟಾಗುವ ಬೆಳೆ ಹಾನಿಯನ್ನು ತುಂಬಿಕೊಡಬೇಕು.

ಅದೇ ರೀತಿ, ನಿರಂತರವಾಗುತ್ತಿರುವ ಬರಗಾಲಗಳ ಹಿನ್ನೆಲೆಯಲ್ಲಿ, ರೈತರು, ಕೂಲಿಕಾರರು, ಕಸುಬುದಾರರ ಖಾಸಗಿ ಹಾಗೂ ಸಾಂಸ್ಥಿಕ ಸಾಲವು ಸೇರಿದಂತೆ ಎಲ್ಲ ಸಾಲವನ್ನು ಮನ್ನಾ ಮಾಡಬೇಕು. ದಲಿತರು, ಹಿಂದುಳಿದ ವರ್ಗದ ಜನರು ಪಡೆದ ಎಲ್ಲ ಇಲಾಖಾವಾರು ಸಹಾಯಧನದೊಂದಿಗೆ ಪಡೆದ ಎಲ್ಲ ಸಾಲವನ್ನು ಮನ್ನಾ ಮಾಡಬೇಕು. ಸ್ತ್ರೀಶಕ್ತಿ/ಸ್ವಶಕ್ತಿ ಸಂಘಗಳಿಂದ ಪಡೆದ ಮಹಿಳೆಯರೆಲ್ಲರ ಸಾಲವನ್ನು ಮನ್ನಾ ಮಾಡಬೇಕು. ಶಾಲಾ/ಕಾಲೇಜುಗಳ ಉನ್ನತ ವ್ಯಾಸಂಗದ ಶುಲ್ಕಗಳನ್ನು ಮತ್ತು ಉನ್ನತ ವ್ಯಾಸಂಗದ ಖಾಸಗೀ ಹಾಸ್ಟೆಲ್‌ಗಳ ಬಿಲ್‌ಗಳನ್ನು ಸರಕಾರಗಳು ವಹಿಸಿಕೊಳ್ಳಬೇಕು. ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತವಾಗಿ ಬಸ್ ಪಾಸ್‌ಗಳನ್ನು ನೀಡಬೇಕು.

ಬರಗಾಲ ನಿವಾರಣೆಯಾಗುವವರೆಗೆ, ಗ್ರಾಮಗಳ ಎಲ್ಲಾ ಬಡವರಿಗೆ ಉಚಿತವಾಗಿ ಅಗತ್ಯವಾದ ಎಲ್ಲಾ ಪಡಿತರ/ರೇಷನ್ನನ್ನು ಒದಗಿಸಬೇಕು ಮತ್ತು ರಾತ್ರಿ ವೇಳೆಯಲ್ಲೂ ಅಂಗನವಾಡಿ ಮತ್ತು ಪಾಠಶಾಲೆಗಳಲ್ಲಿ ಬಿಸಿಯೂಟ ನೀಡುವುದಕ್ಕೆ ಕ್ರಮವಹಿಸಬೇಕು. ●

ಕರಾವಳಿ ಕಡೆ

ಕಾವ್ಯ ಸಾವು ನ್ಯಾಯವೇ? – ಇಡೀ ಮಂಗಳೂರು ಎದ್ದು ಬಂದಾಗ



ಕಾವ್ಯ ಅಸಹಜ ಸಾವನ್ನು ಮುಚ್ಚಿ ಹಾಕಲು ಮತ್ತು ಪ್ರಭಾವಿ ಆಳ್ವಾಸ್ ಕುಟುಂಬದ ಸಾಮ್ರಾಜ್ಯವನ್ನು ರಕ್ಷಿಸಲು ಪೋಲಿಸ್ ಮತ್ತು ಆಡಳಿತ ಪ್ರಯತ್ನಿಸುತ್ತಿದೆ. ಈಗಾಗಲೇ ಸಾಕ್ಷ್ಯ ನಾಶ ಮಾಡಲಾಗಿದೆ. ಅಲ್ಲದೆ ಬಹಿರಂಗ ಗುಟ್ಟಾಗಿದ್ದ ಆಳ್ವಾಸ್ ಸಾಮ್ರಾಜ್ಯದ ದಬ್ಬಾಳಿಕೆ ಅಕ್ರಮಗಳು ಬಯಲಿಗೆ ಬರಲಾರಂಭಿಸಿದ್ದವು. ಮಂಗಳೂರು ಖಈಖ ಜಿಲ್ಲಾಧ ನಿತಿನ್ ಕುತ್ತಾರ್ ಮಾಹಿತಿ ಹಕ್ಕು ಅಧಿನಿಯಮ 2005ರಂತೆ ಅರ್ಜಿ ಸಲ್ಲಿಸಿ, ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ 2006ರಿಂದ 2016ರವರೆಗೆ ನಡೆದಿರುವ ಅಸಹಜ ಸಾವು, ಆತ್ಮಹತ್ಯೆ, ಆತ್ಮಹತ್ಯೆ ಯತ್ನ ಪ್ರಕರಣಗಳ ವಿವರಗಳನ್ನು ಕೋರಿದ್ದರು. ಇದೀಗ ಮಾಹಿತಿ ಈಗ ಹೊರಬಿದ್ದಿದೆ. ಇದರಿಂದ ಆಕ್ರೋಶಕ್ಕೆ ಒಳಗಾದ ಮಂಗಳೂರು ಜನತೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಸ್ವಯಂಸ್ಫೂರ್ತರಾಗಿ ಆಗಸ್ಟ್ 9ರಂದು ಜಮಾಯಿಸಿದರು. ಕಾವ್ಯ ತಾಯಿ ಬೇಬಿ ಪೂಜಾರಿ ಅವರ ಗೋಳು ಮತ್ತು ಆಕ್ರೋಶ ಯಾರನ್ನಾದರೂ ಕರಗಿಸುವಂತಿತ್ತು. ಆಡಳಿತವನ್ನು ನಡುಗಿಸುವಂತಿತ್ತು. ಬಹುಶಃ ಇಂತಹ ಭಾರೀ ಸ್ವಯಂಸ್ಫೂರ್ತರಾಗಿ ಜನ ಜಮಾಯಿಸಿದ್ದು ಚಾರಿತ್ರಿಕ ಇರಬೇಕು.

ಈ ಆಕ್ರೋಶ ಕಂಡು ಆಡಳಿತದಿಂದ ಕೆಲವು ಕ್ರಮಗಳನ್ನು ಕೈಗೊಳ್ಳಲಾರಂಭಿಸಿದೆ. ಆಗಸ್ಟ್ 1ರಂದು ವಿಎಸ್ ಉಗ್ರಪ್ಪ ಮುಂದಾಳುತ್ವದ ಮಹಿಳೆ ಮತ್ತು ಮಕ್ಕಳ ಮೇಲಿನ ಶೋಷಣೆ, ದೌರ್ಜನ್ಯ, ಅತ್ಯಾಚಾರ ನಿಯಂತ್ರಣ ಸಮಿತಿ ಮುಂದಿಟ್ಟಿದ್ದ ಪ್ರಶ್ನೆಗಳು ಮಂಗಳೂರು ಜಿಲ್ಲಾಡಳಿತಕ್ಕೆ ಚುರುಕು ಮುಟ್ಟಿಸಿವೆ. ಆಳ್ವಾಸ್ ಶಿಕ್ಷಣ ಸಂಸ್ಥೆಯ ಕಟ್ಟಡ, ವಸತಿ ನಿಲಯ ಅಕ್ರಮ ಮೊದಲಾದ ಅವ್ಯವಹಾರಗಳ ಕುರಿತು ಎದ್ದಿರುವ ಪ್ರಶ್ನೆಗಳ ಸಮಗ್ರ ತನಿಖೆಗೆ ಆರು ಸಮಿತಿಗಳನ್ನು ರಚಿಸಿರುವ ಜಿಲ್ಲಾಡಳಿತ ಒಂದು ತಿಂಗಳ ಒಳಗಾಗಿ ವರದಿ ಸಲ್ಲಿಸುವಂತೆ ಆದೇಶ ನೀಡಿದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಅಸಹಜ ಸಾವುಗಳು ಸಂಭವಿಸುತ್ತಿದ್ದು, ಈ ಕುರಿತಂತೆ ಸಮಗ್ರ ಅಧ್ಯಯನಕ್ಕಾಗಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏರುಪೇರಾಗುತ್ತಿರುವ ಲಿಂಗಾನುಪಾತದ ಕುರಿತು ವೈಜ್ಞಾನಿಕ ಕಾರಣಗಳ ಅನ್ವೇಷಣೆಗಾಗಿಯೂ ಎರಡು ಪ್ರತ್ಯೇಕ ಸಮಿತಿಗಳನ್ನು ರಚಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಸಮಿತಿಯ ವರದಿಗಳು ಆಳ್ವಾಸ್ ಬುಡವನ್ನೇ ಅಲ್ಲಾಡಿಸುವ ಎಲ್ಲ ಸೂಚನೆಗಳೂ ಇವೆ. ಕಾವ್ಯಾ ಪೂಜಾರಿ ನಿಗೂಢ ಸಾವನ್ನು ಆಳ್ವಾಸ್ ವಿರುದ್ಧ ಪಿತೂರಿ ನಡೆಸಲು ಬಳಸಿಕೊಳ್ಳುತ್ತಿದ್ದಾರೆಂದು ಅವಕಾಶವಾದಿ ರಾಜಕಾರಣಿಗಳು, ವಾಚಾಳಿ ಭಾಷಣಕಾರರು ಸೇರಿದಂತೆ ಕೆಲವರು ಹುಯಿಲಿಡುತ್ತಿದ್ದಾರೆ. ಕಟ್ಟಡದಿಂದ ಹಿಡಿದು ಚಿಕ್ಕಪುಟ್ಟ ಸುರಕ್ಷಾಕ್ರಮಗಳ ವರೆಗೂ ಯಾವುದೇ ನಿಯಮ ಪಾಲಿಸದೆ ತನ್ನದೇ 'ರಿಪಬ್ಲಿಕ್' ಸ್ಥಾಪಿಸಿಕೊಂಡು ಮೆರೆಯುತ್ತಿರುವ ಆಳ್ವಾಸ್ ಅಕ್ರಮಗಳು ಸ್ಪಷ್ಟ ಕಾನೂನು ಉಲ್ಲಂಘನೆಯಾಗಿದೆ ಎಂದು ಇದೀಗ ಸಾಬೀತಾಗುತ್ತಿದೆ.



ಅರ್ಜಿ ವಿಲೇವಾರಿ ಗೊಂದಲ ಸೃಷ್ಟಿಸಿದ ಕಾರ್ಮಿಕ ಇಲಾಖೆ



ದ.ಕ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರು ವಿವಿಧ ಸವಲತ್ತುಗಳಿಗಾಗಿ ಸಲ್ಲಿಸಿದ ಅರ್ಜಿಗಳ ವಿಲೇವಾರಿ ಮಾಡುವಲ್ಲಿ ಕಾರ್ಮಿಕ ಇಲಾಖೆ ಸಾಕಷ್ಟು ಗೊಂದಲ ಸೃಷ್ಟಿಸಿದ್ದು ಹಾಗೂ ಅದು ತೋರಿಸುತ್ತಿರುವ ನಿರ್ಲಕ್ಷ್ಯತನವನ್ನು ಖಂಡಿಸಿ 07 ಅಗಸ್ಟ್ 2017 ಸಿಐಟಿಯು ನೇತೃತ್ವದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮಂಗಳೂರಿನಲ್ಲಿರುವ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯೆದುರು ಬೃಹತ್ ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಸಾವಿರಕ್ಕೂ ಮಿಕ್ಕಿದ ಕಟ್ಟಡ ಕಾರ್ಮಿಕರು, "ಅರ್ಜಿಗಳ ವಿಲೇವಾರಿ ಮಾಡಲೇಬೇಕು, ಕಟ್ಟಡ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲೇಬೇಕು" ಎಂಬಿತ್ಯಾದಿ ಘೋಷಣೆಗಳನ್ನು ಕೂಗುತ್ತಾ ಕಾರ್ಮಿಕ ಇಲಾಖೆಯ ಬೇಜವಾಬ್ದಾರಿತನವನ್ನು ಖಂಡಿಸಿದರು. ಪ್ರತಿಭಟನಾ ಪ್ರದರ್ಶನವನ್ನು ಉದ್ಘಾಟಿಸಿದ ಕಟ್ಟಡ ಕಾರ್ಮಿಕ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ್‌ರವರು ಮಾತನಾಡುತ್ತಾ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಇದುವರೆಗೆ ಸುಮಾರು 12 ಲಕ್ಷದಷ್ಟು ಕಾರ್ಮಿಕರು ನೊಂದಾವಣೆಯಾಗಿದ್ದು ಈಗಾಗಲೇ 5600 ಕೋಟಿ ರೂಪಾಯಿಯಷ್ಟು ಹಣ ಸಂಗ್ರಹವಾಗಿದೆ. ಅದರಲ್ಲಿ ಕಳೆದ 11 ವರ್ಷಗಳಲ್ಲಿ ಕಟ್ಟಡ ಕಾರ್ಮಿಕರಿಗಾಗಿ ಖರ್ಚು ಮಾಡಿದ್ದು ಕೇವಲ 171 ಕೋಟಿ ರೂಪಾಯಿ ಮಾತ್ರ. ದೀರ್ಘ ಕಾಲದ ಹೋರಾಟ ನಡೆದು ಕಲ್ಯಾಣ ಮಂಡಳಿ ರಚನೆಯಾಗಿ 12 ಬಗೆಯ ಸವಲತ್ತುಗಳು ಜಾರಿಗೊಂಡಿದ್ದರೂ ಅವುಗಳನ್ನು ಕಟ್ಟಡ ಕಾರ್ಮಿಕರಿಗೆ ಸಿಗುವಲ್ಲಿ ಸಿಐಟಿಯು ಅವಿರತ ಪ್ರಯತ್ನ ನಡೆಸುತ್ತಿದ್ದರೆ, ಕಾರ್ಮಿಕ ಇಲಾಖೆಯು ಮಾತ್ರ ಕಟ್ಟಡ ಕಾರ್ಮಿಕರಿಗೆ ಸವಲತ್ತು ಸಿಗದ ರೀತಿಯಲ್ಲಿ ಹತಾಶ ಪ್ರಯತ್ನ ನಡೆಸುತ್ತಿದೆ. ಮಾತ್ರವಲ್ಲದೆ ವಿನಾ ಕಾರಣ ಕಿರುಕುಳ ನೀಡಿ ಕಟ್ಟಡ ಕಾರ್ಮಿಕರನ್ನು ಸತಾಯಿಸಲಾಗುತ್ತಿದೆ. ಮದುವೆ, ಮರಣ ಹಾಗೂ ಮಕ್ಕಳ ಸ್ಕಾಲರ್‌ಶಿಪ್‌ಗೆ ಸಂಬಂಧಿಸಿದ ಅರ್ಜಿಗಳನ್ನು ದುರುದ್ದೇಶದಿಂದಲೇ ರದ್ದುಪಡಿಸಿ ಕಾರ್ಮಿಕರನ್ನು ಸಂಕಷ್ಟಕ್ಕೊಳಪಡಿಸಿದೆ. ಮತ್ತೊಂದು ಕಡೆಯಲ್ಲಿ ರಾಜ್ಯ ಸರಕಾರವೂ ಕೂಡ ಮಂಡಳಿಯಲ್ಲಿ ಜಮಾವಣೆಗೊಂಡ ಹಣದ ಮೇಲೆ ಕಣ್ಣಿಟ್ಟಿದ್ದು ಅದನ್ನು ದುರುಪಯೋಗಪಡಿಸಲು ಹೊಂಚು ಹಾಕುತ್ತಿದೆ. ಇದನ್ನು ಮಟ್ಟ ಹಾಕಲು ಹಾಗೂ ಕಟ್ಟಡ ಕಾರ್ಮಿಕರ ಪರವಾದ ನೀತಿಗಳನ್ನು ಜಾರಿಗೊಳಿಸಲು ಸಂಘಟಿತ ಹೋರಾಟವನ್ನು ರೂಪಿಸಲು ಕಂಕಣ ಬದ್ಧರಾಗಿ ದುಡಿಯಬೇಕೆಂದು ಕರೆ ನೀಡಿದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತನಾಡುತ್ತಾ, ಕಲ್ಯಾಣ ಮಂಡಳಿಯಲ್ಲಿ ದ.ಕ ಜಿಲ್ಲೆಯಲ್ಲಿ ಸುಮಾರು 45 ಸಾವಿರದಷ್ಟು ನೊಂದಾವಣೆಯಾಗಿದ್ದರೂ ಅದರಲ್ಲಿ ಅರ್ಧದಷ್ಟು ಸದಸ್ಯತ್ವ ಭೋಗಸ್ ಆಗಿರುತ್ತದೆ. ಇಂತಹವರು ಕಲ್ಯಾಣ ಮಂಡಳಿಯಿಂದ ಬಹಳ ಸುಲಭವಾಗಿ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಇದರಲ್ಲಿ ಕಾರ್ಮಿಕ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಶಾಮೀಲಾತಿ ಎದ್ದು ಕಾಣುತ್ತಿದೆ. ಆದರೆ ಪ್ರಾಮಾಣಿಕವಾಗಿ ದುಡಿಯುವ ಕಟ್ಟಡ ಕಾರ್ಮಿಕರ ಅರ್ಜಿಗಳಲ್ಲಿ ಸಣ್ಣಪುಟ್ಟ ದೋಷಗಳೊಂದಿಗೆ ಎತ್ತಿತೋರಿಸುವ ಮೂಲಕ ತಿರಸ್ಕರಿಸಲಾಗುತ್ತಿದೆ. ಮಾತ್ರವಲ್ಲದೆ ಕಲ್ಯಾಣ ಮಂಡಳಿಯ ನಿರ್ದೇಶನಗಳನ್ನು ಗಾಳಿಗೆ ತೂರಿ ಹೆಚ್ಚುವರಿ ದಾಖಲೆಗಳನ್ನು ಕೇಳುವ ಮೂಲಕ ಸವಲತ್ತುಗಳನ್ನು ಸಿಗದಂತೆ ಮಾಡುವಲ್ಲಿ ವ್ಯವಸ್ಥಿತ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು.

ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾಧ್ಯಕ್ಷರಾದ ಸುನಿಲ್ ಕುಮಾರ್ ಬಜಾಲ್‌ರವರು ಮಾತನಾಡುತ್ತಾ, ಕಳೆದ ನಾಲ್ಕೈದು ವರ್ಷಗಳಿಂದ ಕಟ್ಟಡ ಕಾರ್ಮಿಕರು ಇಲಾಖೆಯಲ್ಲಿನ ಲೋಪದೋಷಗಳ ವಿರುದ್ಧ ಧ್ವನಿ ಎತ್ತುತ್ತಿದ್ದು, ಇಲ್ಲಿಯವರೆಗೆ ಪರಿಹಾರ ಸಿಗಲಿಲ್ಲ. ಕಳೆದ ವರ್ಷ ಮಾನ್ಯ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಎ. ಬಿ. ಇಬ್ರಾಹಿಂರವರು ಕಾರ್ಮಿಕ ಮುಖಂಡರು ಹಾಗೂ ಕಾರ್ಮಿಕ ಅಧಿಕಾರಿಗಳೊಂದಿಗೆ ಜಂಟಿ ಸಭೆ ನಡೆಸಿ ಯಾವುದೇ ಕಾರಣಕ್ಕೂ ಅರ್ಜಿಗಳನ್ನು ತಿರಸ್ಕರಿಸಬಾರದು, ಒಂದು ತಿಂಗಳ ಕಾಲಾವಕಾಶ ನೀಡಬೇಕು, ತಿಂಗಳಿಗೊಮ್ಮೆ ಕಾರ್ಮಿಕ ಅದಾಲತ್ ನಡೆಸಬೇಕು ಎಂದು ತಾಕೀತು ಮಾಡಿದರೂ ಅದೆಲ್ಲವನ್ನು ನಿರ್ಲಕ್ಷಿಸಲಾಗಿದೆ. ಜಿಲ್ಲಾಧಿಕಾರಿಗಳನ್ನು, ಕಲ್ಯಾಣ ಮಂಡಳಿಯನ್ನು ಹಾಗೂ ರಾಜ್ಯ ಸರಕಾರದ ನಿರ್ದೇಶನಗಳನ್ನು ಜಾರಿ ಮಾಡದೆ ತನಗೆ ಮನ ಬಂದಂತೆ ದಿನಕ್ಕೊಂದು ತೀರ್ಮಾನ ಮಾಡುವ ಸಿಬ್ಬಂದಿಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ತೀಕ್ಷ ರೀತಿಯ ಹೋರಾಟ ನಡೆಸಬೇಕಾದೀತು ಎಂದು ಎಚ್ಚರಿಕೆ ನೀಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರುರವರು ಕಾರ್ಮಿಕ ಇಲಾಖೆಯ ಅವ್ಯವಸ್ಥೆಯನ್ನು ಎಳೆಎಳೆಯಾಗಿ ವಿವರಿಸುತ್ತಾ, ಸರಕಾರಿ ಸೌಲಭ್ಯಗಳಿಗೆ ಆಧಾರ್ ಕಾರ್ಡ್ ಕಡ್ಡಾಯ ಮಾಡಬಾರದು ಎಂಬ ಸುಪ್ರೀಂ ಕೋರ್ಟ್ ನಿರ್ದೇಶನವಿದ್ದರೂ ಮಂಡಳಿಯ ಎಲ್ಲಾ ಸೌಲಭ್ಯಗಳಿಗೂ ಅದನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದಾಗಿ ಕಳೆದ 10 ವರ್ಷಗಳಿಂದ ನೊಂದಾವಣೆಗೊಂಡಿರುವ ಅನಕ್ಷರಸ್ಥ ಕಾರ್ಮಿಕರು ಎಲ್ಲಾ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಮದುವೆ ಹಾಗೂ ಪ್ರಮುಖ ವೈದ್ಯಕೀಯ ಸಹಾಯ ಧನಕ್ಕಾಗಿ ಅರ್ಜಿ ಸಲ್ಲಿಸಿ 2 ವರ್ಷ ಕಳೆದರೂ ವಿಲೇವಾರಿ ಆಗಿರುವುದಿಲ್ಲ ಎಂದು ಹೇಳಿದರು. ಬಳಿಕ ಜಿಲ್ಲಾ ಮಟ್ಟದ ನಿಯೋಗವೊಂದು ಕಾರ್ಮಿಕ ಅಧಿಕಾರಿಗಳನ್ನು ಭೇಟಿಯಾಗಿ ಮನವಿಯನ್ನು ಅರ್ಪಿಸಿ ಸುಮಾರು ಒಂದು ಗಂಟೆಗಳ ಕಾಲ ಚರ್ಚಿಸಿ ಬೇಡಿಕೆಗಳನ್ನು ಕೂಡಲೇ ಇತ್ಯರ್ಥಗೊಳಿಸುವ ಬಗ್ಗೆ ಭರವಸೆ ನೀಡಿದರು.

ಹೋರಾಟದ ನೇತೃತ್ವವನ್ನು ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾ ಮುಖಂಡರಾದ ರವಿಚಂದ್ರ ಕೊಂಚಾಡಿ, ಸಂತೋಷ್ ಶಕ್ತಿನಗರ, ಜಯಂತ ನಾಯ್ಕ್, ಕೆ. ಪಿ. ಜೋನಿ, ವಸಂತಿ ಕುಪ್ಪೆಪದವು, ಪ್ರೇಮನಾಥ್ ಜಲ್ಲಿಗುಡ್ಡೆ, ಶಿವರಾಮ್ ಗೌಡ, ಬಿಜು ಅಗಸ್ಟಿನ್, ಶಂಕರ ಮೂಡಬಿದ್ರಿ, ವಸಂತ ನಡ, ರಾಮಣ್ಣ ವಿಟ್ಲ, ಸೀತಾರಾಮ್ ಶೆಟ್ಟಿ, ಜನಾರ್ಧನ ಕುತ್ತಾರ್ ಮುಂತಾದವರು ವಹಿಸಿದ್ದರು.

– ಯೋಗೀಶ್ ಜಪ್ಪಿನಮೊಗರು







ಆಗಸ್ಟ್ 14ರ ಸಂಜೆ 6 ರಿಂದ ಆಗಸ್ಟ್ 15ರ ಬೆಳಗ್ಗೆ 6ರವರೆಗೆ

'ದುಡಿಯುವ ಜನರ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ'

ಕಾರ್ಮಿಕರಿಗೆ ಖಾಯಂ ಕೆಲಸ, ನ್ಯಾಯಯುತ ಸಮಾನ ಕನಿಷ್ಟ ವೇತನ, ಸಾಮಾಜಿಕ ಭದ್ರತೆಗಾಗಿ; ರೈತರ ಬೆಳೆಗಳಿಗೆ ನ್ಯಾಯಯುತ ಸಾಮಾನ್ಯ ಕನಿಷ್ಟ ಬೆಂಬಲ ಬೆಲೆ, ಸಂಪೂರ್ಣ ಸಾಲ ಮನ್ನಕ್ಕಾಗಿ; ದುಡಿಯುವ ಜನರ ಹಕ್ಕುಗಳಾದ ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ, ಸಾರಿಗೆ, ಸಂಪರ್ಕದಂತಹ ಮೂಲಭೂತ ಅವಶ್ಯಕತೆಗಳಿಗಾಗಿ; ಅಸ್ಪೃಶ್ಯತೆ, ಜಾತಿವಾದ, ಕೋಮುವಾದ, ಉಗ್ರವಾದ ಮತ್ತು ಭ್ರಷ್ಟಾಚಾರ ವಿರೋಧಿಸಿ; ಮಹಿಳೆಯರ, ದಲಿತರ, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯದ ವಿರುದ್ಧ; ದೇಶದ ಸಾರ್ವಜನಿಕ ಉದ್ದಿಮೆ–ಆಸ್ತಿಯ ರಕ್ಷಣೆಗಾಗಿ; ನೀರು, ಭೂಮಿ, ಪರಿಸರ, ದೇಶದ ಉಳಿವಿಗಾಗಿ; ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಗಣತಂತ್ರದ ರಕ್ಷಣೆಗಾಗಿ; ದಮನರಹಿತ, ಶೋಷಣಾರಹಿತ, ತಾರತಮ್ಯರಹಿತ, ಸಮಾನ ಹಕ್ಕುಗಳ, ಸಮಾನ ಅವಕಾಶಗಳ, ಗೌರವ–ಘನತೆಯುಕ್ತ ಬದುಕಿನ ಸರ್ವತಂತ್ರ–ಸ್ವಾತಂತ್ರ್ಯ ಭಾರತಕ್ಕಾಗಿ ಹಾಗೂ ಸಂವಿಧಾನದ ಉಳಿವಿಗಾಗಿ, ದುಡಿಯುವ ಜನರ ಹಕ್ಕುಗಳ ರಕ್ಷಣೆಗಾಗಿ ತಾಲ್ಲೂಕು ಕೇಂದ್ರಗಳಲ್ಲಿ ಆಗಸ್ಟ್ 14ರ ಸೋಮವಾರ ಸಂಜೆ 6 ಗಂಟೆಯಿಂದ ಆಗಸ್ಟ್ 15 ಬೆಳಗ್ಗೆ 6 ಗಂಟೆಯವರೆಗೆ 'ದುಡಿಯುವ ಜನರ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ' ನಡೆಯಲಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 70 ವರ್ಷಗಳು ಕಳೆಯುತ್ತಿವೆ. ಕಳೆದ ಎಪ್ಪತ್ತು ವರ್ಷಗಳ ಅವಧಿಯಲ್ಲಿ ಸ್ವಾತಂತ್ರ್ಯೋತ್ತರ ಭಾರತದಲ್ಲಿ ದೇಶದ ಸ್ವಾತಂತ್ರ್ಯ ಚಳುವಳಿಯ ಆಶೋತ್ತರಗಳು ಹಾಗೂ ಭರವಸೆಗಳು ಈಡೇರದೇ ಹಾಗೇ ಉಳಿದಿವೆ. ದೇಶದ ಸಾಮಾನ್ಯ ಜನರಿಗೆ 70 ವರ್ಷಗಳ ನಂತರವೂ ಆಹಾರ, ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ, ಸಾರಿಗೆ, ಸಂಪರ್ಕ ಮುಂತಾದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಕಾರಣ ದೇಶದ ಸಂವಿಧಾನದ ಆಶಯವಾದ 'ಜನರ ಕಲ್ಯಾಣ ರಾಜ್ಯ'ದ ಪರಿಕಲ್ಪನೆಯಿಂದ ಆಳುವ ಸರ್ಕಾರಗಳು ದೂರ ಸರಿದು ಲಾಭಕೋರ ಲೂಟಿಕೋರ ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ಪರವಾಗಿ ನೀತಿಗಳನ್ನು ಜಾರಿಮಾಡಿದ ಪರಿಣಾಮವಾಗಿದೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ನಾಯಕತ್ವದಲ್ಲಿ ರಚಿಸಿದ ಸಂವಿಧಾನ ದೇಶದ ಎಲ್ಲಾ ಜನವಿಭಾಗಗಳು ಭಾಗವಹಿಸಿದ ಸ್ವಾತಂತ್ರ್ಯ ಹೋರಾಟದ ಹಲವು ಆಶಯಗಳನ್ನು ಒಳಗೊಂಡಿದೆ. ಆದರೆ ಈ ಸಂವಿಧಾನ ರೂಪಿಸಿ ಬೆಳೆಸಿದ ಹಲವು ಪ್ರಜಾಸತ್ತಾತ್ಮಕ ಸಂಸ್ಥೆಗಳು, ಆಚರಣೆಗಳು, ಸಂಪ್ರದಾಯಗಳ ಮೇಲೆ, ಇತ್ತೀಚಿನ ವರ್ಷಗಳಲ್ಲಿ 1990ರ ದಶಕದಲ್ಲಿ ಆರಂಭವಾದ ಆಳುವ ವರ್ಗಗಳ ನವ–ಉದಾರವಾದಿ ಧೋರಣೆಗಳ ಹಿನ್ನೆಲೆಯಲ್ಲಿ ತೀವ್ರ ದಾಳಿಗಳು ನಡೆಯುತ್ತಿವೆ. ನರೇಂದ್ರ ಮೋದಿ ನಾಯಕತ್ವದ ಬಿಜೆಪಿ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಆಳ್ವಿಕೆಯಲ್ಲಿ ದೇಶದ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯ ವ್ಯವಸ್ಥೆಯ ಮೇಲೆ ಈ ದಾಳಿಗಳು ತೀವ್ರವಾಗಿವೆ. ನರೇಂದ್ರ ಮೋದಿ ಇಸ್ರೇಲ್ ದೇಶಕ್ಕೆ ಬೇಟಿ ನೀಡುವ ಮುಖಾಂತರ ಭಾರತ ಇದುವರೆಗೂ ಅನುಸರಿಸಿಕೊಂಡು ಬಂದಿದ್ದ 'ಅಲಿಪ್ತ ವಿದೇಶಾಂಗ ನೀತಿ'ಗೆ ತಿಲಾಂಜಲಿ ನೀಡಲಾಗಿದೆ. ಭಾರತದ ವಿದೇಶಾಂಗ ನೀತಿ, ಮಿಲಿಟರಿ ನೀತಿ ಹಾಗೂ ಆರ್ಥಿಕನೀತಿಗಳನ್ನು ಹಿಂದೆಂದಿಗಿಂತಲೂ ಅಮೇರಿಕಾ ಮತ್ತು ಸಾಮ್ರಾಜ್ಯಶಾಹಿ ದೇಶಗಳ ಅಡಿಯಾಳಾಗಿ ರೂಪಿಸಲಾಗುತ್ತಿದೆ ಇದರಿಂದಾಗಿ ದೇಶದ ಸಾರ್ವಭೌಮತೆಯನ್ನು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಒತ್ತೆಯಿಡಲಾಗುತ್ತಿದೆ.

ಆತ್ಮಹತ್ಯೆಯ ಸುಳಿಗೆ ಸಿಲುಕಿರುವ ರೈತರ ಸಾಲ ಮನ್ನಾ ಮಾಡಲು ಹಾಗೂ ರೈತರ ಬೆಳೆಗಳಿಗೆ ನ್ಯಾಯಯುತ ಸಾಮಾನ್ಯ ಕನಿಷ್ಟ ಬೆಂಬಲ ಬೆಲೆ ನೀಡಲು ಸಾಧ್ಯವಿಲ್ಲ ಎನ್ನುವ ಮೋದಿ ಸರ್ಕಾರ ಕೆಲವೇ ಕೆಲವು ಶ್ರೀಮಂತ ಉದ್ಯಮಿಗಳಿಗೆ ಲಕ್ಷಾಂತರ ಕೋಟಿಗಳಷ್ಟು ತೆರಿಗೆ ವಿನಾಯಿತಿ ಸೇರಿದಂತೆ ಅವರ ಸಾವಿರಾರು ಕೋಟಿ ರೂಪಾಯಿ ಸಾಲಗಳನ್ನು ಮಾಡಿದೆ. ಶಿಕ್ಷಣ ಮತ್ತು ಉದ್ದಿಮೆಗಳ ಖಾಸಗೀಕರಣದಿಂದಾಗಿ ದಲಿತರ ಮೀಸಲಾತಿ ಅವಕಾಶಗಳು ಕಡಿಮೆಯಾಗಿವೆ. ಕಾರ್ಮಿಕರ ಪರವಾಗಿರುವ ಕಾನೂನುಗಳನ್ನು ಮಾಲೀಕರ ಹಾಗೂ ಉದ್ಯಮಿಗಳ ಪರವಾಗಿ ತಿದ್ದುಪಡಿ ಮಾಡಲಾಗುತ್ತಿದೆ. ದಲಿತರು, ಅಲ್ಪಸಂಖ್ಯಾತರು, ಮಹಿಳೆಯರ ಮೇಲೆ ದಾಳಿಗಳು ತೀವ್ರವಾಗಿವೆ. ದೇಶದಲ್ಲಿ ಜಾತಿವಾದಿ, ಕೋಮುವಾದಿ, ಉಗ್ರವಾದಿ ಶಕ್ತಿಗಳು ವಿಜೃಂಭಿಸುತ್ತಿವೆ. ದೇಶದ ಅಧಿಕಾರ ಹಾಗೂ ದೇಶದ ಸಂವಿಧಾನ ದೇಶದ ಸ್ವಾತಂತ್ರ್ಯ ಚಳುವಳಿಗೆ ವಿರುದ್ಧ ದಿಕ್ಕಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪರವಾಗಿ ಕೆಲಸ ಮಾಡಿದ



ಹಾಗೂ ದೇಶದ ಸಂವಿಧಾನದ ಮೇಲೆ ಎಳ್ಳಷ್ಟೂ ಗೌರವವಿಲ್ಲದ ಸಂಘ ಪರಿವಾರದ ಪರವಾಗಿರುವ ಶಕ್ತಿಗಳ ಕೈಯ್ಯಲ್ಲಿ ಸಿಲುಕಿ ದುಡಿಯುವ ಜನರ ಹಕ್ಕುಗಳನ್ನು ಕಸಿಯುಲಾಗುತ್ತಿದೆ. ದೇಶದ ಸಂವಿಧಾನ ಇನ್ನಿಲ್ಲದಂತೆ ಅಪಾಯಕ್ಕೆ ಸಿಲುಕಿದೆ. ಈ ಹಿನ್ನೆಲೆಯಲ್ಲಿ ಸಿಐಟಿಯು ಕ–ರೆಯ ಭಾಗವಾಗಿ ಎಲ್ಲಾ ಜಿಲ್ಲಾ–ತಾಲ್ಲೂಕು ಕೇಂದ್ರಗಳಲ್ಲಿ ಆಗಸ್ಟ್ 14ರ ಸಂಜೆ 6ಗಂಟೆಯಿಂದ 'ದುಡಿಯುವ ಜನರ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ' ಹೋರಾಟ ನಡೆಯಲಿದೆ.

3000 ಕಿ.ಮಿ. ಕ್ರಮಿಸಿದ ಕಾರ್ಮಿಕ ಜಾಗೃತಿ ಜಾಥಾ

ವಿದುರಾಶ್ವತ್ಥದಿಂದ ಜುಲೈ 29ರಂದು ಹೊರಟ ಕಾರ್ಮಿಕ ಜಾಗೃತಿ ಜಾಥಾ ಈ ವರೆಗೆ 25 ಜಿಲ್ಲೆಗಳನ್ನು 37 ಸ್ಥಳಗಳಲ್ಲಿ ಸಭೆಗಳನ್ನು ನಡೆಸಿ 3000 ಕಿ.ಮಿ.ಕ್ಕಿಂತಲೂ ಹೆಚ್ಚು ದೂರ ದಾಟಿ ಅಗಸ್ಟ್ 11ರ ರಾತ್ರಿಯ ಹೊತ್ತಿಗೆ ದಕ್ಷಿಣ ಕನ್ನಡ ಜಿಲ್ಲೆ ಪ್ರವೇಶಿಸಿದೆ. ಕಳೆದ ಒಂದು ವಾರ ಜಾಥಾದ ಕೆಲವು ಚಿತ್ರಗಳು ಇಲ್ಲಿವೆ:















ನಾಳಿನ ಕಾರ್ಯಕ್ರಮಗಳು

ಜಿಲ್ಲಾ ಜನಶಕ್ತಿ ಉತ್ಸವಗಳು: ಕೋಲಾರ – ಆ. 11, ಬಳ್ಳಾರಿ ಅ. 17.

ಕಾರ್ಮಿಕರ ರಾಜ್ಯ ಜಾಥಾ ಜುಲೈ 29– ಅಗಸ್ಟ್ 13, ಸಿಐಟಿಯು, ರಾಜ್ಯಾದ್ಯಂತ

ದುಡಿಯುವ ಜನರ ಸ್ವಾತಂತ್ರ್ಯಕ್ಕಾಗಿ ಸತ್ಯಾಗ್ರಹ ಅಗಸ್ಟ್ 14 ಸಿಐಟಿಯು, ರಾಜ್ಯಾದ್ಯಂತ

ಜನಶಕ್ತಿ ರಾಜ್ಯ ಮಟ್ಟದ ಉತ್ಸವ 2017 ಅಗಸ್ಟ್ 19 ಬೆಂಗಳೂರು

ಜಿಲ್ಲಾ ಮಟ್ಟದಲ್ಲಿ ರೈತರ ಪ್ರತಿಭಟನೆ ಆಗಸ್ಟ್ 21 ರಾಜ್ಯಾದ್ಯಂತ

ಸಾಮ್ರಾಜ್ಯಶಾಹಿ ವಿರೋಧಿ ದಿನ, ಸೆಪ್ಟೆಂಬರ್ 1

ಸೌಹಾರ್ದ ಕರ್ನಾಟಕ ಸಮಾವೇಶ, ಸೆಪ್ಟೆಂಬರ್ 5 ಬೆಂಗಳೂರು

ಬೆಂಗಳೂರಿನತ್ತ ಕಾರ್ಮಿಕರ ಮಹಾನಡೆ ಸೆಪ್ಟೆಂಬರ್ 14

ಸ್ವಾತಂತ್ರ್ಯ ಸಮರದಲ್ಲಿ ಮಹಾನ್ ದೇಶಪ್ರೇಮಿಗಳು ಎಲ್ಲಿ? ಎಲ್ಲಿ?

– ಜಿ. ಎನ್. ನಾಗರಾಜ್

(ಅಗಸ್ಟ್ 9 ರಂದು ರಾಜ್ಯಾದ್ಯಂತ ಬಿಡುಗಡೆ ಮಾಡಲಾದ "ತೊಲಗು ತೊಲಗಾಚೆ ಪರದೇಶಿ ಸುಲಿಗೆಗಾರ" ಪುಸ್ತಿಕೆಯ ಒಂದು ಆಯ್ದ ಭಾಗ)

ದೇಶದ ಸ್ವಾತಂತ್ರ್ಯ ಸಮರದಲ್ಲಿ ಹಲವು ತತ್ವ, ಸಿದ್ಧಾಂತದ ಜನರು, ರೈತರು, ಕಾರ್ಮಿಕರು, ವಿದ್ಯಾರ್ಥಿಗಳು ಮೊದಲಾದ ಸಮಾಜದ ಹಲವು ವಿಭಾಗದ ಜನರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು. ಹಲವು ತ್ಯಾಗ ಬಲಿದಾನಗಳನ್ನು ಮಾಡಿದರು. ಆದರೆ ಇಂದು ತಾವೇ ರಾಷ್ಟ ಪ್ರೇಮಿಗಳೆಂದು ಬೇರೆಯವರು ದೇಶದ್ರೋಹಿಗಳೆಂದು ಪ್ರಮಾಣಪತ್ರಗಳನ್ನು ನೀಡುವ ಅಧಿಕಾರವನ್ನು ತಮ್ಮಷ್ಟಕ್ಕೆ ತಾವೇ ಕೈಗೆತ್ತಿಕೊಂಡವರು ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಯಾವ ಹೋರಾಟಗಳಲ್ಲಿಯೂ ಕಾಣೆಯಾಗಿದ್ದಾರಲ್ಲಾ, ಅವರ ದೇಶಪ್ರೇಮದ ಮಹಾತ್ಮೆ ಎಂತಹುದು?

ಈ ದೇಶಪ್ರೇಮಿಗಳು ತಮಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಇಲ್ಲದ ಇತಿಹಾಸವನ್ನು ಸೃಷ್ಠಿ ಮಾಡಿಕೊಳ್ಳಲು ಅಸಂಖ್ಯ ಸುಳ್ಳುಗಳನ್ನು ದಿನನಿತ್ಯ ಹೆಣೆಯುತ್ತಿದ್ದಾರೆ ಮತ್ತು ತಮ್ಮ ನಾಯಕ ಶಿರೋಮಣಿಗಳೆಲ್ಲ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬಗೆದ ದ್ರೋಹವನ್ನು ಮುಚ್ಚಿ ಹಾಕಲು ಕೂಡ ಬಹಳ ಶ್ರಮ ಪಡುತ್ತಿದ್ದಾರೆ. ಆದ್ದರಿಂದ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಇಂದು ತುರ್ತಿನ ವಿಷಯವಾಗಿದೆ.

ಆರೆಸ್ಸೆಸ್ ಬಗ್ಗೆ ಆರು ಪ್ರಶ್ನೆಗಳು

ಇಂದು ದೇಶಪ್ರೇಮದ ಪಾಠ ಹೇಳುತ್ತಿರುವ ಬಿಜೆಪಿಯ ಮೂಲಾಧಾರ ಸಂಸ್ಥೆಯಾದ ಆರೆಸ್ಸೆಸ್ ಸ್ವಾತಂತ್ರ್ಯ ಪೂರ್ವದಲ್ಲಿಯೇ 1925 ರಲ್ಲಿಯೇ ಅಸ್ತಿತ್ವ ಪಡೆಯಿತು. ಹೀಗಾಗಿ ಮುಖ್ಯ ಚಳುವಳಿಗಳು ನಡೆದಾಗ ಆರೆಸ್ಸೆಸ್ ಅಸ್ತಿತ್ವದಲ್ಲಿತ್ತು. ಆದ್ದರಿಂದ ಸ್ವಾತಂತ್ರ್ಯ ಚಳುವಳಿಯಲ್ಲಿ ಆರೆಸ್ಸೆಸ್ ಪಾತ್ರದ ಬಗ್ಗೆ ಹಲವು ಆಯಾಮಗಳ ವಿಶ್ಲೇಷಣೆ ಬೇಕಾಗಿದೆ.

ಒಂದನೆಯದು – ದೇಶದ ಜನರು ಉತ್ಸಾಹದಿಂದ ಹೋರಾಟಗಳಲ್ಲಿ ಧುಮುಕುವುದು ಕಣ್ಣೆದುರಿಗೇ ಕಂಡರೂ ಆರೆಸ್ಸೆಸ್ ಸ್ವ ತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿತೇ? ಭಾಗವಹಿಸಲಿಲ್ಲವೇಕೆ ಎಂಬುದು.

ಎರಡನೆಯದು – ನಿರಾಸಕ್ತಿ ಇರಲಿ, ಸಂಘ ಪರಿವಾರದ ಪೂಜನೀಯರು ಸ್ವಾತಂತ್ರ್ಯ ಚಳುವಳಿಗೆ ವೈಯುಕ್ತಿಕವಾಗಿ ಬಗೆದ ದ್ರೋಹ.

ಮೂರನೆಯದು – ಸಂಘ ಒಂದು ಸಂಘಟನೆಯಾಗಿ ಸ್ವಾತಂತ್ರ್ಯ ಚಳುವಳಿಯ ಹಿನ್ನಡೆಗೆ ಕಾರಣವಾದದ್ದು.

ನಾಲ್ಕನೆಯದು – ದೇಶದ ವಿಭಜನೆಗೆ ಕಾರಣವಾದ ಸ್ಥಿತಿಗೆ ಆರೆಸ್ಸೆಸ್ ನ ಕೊಡುಗೆ

ಐದನೆಯದು – ಸ್ವಾತಂತ್ರ್ಯ ಬಂದ ಮೇಲೆ ದೇಶ ಕಟ್ಟುವ ಕೆಲಸಕ್ಕೆ ಕೋಮು ದಂಗೆಗಳ ಮೂಲಕ ಮತ್ತು ಗಾಂಧೀಜಿಯವರ ಕೊಲೆಯ ಮೂಲಕ ಬಗೆದ ದ್ರೋಹ.

ಆರನೆಯದು – ಸ್ವಾತಂತ್ರ್ಯದ ಆಶಯಗಳನ್ನು ತಿರುವು ಮುರುವು ಮಾಡುವ ಮೂಲಕ ಸ್ವಾತಂತ್ರ್ಯಕ್ಕೆ ಮತ್ತು ಜನತೆಗೆ ಬಗೆದ ದ್ರೋಹ.


ಆರೆಸ್ಸೆಸ್ ಸುತ್ತೋಲೆ – ಉಪ್ಪಿನ ಸತ್ಯಾಗ್ರಹದಲ್ಲಿ ಪಾಲುಗೊಳ್ಳುವುದಿಲ್ಲ

ಈ ಸಂಸ್ಥೆಯ ಮೂಲಪುರುಷರಾದ ಡಾ ಹೆಡ್ಗೆವಾರ್ ಈ ಮೊದಲು ಕೆಲ ಕಾಲ ಕಾಂಗ್ರೆಸ್ ನ ಸದಸ್ಯರಾಗಿದ್ದರು. ಒಂದು ಎಐಸಿಸಿ ಮಹಾಧಿವೇಶನಕ್ಕೆ ಸ್ವಯಂ ಸೇವಕರಾಗಿ ಕೆಲಸ ಮಾಡಿದ್ದರು. 1920 ರ ಅಸಹಕಾರ–ಖಿಲಾಫತ್ ಚಳುವಳಿಯಲ್ಲಿ ಪಾಲ್ಗೊಂಡು ಜೈಲು ವಾಸವನ್ನೂ ಅನುಭವಿಸಿದರು. ಆದರೆ ಜೈಲಿನಿಂದ ಬಿಡುಗಡೆಗೊಂಡ ನಂತರ ಅವರು ಕಕ್ಕಿದ ವಿಷ ಅವರು ಜೈಲಿಗೆ ಹೋದದ್ದನ್ನೆ ಮರೆಸುವಂತಿದೆ. "ಯುವನರೆಂಬ (ಮುಸ್ಲಿಮರು) ಹಾವುಗಳಿಗೆ ಗಾಂಧೀಜಿ ಅಸಹಕಾರ ಚಳುವಳಿಯ ಮೂಲಕ ಹಾಲನ್ನೆರೆದು ಬೆಳೆಸಿದ್ದಾರೆ. ಈಗ ಅವು ಕಚ್ಚುತ್ತಿವೆ" ಎಂದು ಅವರು ಆ ಚಳುವಳಿಯಲ್ಲಿ ಮುಸ್ಲಿಮರು ಭಾಗವಹಿಸಿದುದನ್ನೇ ತೀವ್ರವಾಗಿ ಟೀಕೆ ಮಾಡಿದರು. 1930 ರ ಸಮಯದಲ್ಲಿ ದೇಶದ ಪೂರ್ಣ ಸ್ವಾತಂತ್ರ್ಯಕ್ಕಾಗಿ ಶಪಥ ತೊಡುವ ಕರೆಯನ್ನು ನೀಡಿದಾಗ ಅವರು ಆರೆಸ್ಸೆಸ್ ಶಾಖೆಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸುತ್ತಾರೆ. ಅದರಲ್ಲಿ ಆ ದಿನವನ್ನು ಆರೆಸ್ಸೆಸ್ ಭಗವಾ ಧ್ವಜ ಏರಿಸುವ ಮೂಲಕ ಆಚರಿಸಬೇಕು ಎನ್ನುತ್ತಾರೆ. ಅದೇ ಸಮಯದಲ್ಲಿ ಆಗ ನೀಡಿದ್ದ ಉಪ್ಪಿನ ಸತ್ಯಾಗ್ರಹದ ಕರೆಯ ಬಗ್ಗೆ ಆರೆಸ್ಸೆಸ್ ಒಂದು ಸಂಘಟನೆಯಾಗಿ ಅದರಲ್ಲಿ ಭಾಗವಹಿಸುವುದಿಲ್ಲ. ಯಾರಾದರೂ ವೈಯುಕ್ತಿಕವಾಗಿ ಭಾಗವಹಿಸಬಹುದು ಎನ್ನುತ್ತಾರೆ. ಸ್ವತ: ಅವರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸುವುದಿಲ್ಲ. ಆದರೆ ಬ್ರಿಟಿಷ್ ಸರ್ಕಾರದ ರಾಜಕೀಯ ನೀತಿಗಳಿಗೆ ಹೆಚ್ಚು ಸಂಬಂಧವಿಲ್ಲದ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಾರೆ. ಆರೆಸ್ಸೆಸ್ ಒಪ್ಪಿದ ಹೆಡ್ಗೇವಾರ್ ಜೀವನ ಚರಿತ್ರೆಯಲ್ಲಿ ಅವರು ಭಾಗವಹಿಸಿದ ಉದ್ದೇಶವನ್ನು ಸ್ಪಷ್ಟಪಡಿಸಲಾಗಿದೆ. ಅವರು ಸ್ವಾತಂತ್ರ್ಯ ಚಳುವಳಿಗಾರ ಜೈಲುವಾಸಿಗಳ ನಡುವೆ ಆರೆಸ್ಸೆಸ್ ವಿಚಾರಗಳ ಪ್ರಚಾರ ಮಾಡಲೆಂದೇ ಈ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ್ದರಂತೆ. ಸ್ವಾತಂತ್ರ್ಯಕ್ಕಾಗಿ ಅಲ್ಲ.

ಆರೆಸ್ಸೆಸ್ ನ ಸಾಮಾನ್ಯ ಕಾರ್ಯಕರ್ತರಲ್ಲಿಯೇ ಆರೆಸ್ಸೆಸ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿಲ್ಲ ಎಂಬ ಬಗ್ಗೆ ಟೀಕೆ, ಅಸಮಾಧಾನಗಳು ವ್ಯಾಪಕವಾಗಿದ್ದುವು. ಒಬ್ಬ ಕಾರ್ಯಕರ್ತ ಹೆಗ್ಡೆವಾರ್ ರವರ ಬಳಿ ತಾನು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲಿಗೆ ಹೋಗಲು ತಯಾರಾಗಿದ್ದೇನೆ. ಅದಕ್ಕೆ ಅನುಮತಿ ಕೊಡಬೇಕು ಎಂದು ಕೇಳಿದಾಗ ನೀನು ಜೈಲಿಗೆ ಸೇರಿದರೆ ನಿನ್ನ ಕುಟುಂಬದವರ ಗತಿ ಏನು ಎಂದು ಕೇಳಿದರು. ಆಗ ಅದಕ್ಕೆಲ್ಲಾ ವ್ಯವಸ್ಥೆ ಮಾಡಿದ್ದೇನೆ ಎನ್ನಲು ಆಗ ಜೈಲಿಗೆ ಹೋಗುವುದರ ಬದಲು ನೀನು ಅದೇ ಅವಧಿಯಲ್ಲಿ ಸಂಘದ ಕೆಲಸಕ್ಕೆ ನಿನ್ನ ಎಲ್ಲಾ ಸಮಯ ಕೊಡು ಎಂದರಂತೆ. ಹೀಗೆ ಸಂಘಟನೆಯಾಗಿ ಭಾಗವಹಿಸುವುದಿಲ್ಲ, ವೈಯುಕ್ತಿವಾಗಿ ಭಾಗವಹಿಸಬಹುದು ಎಂದು ಸಾರ್ವಜನಿಕ ನಿಲುಮೆ ತೆಗೆದುಕೊಂಡರೂ ಸಂಘದ ಒಳಗಿನ ನಿಲುವೆ ಬೇರೆಯಾಗಿತ್ತು. ಸಂಘದವರು ಯಾರೂ ಭಾಗವಹಿಸಬಾರದು ಎಂಬುದೇ ಅವರ ನಿಲುವಾಗಿತ್ತು.

ಚಳುವಳಿಗಳು ಕಾರ್ಯಕರ್ತರ ಮನಸ್ಸು ಕೆಡಿಸುತ್ತವೆ!

ಈ ನಿಲುಮೆ ಕೇವಲ ಹೆಗ್ಡೇವಾರ ರವರಿಗೆ ಸೀಮಿತವಾಗಿರಲಿಲ್ಲ. ಅವರ ನಂತರ ಆರೆಸ್ಸೆಸ್ ನ ಮುಖ್ಯಸ್ತರಾದ ಗೋಲ್ವಾಲ್ಕರ್ ರವರು ಜನ ಉತ್ಸಾಹದಿಂದ ಧುಮುಕುತ್ತಿದ್ದ ಯಾವುದೇ ಸ್ವಾತಂತ್ರ್ಯ ಚಳುವಳಿಯ ಹೋರಾಟಗಳಲ್ಲಿ ವೈಯುಕ್ತಿಕವಾಗಿಯೂ ಭಾಗವಹಿಸಲಿಲ್ಲ. ಮಾತ್ರವಲ್ಲ ಬೇರೆ ಯಾರೇ ಭಾಗವಹಿಸಬೇಕೆಂದು ಬಯಸಿದರೂ ಕೂಡ ಅದ–ಕ್ಕೆ ಒಪ್ಪಿಗೆ ನೀಡುತ್ತಿರಲಿಲ್ಲ. ಅವರೇ ಹೆಗ್ಡೇವಾರ್ ರವರೊಡನೆ ಕಾರ್ಯಕರ್ತನೊಬ್ಬನ ಸಂಭಾಷಣೆ ಬಗ್ಗೆ ಪದೇ ಪದೇ ಉಲ್ಲೇಖ ಮಾಡುವುದರ ಮೂಲಕ



ಸಂಘದ ಕಾರ್ಯಕರ್ತರಿಗೆ ತಿಳಿಸಿದವರು. ಅಷ್ಟೇ ಅಲ್ಲ ಈ ಚಳುವಳಿಗಳು ಒಂದು ಬೇಡದ ಉಪದ್ವಾಪ. ಸಂಘದ ಕಾರ್ಯಕರ್ತರ ಮನಸ್ಸನ್ನು ಕೆಡಿಸುತ್ತವೆ. ಅನಿವಾರ್ಯ ಸಹಿಸಬೇಕಷ್ಟೆ ಎಂಬಂತೆ ಹಲವು ಬಾರಿ ಮಾತಾಡಿದ್ದಾರೆ.

ಏಕೆ ಹೀಗೆ ಎಂಬ ಬಗ್ಗೆ ಈ ಸಂಭಾಷಣೆಗಳು ಮತ್ತು ಭಾಷಣಗಳಲ್ಲಿ ವ್ಯಕ್ತವಾಗಿರುವುದು ಸಂಘದ ದಿನನಿತ್ಯದ ಕೆಲಸಗಳು ಸ್ವಾತಂತ್ರ್ಯ ಚಳುವಳಿಗಿಂತ ಮುಖ್ಯವಾದುದು ಎಂಬ ಭಾವ. ಚಳುವಳಿಯಲ್ಲಿ ಭಾಗವಹಿಸುವುದು ಸಂಘದ ಶಿಸ್ತನ್ನು ಕೆಡಿಸುತ್ತದೆ. ಎಂಬುದು ಮತ್ತೊಂದು. ಇದರ ಅಂತರಾಳದಲ್ಲಿರುವುದೇನು ಎಂಬುದು ಯೋಚಿಸಬೇಕಾದ ಸಂಗತಿ. ಆದರೆ ಅವ್ಯಕ್ತವಾದ ಕಾರಣಗಳೆಂದರೆ ಬ್ರಿಟಿಷರು ನಮ್ಮ ದೇಶದ ಶತ್ರುಗಳಲ್ಲ ಮುಸ್ಲಿಮರೇ ದೇಶದ ಶತ್ರುಗಳು. ಆ ನಮ್ಮ ದೇಶ ಹಿಂದೂ ರಾಷ್ಟ್ರ. ಈ ರಾಷ್ಟ್ರದೊಳಗೇ ಹಿಂದೂ ರಾಷ್ಟ್ರ ಸೃಷ್ಟಿಯಾಗುವವರೆಗೂ ಬ್ರಿಟಿಷರೇ ಆಳುತ್ತಿರಲಿ ಎಂಬುದು ಆರೆಸ್ಸೆಸ್ ಸರಸಂಘಚಾಲಕರು ಬೇರೆ ಬೇರೆ ಹಲವು ಸಂದರ್ಭಗಳಲ್ಲಿ ಹೇಳಿರುವ ಮಾತಿನ ತಾತ್ಪರ್ಯ.

ಇಲ್ಲದಿದ್ದರೆ ಆರೆಸ್ಸೆಸ್‌ನ ಪೂರ್ಣ ಶಕ್ತಿಯನ್ನು ಎಲ್ಲರೊಡನೆ ಸೇರಿಯೋ, ಪ್ರತ್ಯೇಕವಾಗಿಯೋ ಸ್ವಾತಂತ್ರ್ಯ ಸಾಧನೆಗೆ ತೊಡಗಿಸಬೇಕಾಗಿತ್ತಲ್ಲವೇ !

ಸ್ವಾತಂತ್ರ್ಯದ ಪ್ರಭಾವಳಿಗಾಗಿ ತಹತಹ

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದಿದ್ದರೂ, ಭಾಗವಹಿಸುವುದನ್ನು ನಿಷೇಧಿಸಿದರೂ ಕೂಡ ಸ್ವಾತಂತ್ರ್ಯ ಚಳುವಳಿಯ ಪ್ರಭಾವಳಿಯನ್ನು ಸೃಷ್ಟಿಸಿಕೊಳ್ಳುವ ಪ್ರಯತ್ನವೇಕೆ? ನಮ್ಮ ನಿಲುವು ಹೀಗೆ. ಆದರಂತೆ ನಾವು ಭಾಗವಹಿಸಲಿಲ್ಲ ಎಂದು ಬಹಿರಂಗವಾಗಿ ಜನರ ಮುಂದೆ ಒಪ್ಪಿಸಬಾರದೇಕೆ?

ಈ ವಿಷಯದಲ್ಲಿ ಒಂದು ವಿಶೇಷ ಇಲ್ಲಿಯವರೆಗಿನ ಚರ್ಚೆಯಲ್ಲಿ ಹೆಚ್ಚಾಗಿ ಗಮನಕ್ಕೆ ಬಾರದೆ ಹೊಗಿದೆ. ಸ್ವಾತಂತ್ರ್ಯ ಚಳುವಳಿಯ ಪ್ರಭಾವಳಿ ಬೇಕಾಗಿರುವುದು ಬಿಜೆಪಿಗೇ ಹೊರತು ಆರೆಸ್ಸೆಸ್‌ಗಲ್ಲ. ಆರೆಸ್ಸೆಸ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವ ಬಗ್ಗೆ ಕ್ಲೇಮುಗಳನ್ನು ಮಾಡಿರುವುದು ಹೆಚ್ಚೇನೂ ಕಂಡುಬಂದಿಲ್ಲ. ನಿಜವಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಅಷ್ಟಿಷ್ಟಾದರೂ ಭಾಗವಹಿಸಿರುವ ಹೆಗ್ಡೇವರ್ ರವರನ್ನು ಸ್ವಾತಂತ್ರ್ಯ ವೀರ ಎಂದೇಕೆ ಇಲ್ಲಿಯವರೆಗೆ ಬಿಂಬಿಸಿಲ್ಲ ಎಂಬುದು ಇದಕ್ಕೆ ಸಾಕ್ಷಿಯಾಗಿದೆ. ಚುನಾವಣೆಗಳಲ್ಲಿನ ಮತಗಳಿಕೆಯ ಲಾಭಕ್ಕಾಗಿ ಹೊರತು ಈ ಪ್ರಭಾವಳಿಗೆ ಬೇರೆ ಪ್ರಯೋಜನವೇನಿಲ್ಲ.

ಬಿಜೆಪಿಯ ಮತ್ತು ಸಂಘ ಪರಿವಾರದ ಇತರ ಸಾರ್ವಜನಿಕ ಮುಖಗಳಿಗೆ ಮಾತ್ರ ಈ ಪ್ರಭಾವಳಿ ಅಗತ್ಯವಾಗಿದೆ. ಸ್ವಾತಂತ್ರ್ಯ ಚಳುವಳಿಯ ಪ್ರಭಾವಳಿ ಆರೆಸ್ಸೆಸ್ ನ ಈ ಮುಖವಾಡಗಳಿಗೆ ಏಕೆ ಬೇಕಾಗಿದೆ–ಯೆಂದರೆ ನಮ್ಮ ಜನರ ನಡುವೆ ಸ್ವಾತಂತ್ರ್ಯ ಆಶಯಗಳು, ಮೌಲ್ಯಗಳಿಗೆ ಇನ್ನೂ ಬೆಲೆಯಿದೆ. ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ, ಅವರ ತ್ಯಾಗ ಬಲಿದಾನಗಳ ಬಗ್ಗೆ ಅಪಾರ ಗೌರವವಿದೆ. ಬಿಜೆಪಿಯ ದಿನನಿತ್ಯದ ಕೋಮುವಾದೀ ಕರಾಳತೆಯ ಮೇಲೆ ಪ್ರಜಾಸತ್ತಾತ್ಮಕ ಮೌಲ್ಯಗಳ ಮುಸುಕು ಹೊದಿಸಿ ಜನರ ಕಣ್ಣಿಗೆ ಮಣ್ಣು ತೂರಬೇಕಾಗಿದೆ. ಅದಕ್ಕಾಗಿ ಈ ಪ್ರಭಾವಳಿಯನ್ನು ಗಳಿಸಲು ಇನ್ನಿಲ್ಲದ ಪ್ರಯತ್ನ ನಡೆದಿದೆ.

ತಮ್ಮ ಬಳಿಯಲ್ಲಿಲ್ಲದ ಈ ಪ್ರಭಾವಳಿಯನ್ನು ಕದಿಯಲು ಬಿಜೆಪಿ ಮತ್ತು ಇತರರು ಎರಡು ರೀತಿಯಲ್ಲಿ ಪ್ರಯತ್ನ ನಡೆಸಿದ್ದಾರೆ. ಒಂದು – ಸ್ವಾತಂತ್ರ್ಯ ವೀರ–ರೆಂದು ಜನಮನದಲ್ಲಿ ಸ್ಥಾಪಿತವಾಗಿರುವ ಸರ್ದಾರ್ ಪಟೇಲ್, ಭಗತ್ ಸಿಂಗ್, ಅಜಾದ್ ಚಂದ್ರಶೇಖರ್, ಗಾಂಧೀಜಿ, ಇತ್ತೀಚೆಗೆ ಡಾ. ಅಂಬೇಡ್ಕರ್ ರವರು ಕೂಡಾ. (ಬಹುಕಾಲ ಬಿಜೆಪಿ ತಮ್ಮ ಸಿದ್ಧಾಂತ ಗಾಂಧಿ ಸಮಾಜವಾದವೆಂದು ಹೇಳಿಕೊಳ್ಳುತ್ತಿದ್ದರು. ಈಗಲೂ ಮೋದಿಯವರ ಚರಕದಿಂದ ನೂಲುವ ಚಿತ್ರ, ಸಬರಮತಿ ಆಶ್ರಮಕ್ಕೆ ಭೇಟಿ ಇತ್ಯಾದಿ) ಮೊದಲಾದವರನ್ನು ತಮ್ಮವರನ್ನಾಗಿ ಬಿಂಬಿಸಲು ಪ್ರಯತ್ನಿಸುವುದು.

ಮತ್ತೊಂದು ರೀತಿಯೆಂದರೆ ತಮ್ಮ ನಾಯಕರೆ–ಂದು ಬಿಂಬಿಸಬಹುದಾದವರಲ್ಲಿ ಸ್ವಾತಂತ್ರ್ಯದ ಲೇಪ ಅಂಟಿಸಲು ಸಾಧ್ಯವಾದವರನ್ನು ಹುಡುಕಾಡಿ ಬಣ್ಣ ಹೊಡೆಯಲು ಪ್ರಯತ್ನಿಸುವುದು. ವಾಜಪೇಯೀ, ಸಾವರ್ಕರ್, ಶ್ಯಾಮ ಪ್ರಸಾದ ಮುಖರ್ಜಿ ಮುಂತಾದವರು.

ಭಗತ್ ಸಿಂಗ್‌ರವರನ್ನು ಕದಿಯಲು ಮಾಡಿದ ಪ್ರಯತ್ನ ಇನ್ನೇನು ಯಶಸ್ವಿಯಾಗುವುದರಲ್ಲಿತ್ತು . ಈ ಬಗ್ಗೆ ಕಮ್ಯೂನಿಸ್ಟ್ ಪಕ್ಷಗಳು ಎಚ್ಚತ್ತು ಭಗತ್ ಸಿಂಗ್ ರವರ ಮಾರ್ಕ್ಸವಾದಿ ಒಲವು, ನಾಸ್ತಿಕತೆ, ಕೋಮುವಾದ ವಿರೋಧಿ ನಿಲುವು ಮೊದಲಾದ ವಿಚಾರಗಳ ಬಗ್ಗೆ ಜನರ ಮುಂದಿಡುವ ಕೆಲಸ ಮಾಡಿದ ಮೇಲೆ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೆಂದು ಕಂಡುಕೊಂಡಿದ್ದಾರೆ. ಗಾಂಧೀಜಿಯವರ ಕೊಲೆಗಾರನನ್ನು ಆರಾಧಿಸುವ ಕಾರಣದಿಂದ ಈ ಬಿಂಬದ ಪ್ರಯೋಜನ ಸೀಮಿತ. ಪಟೇಲ್ ರವರನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಅವರು ಆರೆಸ್ಸೆಸ್ ಅನ್ನು ನಿಷೇಧ ಮಾಡಿದ ಬಗ್ಗೆ ಜನರ ನಡುವೆ ಪ್ರಚಾರ ಮಾಡಲು ಕಾಂಗ್ರೆಸ್ ಆಸಕ್ತಿ ತೋರದಿರುವುದು ಒಂದು ಮುಖ್ಯ ಕಾರಣ.

ಸ್ವಾತಂತ್ರ್ಯ ಚಳುವಳಿಗಾರರಿಗೆ ದ್ರೋಹ ಬಗೆದ ವಾಜಪೇಯಿ

ವಾಜಪೇಯಿಯವರನ್ನು ಪ್ರಧಾನಿ ಪಟ್ಟಕ್ಕೆ ಅಭ್ಯರ್ಥಿಯಾಗಿ ಬಿಂಬಿಸುತ್ತಿರುವ ಸಂದರ್ಭದಲ್ಲಿ ವಾಜಪೇಯಿಯವರು ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸುವ ಮೂಲಕ ಜೈಲಿಗೆ ಹೋಗಿದ್ದರು, ಆ ಮೂಲಕ ರಾಜಕೀಯವನ್ನು ಪ್ರವೇಶಿಸಿದರು ಎಂಬ ಬಗ್ಗೆ ಅವರ ಜೀವನ ಚಿತ್ರ, ಪತ್ರಿಕಾ ಲೇಖನಗಳಲ್ಲಿ ನಮೂದಿಸಲಾಯಿತು. ಆದರೆ ಫ್ರಂಟ್ ಲೈನ್ ಪತ್ರಿಕೆ ತನಿಖಾ ವರದಿ ಪ್ರಕಟಿಸಿ ಅದರೊಂದಿಗೆ ವಾಜಪೇಯಿಯವರ ಸಂದರ್ಶನ ನಡೆಸಿ ಅವರೇ ಸ್ವತಃ ಅದನ್ನು ಅಲ್ಲಗಳೆಯಲು ಹಚ್ಚಿದಾಗ ಅದಕ್ಕೆ ಪೂರ್ಣ ವಿರಾಮ ಬಿತ್ತು.

ವಾಜಪೇಯಿಯವರು ಹದಿನಾರು ವರ್ಷದವರಿದ್ದಾಗ ಅವರ ಊರಿನಲ್ಲಿ ಚಲೇಜಾವ್ ಚಳುವಳಿಯ ಭಾಗವಾಗಿ ಕೆಲ ಚಳುವಳಿಗಾರರು ಊರವರ ನೆರವಿನೊಡನೆ ಅರಣ್ಯ ಇಲಾಖೆಯ ಕಛೇರಿ ನಾಶಪಡಿಸಿದರು. **ಪುಟ 15 ಕ್ಕೆ**

ಕೇರಳದಲ್ಲಿ ಫಲಿಸವು ಆರ್‌ಎಸ್‌ಎಸ್ ಕುಟಿಲ ತಂತ್ರಗಳು



ಆರ್‌ಎಸ್‌ಎಸ್–ಬಿಜೆಪಿ ಕಾರ್ಯಕರ್ತರ ಮೇಲೆ ಮಾರ್ಕ್ಸ್‌ವಾದಿಗಳು ಹಿಂಸಾಚಾರ ನಡೆಸುತ್ತಿದ್ದಾರೆಂಬ ರಾಷ್ಟ್ರ ಮಟ್ಟದಲ್ಲಿ ಆರ್‌ಎಸ್‌ಎಸ್ ನಡೆಸುತ್ತಿರುವ ಪ್ರಚಾರವು ಸಿಪಿಐ(ಎಂ) ಮುನ್ನಡೆಯನ್ನು ತಡೆಯಲಾಗದ ಅದರ ಅದರ ಹತಾಶೆಯ ಪ್ರತೀಕವಾಗಿದೆ ಮತ್ತು ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದ ಭಾಗವಾಗಿದೆ. ಬಿಜೆಪಿ ರಾಜ್ಯ ಘಟಕವನ್ನು ತಲ್ಲಣಗೊಳಿಸಿರುವ ಭ್ರಷ್ಟಾಚಾರ ಪ್ರಕರಣಗಳು ತಿರುವಂತಪುರದಲ್ಲಿನ ಹೊಸ ಸುತ್ತಿನ ಹಿಂಸಾಚಾರಕ್ಕೆ ಕಾರಣವಾಗಿವೆ. ಈ ಹಿಂಸಾತ್ಮಕ ತಂತ್ರಗಳು ನಡೆಯುವುದಿಲ್ಲ ಎನ್ನುವುದನ್ನು ಆರ್‌ಎಸ್‌ಎಸ್ ಅರಿತುಕೊಳ್ಳಬೇಕು.



ಪ್ರಕಾಶ ಕಾರಟ್

2016ರ ಮೇ ತಿಂಗಳಲ್ಲಿ ವಿಧಾನಸಭೆ ಚುನಾವಣೆಗಳು ನಡೆದ ನಂತರದ ಅವಧಿಯಲ್ಲಿ ಕೇರಳದಲ್ಲಿ ಆರ್‌ಎಸ್‌ಎಸ್–ಬಿಜೆಪಿ ಆಟಾಟೋಪಗಳು ಅನಾವರಣಗೊಳ್ಳುತ್ತಲೇ ಬಂದಿವೆ. ಚುನಾವಣೆಯಲ್ಲಿ ಗಣನೀಯ ಪ್ರಭಾವ ಬೀರಲು ವಿಫಲವಾದ ಹಿನ್ನೆಲೆಯಲ್ಲಿ ಅವರು ಸಿಪಿಐ (ಎಂ) ಕಾರ್ಯಕರ್ತರನ್ನು ಗುರಿಯಾಗಿಸಿಕೊಂಡು ಹಿಂಸಾತ್ಮಕ ದಾಳಿ ನಡೆಸುವ ತನ್ನ ದೀರ್ಘ ಕಾಲದ ಹಳೆಯ ಚಾಳಿಯನ್ನು ಮತ್ತೆ ಆರಂಭಿಸಿದರು. ಈ ಬಾರಿ ಚುನಾವಣೆ ಫಲಿತಾಂಶ ಪ್ರಕಟವಾದ ದಿನವೇ ಹೊಸ ಸುತ್ತಿನ ದಾಳಿಗಳು ಆರಂಭವಾದವು. ಪಿಣರಾಯಿ ವಿಜಯನ್ ಅವರ ಕ್ಷೇತ್ರದಲ್ಲಿ ವಿಜಯೋತ್ಸವ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಕಾರ್ಯಕರ್ತ ರವೀಂದ್ರನ್ ಅವರನ್ನು ಆರ್‌ಎಸ್‌ಎಸ್ ಗೂಂಡಾಗಳು ಹತ್ಯೆಗೈದರು.

ಆರ್‌ಎಸ್‌ಎಸ್–ಬಿಜೆಪಿ ಕಾರ್ಯಕರ್ತರ ಮೇಲೆ ಮಾರ್ಕ್ಸ್‌ವಾದಿಗಳು ಹಿಂಸಾಚಾರ ನಡೆಸುತ್ತಿದ್ದಾರೆಂಬ ರಾಷ್ಟ್ರ ಮಟ್ಟದಲ್ಲಿ ಆರ್‌ಎಸ್‌ಎಸ್ ನಡೆಸುತ್ತಿರುವ ಪ್ರಚಾರವು ಸಿಪಿಐ(ಎಂ) ಮುನ್ನಡೆಯನ್ನು ತಡೆಯಲಾಗದ ಅದರ ಅದರ ಹತಾಶೆಯ ಪ್ರತೀಕವಾಗಿದೆ ಮತ್ತು ಎಲ್‌ಡಿಎಫ್ ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನದ ಭಾಗವಾಗಿದೆ.

ಬಿಜೆಪಿ ರಾಜ್ಯ ಘಟಕವನ್ನು ತಲ್ಲಣಗೊಳಿಸಿರುವ ಭ್ರಷ್ಟಾಚಾರ ಪ್ರಕರಣಗಳು ತಿರುವಂತಪುರದಲ್ಲಿನ ಹೊಸ ಸುತ್ತಿನ ಹಿಂಸಾಚಾರಕ್ಕೆ ಕಾರಣವಾಗಿವೆ. ವೈದ್ಯಕೀಯ ಕಾಲೇಜ್ ಒಂದಕ್ಕೆ ಮಾನ್ಯತೆ ಕೊಡಿಸಲು ಬಿಜೆಪಿ ನಾಯಕರೊಬ್ಬರು ಅಪಾರ ಮೊತ್ತದ ಲಂಚ ಪಡೆದಿರುವುದು ಬಿಜೆಪಿಯೊಳಗಡೆಯೇ ಆರೋಪ–ಪ್ರತ್ಯಾರೋಪಗಳನ್ನು ಹುಟ್ಟು ಹಾಕಿದೆ.

ಇರುಸುಮುರಿಸುಗೊಳಿಸುವ ಹಗರಣಗಳಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಉದ್ದೇಶದಿಂದ ಸಿಪಿಐ (ಎಂ) ನಾಯಕರು ಮತ್ತು ಕಚೇರಿಗಳ ಮೇಲೆ ದಾಳಿಗಳನ್ನು ನಡೆಸುವ ಮೂಲಕ ಹಿಂಸಾಚಾರವನ್ನು ಹರಿಯಬಿಡಲಾಗುತ್ತಿದೆ.

ಆರ್‌ಎಸ್‌ಎಸ್ ಕಾರ್ಯಕರ್ತನೊಬ್ಬನ ಹತ್ಯೆಗೆ ಸಿಪಿಐ (ಎಂ) ಕಾರಣವೆಂದು ಆರೋಪಿಸಲಾಗುತ್ತಿದ್ದು ಈ ಹತ್ಯೆಗೂ ರಾಜಕೀಯಕ್ಕೂ ಯಾವುದೇ ಸಂಬಂಧವಿಲ್ಲ. ಇದು ಸ್ಥಳೀಯ ಮಾರುಕಟ್ಟೆಯೊಂದರ ಮೇಲೆ ಸ್ವಾಮ್ಯ ಸ್ಥಾಪಿಸುವ ವಿಚಾರದಲ್ಲಿನ ಜಗಳವಾಗಿದ್ದು ಕೊಲೆ ಮಾಡಿದ ವ್ಯಕ್ತಿಗೂ ಸಿಪಿಐ (ಎಂ)ಗೂ ಯಾವುದೇ ಸಂಪರ್ಕವಿಲ್ಲ. ಆತ ಎಲ್ಲರಿಗೂ ಗೊತ್ತಿರುವ ಕ್ರಿಮಿನಲ್ ಹಿನ್ನೆಲೆಯುಳ್ಳ ವ್ಯಕ್ತಿಯಾಗಿದ್ದಾನೆ.

ಆರ್‌ಎಸ್‌ಎಸ್ ಮಾರ್ಗದರ್ಶನದಲ್ಲಿ ಬಿಜೆಪಿ ಸಿಪಿಐ (ಎಂ) ಹಿಂಸಾಚಾರ ನಡೆಸುತ್ತಿದೆ ಎಂದು ಅಖಿಲ ಭಾರತ ಮಟ್ಟದಲ್ಲಿ ಅಪಪ್ರಚಾರ ನಡೆಸುತ್ತಿದೆ. ಆದರೆ ಇಂಥ ಕಾಗಕ್ಕ ಗೂಬಕ್ಕ ಕಥೆಗಳಿಗೆ ಯಾವುದೇ ಮಾನ್ಯತೆ ಸಿಗುವುದಿಲ್ಲ. ಕೇರಳ ಪೊಲಿಸ್ ಇಲಾಖೆಯ ಅಂಕಿ ಸಂಖ್ಯೆಗಳ ಪ್ರಕಾರ 2000 ಮತ್ತು 2017ರ ನಡುವೆ 85 ಸಿಪಿಐ (ಎಂ) ಕಾರ್ಯಕರ್ತರ ಹತ್ಯೆ ನಡೆದಿದೆ. ಆರ್‌ಎಸ್‌ಎಸ್–ಬಿಜೆಪಿಯ 65 ಮಂದಿ ಹತ್ಯೆಯಾಗಿದ್ದಾರೆ. ದಾಳಿಯಿಂದ ಹೆಚ್ಚು ನೊಂದವರು ಯಾರು ಎಂಬುದು ಈ ಅಂಕಿಸಂಖ್ಯೆಗಳಿಂದಲೇ ತಿಳಿಯುತ್ತದೆ.

ಕೇಂದ್ರ ಸಚಿವ ಅರುಣ್ ಜೇಟ್ಲಿ ಕಳೆದ ಭಾನುವಾರ ತಿರುವನಂತಪುರಕ್ಕೆ ಭೇಟಿ ನೀಡಿದ್ದು ಆರ್‌ಎಸ್‌ಎಸ್‌ನ ಆಕ್ರಮಣಕಾರಿ ಚಟುವಟಿಕೆಗಳಿಗೆ ಇಂಬು ನೀಡುವ ಉದ್ದೇಶದಿಂದಲೇ ಎನ್ನುವುದು ಸ್ಪಷ್ಟ. ಮೋದಿ ಸರಕಾರದ ಒಬ್ಬ ಹಿರಿಯ ಸಚಿವರೇ ಈ ರೀತಿ ಮಾಡಿದ್ದಾರೆಂದರೆ ಎಡರಂಗ ಸರಕಾರದ ಕುರಿತು ಕೇಂದ್ರ ಸರಕಾರ ಹೊಂದಿರುವ ದ್ವೇಷದ ಮನೋಭಾವವನ್ನು ಅದು ಸೂಚಿಸುತ್ತದೆ. ಯಾಕೆಂದರೆ ಶಾಂತಿ ಸ್ಥಾಪನೆಗೆ ಮತ್ತು ಸಂಘರ್ಷವನ್ನು ಕೊನೆಗಾಣಿಸಲು ರಾಜ್ಯ ಸರಕಾರ ಕೈಗೊಳ್ಳುತ್ತಿರುವ ಕ್ರಮಗಳು ಏನೆಂಬುದು ಕೇಂದ್ರ ಸರಕಾರಕ್ಕೆ ಗೊತ್ತೇ ಇದೆ.

ವಾಸ್ತವವಾಗಿ ರಾಜಕೀಯ ಪಕ್ಷಗಳ ಹೊಡೆದಾಟಗಳನ್ನು ಕೊನೆಗೊಳಿಸುವ ಸಲುವಾಗಿ ಚರ್ಚಿಸಲು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆಗಸ್ಟ್ 6ರಂದು ಸರ್ವ–ಪಕ್ಷ ಸಭೆ ನಡೆಸಿದ್ದರು. ಅದಕ್ಕೂ ಮುನ್ನ ಅವರು ಸಿಪಿಐ (ಎಂ) ಮತ್ತು ಬಿಜೆಪಿಯ ರಾಜ್ಯ ಮಟ್ಟದ ಸಭೆ ನಡೆಸಿದ್ದರು. ಅದಾದ ನಂತರ, ಇತ್ತೀಚೆಗೆ ಗಲಭೆಗಳು ನಡೆದ ಮೂರು ಜಿಲ್ಲೆಗಳಲ್ಲಿ ಅದೇ ರೀತಿಯ ಚರ್ಚೆಗಳನ್ನು ವ್ಯವಸ್ಥೆಗೊಳಿಸಿದ್ದರು.

ದೇಶದ ಇತರ ಭಾಗಗಳಲ್ಲಿ ಹಿಂದೂತ್ವ ಶಕ್ತಿಗಳು ಹಿಂಸಾಚಾರದ ತಂತ್ರವನ್ನು ಅನುಸರಿಸುವ ಬಹಳ ಮುನ್ನವೇ ಆರ್‌ಎಸ್‌ಎಸ್ ಗ್ಯಾಂಗ್‌ಗಳು ಕೇರಳ ಅದರಲ್ಲೂ ವಿಶೇಷವಾಗಿ ಕಣ್ಣೂರಿನಲ್ಲಿ ದಬ್ಬಾಳಿಕೆ ನಡೆಸಲು ಆರಂಭಿಸಿದ್ದವು ಎನ್ನುವುದನ್ನು ಇಡೀ ದೇಶ ಮನವರಿಕೆ ಮಾಡಿಕೊಳ್ಳಬೇಕು. ಕಳೆದ ಮೂರು ವರ್ಷಗಳಿಂದ ಇತರ ರಾಜ್ಯಗಳಲ್ಲಿ ಬುದ್ಧಿಜೀವಿಗಳಾದ ಗೋವಿಂದ ಪನ್ಸಾರೆ, ಎಂ.ಎಂ. ಕಲ್ಬುರ್ಗಿ ಮೊದಲಾದವರ ಹತ್ಯೆ ಹಾಗೂ ತಥಾಕಥಿತ ಗೋರಕ್ಷಕರಿಂದ ಮುಗ್ಧ ಜನರ ಹತ್ಯೆಗಳು ನಡೆದಿದ್ದನ್ನು ನಾವು ಕಂಡಿದ್ದೇವೆ. ಆದರೆ ಕಳೆದ ನಾಲ್ಕು ದಶಕಗಳಿಂದ ಕಣ್ಣೂರಿನಲ್ಲಿ ಆರ್‌ಎಸ್‌ಎಸ್ ಆಕ್ರಮಣಗಳನ್ನು ನಡೆಸುತ್ತಾ ಬಂದಿದೆ. ಕಣ್ಣೂರು ಮತ್ತು ಕೇರಳದಲ್ಲಿ ಸಿಪಿಐ (ಎಂ) ಮತ್ತು ಎಡ ಚಳವಳಿಯ ಸಂಘಟಿತ ಪ್ರತಿರೋಧ ಒಡ್ಡಿದೆ ಎನ್ನುವುದಷ್ಟೆ ಇಲ್ಲಿರುವ ವ್ಯತ್ಯಾಸ.

ಕೇರಳದಲ್ಲಿ ತನ್ನ ಹಿಂಸಾತ್ಮಕ ತಂತ್ರಗಳು ನಡೆಯುವುದಿಲ್ಲ ಎನ್ನುವುದನ್ನು ಆರ್‌ಎಸ್‌ಎಸ್ ಅರಿತುಕೊಳ್ಳಬೇಕು. ಅದರ ಕುಟಿಲ ತಂತ್ರಗಳನ್ನು ವಿಫಲಗೊಳಿಸಲು ಕೇರಳದ ಜನರು ಸಮರ್ಥರಿದ್ದಾರೆ.

ಅನು:ವಿಶ್ವ

'ಭಾರತದಿಂದ ತೊಲಗಿ' ಎಂಬುದನ್ನು ನವ–ಉದಾರವಾದಿ ಸುಧಾರಣೆಗಳ ತೊಲಗಿಸಿ, ಕೋಮುವಾದವ ತೊಲಗಿಸಿ ಎಂದು ಹೇಳುವುದರೊಂದಿಗೆ ಆಚರಿಸೋಣ.



1942ರ 'ಕ್ವಿಟ್ ಇಂಡಿಯ' (ಭಾರತದಿಂದ ತೊಲಗಿ) ಚಳುವಳಿಯ 75ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ರಾಜ್ಯಸಭೆಯಲ್ಲಿ ಸೀತಾರಾಮ್ ಯೆಚುರಿಯವರ ಭಾಷಣದಿಂದ ಆರಿಸಿದ ಭಾಗ

....ನಾವಿಂದು ಕ್ವಿಟ್ ಇಂಡಿಯಾ ಚಳುವಳಿಯ 75ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದ್ದೇವೆ ಮತ್ತು ಭವಿಷ್ಯದತ್ತ ನೋಡುತ್ತಿದ್ದೇವೆ. ಹೊರಗೆ, ಪ್ರಧಾನ ಮಂತ್ರಿಗಳು ತನ್ನ 'ಮನ್‌ಕೀ ಬಾತ್'ನಲ್ಲಿ ..ಅವರು ಶಿರೋನಾಮೆಯನ್ನು ಅವರೇ ಆರಿಸಿದ್ದರು. ಅಲ್ಲಿ ಅವರೆಂದರು "1942 ರಿಂದ 1947, ಇವು ನಿರ್ಣಾಯಕ ವರ್ಷಗಳು, ಅದರಿಂದಾಗಿ 2017ರಿಂದ 2022, ಆ ಗುರಿಯನ್ನು ಸಾಧಿಸೋಣ."

ಏನದು ಆ ಗುರಿ? 1947ರಲ್ಲಿ ನಾವು ಸ್ವತಂತ್ರರಾದೆವು. ನಮಗೆಲ್ಲರಿಗೂ ಹೆಮ್ಮೆಯಿದೆ. ನಾವೆಲ್ಲ ಸ್ವತಂತ್ರ ಭಾರತದ ಮಕ್ಕಳು. ನಾವು ಆ ಭಾರತೀಯ ರಾಷ್ಟ್ರೀಯತೆಯ, ಭಾರತೀಯ ರಾಷ್ಟ್ರವಾದದ ವಾರಸುದಾರರು. ಅ ಐದು ವರ್ಷಗಳಲ್ಲಿ ಭಾರತದ ವಿಭಜನೆಯನ್ನೂ ಕಂಡೆವು. ಈ ದುರದೃಷ್ಟಕರ ವಿಭಜನೆಗೆ ಕಾರಣವಾದ, ಕೋಮುಧ್ರುವೀಕರಣವನ್ನು, ಅದಕ್ಕೆ ಬ್ರಿಟಿಶರ ನೆರವನ್ನೂ ಕಂಡೆವು. ಹಾಗಾಗಿ, ನೀವು ಆ ಐದು ವರ್ಷಗಳೊಂದಿಗೆ ಹೋಲಿಸುವುದಾದರೆ ಒಂದು ಅನಿಷ್ಟದ ಸಂಕೇತ ಇದೆ. ಅದೊಂದು ಕಾರ್ಮೋಡ. ಒಂದು ಬೆಳ್ಳಿಕಿರಣ ಇಲ್ಲಿದೆ. ಒಂದು ಕಾರ್ಮೋಡವಿದೆ, ...ಗೌರವಾನ್ವಿತ ಪ್ರಧಾನಮಂತ್ರಿಗಳೇ ಹೇಳಿದ್ದು–ಕೋಮುವಾದ ಭಾರತದಿಂದ ತೊಲಗಬೇಕು ಎಂದು. ನಾನು ಆ ಕೋಮುವಾದದ ಬಗ್ಗೆ ಮಾತಾಡುತ್ತಿದ್ದೇನೆ. ಕೋಮುವಾದ ಭಾರತವನ್ನು ಬಿಟ್ಟು ತೊಲಗಬೇಕು ಎಂದು ಭಾರತದ ಪ್ರಧಾನ ಮಂತ್ರಿಗಳು, ನಿಮ್ಮ ಮುಖಂಡರೇ ಹೇಳಿದ್ದು. ನಾನು ಕೇಳುತ್ತೇನೆ, ಅದು ತೊಲಗುವಂತೆ ನಾವೇನಾದರೂ ಮಾಡುತ್ತಿದ್ದೇವೆಯೇ?

ನಾನು ಮಾತಾಡುತ್ತಿರುವುದು ಆ ದೃಢನಿರ್ಧಾರದ ಬಗ್ಗೆ. ಆ ಐದು ವರ್ಷಗಳ ಬಗ್ಗೆ ಮಾತಾಡುವಾಗ, ಈ ಉಪಖಂಡದ ಆ ದುರದೃಷ್ಟಕರ ವಿಭಜನೆಯ ಮತ್ತೊಂದು ಅಂಶವನ್ನು ನಾನೇಕೆ ನಿಮಗೆ ನೆನಪಿಸುತ್ತಿದ್ದೇನೆ? **ಇಂದು ಭಾರತದಿಂದ ತೊಲಗಬೇಕಾದ್ದು ಭಾರತದಿಂದ ತೊಲಗುತ್ತಿಲ್ಲವಾದರೆ, 'ಭಾರತದಿಂದ ತೊಲಗಿ' ಚಳುವಳಿಯ 75ನೇ ವಾರ್ಷಿಕೋತ್ಸವ ಆಚರಿಸುವುದರಲ್ಲಿ ಏನು ಅರ್ಥವಿದೆ?** ನಿರುದ್ಯೋಗವನ್ನು ಹೆಚ್ಚಿಸುತ್ತಿರುವ, ಬಡತನವನ್ನು ಹೆಚ್ಚಿಸುತ್ತಿರುವ, ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಹೆಚ್ಚಿಸುತ್ತಿರುವ, ಈ ಎರಡು ಭಾರತಗಳನ್ನು ಸೃಷ್ಟಿಸುತ್ತಿರುವ ಈ ಆರ್ಥಿಕ ಧೋರಣೆಗಳನ್ನು ನೀವು ತೊಲಗಿಸಬೇಕಾಗುತ್ತದೆ. ಡಾ.ಮನಮೋಹನ್ ಸಿಂಗ್ ಪ್ರಧಾನ ಮಂತ್ರಿಗಳಾಗಿದ್ದ ಕೊನೆಯ ಮೂರು ವರ್ಷಗಳಲ್ಲಿ ಇಲ್ಲಿ ಬಹಳಷ್ಟು ಚರ್ಚೆಗಳನ್ನು ನಡೆಸಿದ್ದೆವು, ಎರಡು ಭಾರತಗಳನ್ನು ಸೃಷ್ಟಿಸುತ್ತಿದ್ದೇವೆ, ಒಂದು ಬಡವರಿಗೆ, ಒಂದು ಶ್ರೀಮಂತರಿಗೆ ಎಂದು, 2014ರಲ್ಲಿ ಜಿಡಿಪಿಯ 49ಶೇಕಡಾವನ್ನು ಭಾರತದ ಜನಸಂಖ್ಯೆಯ ಒಂದು ಶೇಕಡಾ ಮಂದಿ ಹೊಂದಿದ್ದಾರೆ ಎಂದು. ಇಂದು ಎಂತಹ ಸನ್ನಿವೇಶ ಇದೆ? ಸುಮಾರು 60 ಶೇಕಡಾ, 58.4 ಶೇಕಡಾದಷ್ಟು ಜಿಡಿಪಿ –ಅದು ಕಳೆದ ವರ್ಷದ ಅಂಕೆ, ಈಗ ಇನ್ನೂ ಮೇಲೆ ಹೋಗಿರಬಹುದು– ನಮ್ಮ ಜನಸಂಖ್ಯೆಯ ಒಂದು ಶೇಕಡಾ ಮಂದಿಯ ಕೈಗಳಲ್ಲಿದೆ.

1947ರಲ್ಲಿ ಸ್ವತಂತ್ರರಾದಾಗ ಇದ್ದ ನಮ್ಮ ಕನಸಿನ ಭಾರತ ಇದೇನಾ? ಇಂದು ಜಗತ್ತಿನಲ್ಲೇ ಅತಿ ದೊಡ್ಡ ಯುವಶಕ್ತಿಯನ್ನು ಹೊಂದಿರುವ ಭಾರತ ಇದೇನಾ? ನಾವು ಅತ್ಯಂತ ಯುವ ದೇಶ. ಇಂದು **ಭಾರತದಿಂದ ತೊಲಗಿ ಎಂದ ಕ್ವಿಟ್ ಇಂಡಿಯಾದ 75ನೇ ವಾಷಿಕೋತ್ಸವದ ಸಂದರ್ಭದಲ್ಲಿ ಭಾರತದಿಂದ ತೊಲಗಬೇಕಾದ್ದು ಏನಾದರೂ ಇದ್ದರೆ, ಅದು ನನ್ನ ಜನಕೋಟಿಯನ್ನು ದರಿದ್ರರನ್ನಾಗಿಸಿರುವ ನವ–ಉದಾರವಾದಿ ಧೋರಣೆಗಳು; ನನ್ನ ದೇಶವನ್ನು ಒಡೆಯುತ್ತಿರುವ, ಒಂದು ಉತ್ತಮ ಭಾರತವನ್ನು ನಿರ್ಮಿಸುವ ಹೋರಾಟದಲ್ಲಿ ನಮ್ಮ ಜನಗಳ ಐಕ್ಯತೆಯನ್ನು ಒಡೆಯುತ್ತಿರುವ ಈ ಕೋಮುವಾದ.**

ದೃಢನಿರ್ಧಾರ ಏನಿರಬೇಕು ಎಂಬುದನ್ನು ನೀವು ದಯವಿಟ್ಟು ಅರ್ಥ ಮಾಡಿಕೊಳ್ಳಿ. ಅದು ಅಂದಿನ ದಿನಗಳನ್ನು ನೆನಪಿಸಿಕೊಳ್ಳುವುದಷ್ಟೇನಾ–ಒಳ್ಳೇದು, ನೆನಪಿಸಿಕೊಳ್ಳೋಣ– ದೂಷಣೆಗಳನ್ನು ಹಂಚೋಣ; ಯಾರು ಏನು ತಪ್ಪು ಮಾಡಿದರು ಎಂದೂ ಹೇಳಬಹುದು. ಆದರೆ ಪ್ರಶ್ನೆ– ನಾವು ಮುನ್ನಡೆಯುತ್ತೀವೋ ಅಥವ ಹಿಂದೆ ನೋಡುತ್ತೇವೋ?

ನಾನು ಮುಗಿಸುತ್ತಿದ್ದೇನೆ. ನೀವು ಆಝಾದ್ ಹಿಂದ್ ಸೇನೆಯ ಪ್ರಸ್ತಾಪ ಮಾಡಿದಿರಿ, ಈಎಲ್ಲವನ್ನು ಮತ್ತು ರಾಯಲ್ ಇಂಡಿಯನ್ ನೇವಿಯ ಬಗ್ಗೆ ಪ್ರಸ್ತಾಪಿಸಿದ್ದೀರಿ. ಆ ಆವದಿಯ ಒಂದು ಹಾಡು ಇದೆ, ಅದನ್ನು ಹಾಡುತ್ತಲೇ ನಾವೆಲ್ಲ ಬೆಳೆದಿದ್ದೇವೆ. ಅದನ್ನು ನಾವಿಂದ ಮತ್ತೆ ಹಾಡಬೇಕು, ಅದನ್ನು ನಮ್ಮ ನಿರ್ಧಾರವಾಗಿ ಮಾಡಬೇಕು ಎಂದು ನನ್ನ ಭಾವನೆ. ಆ ಹಾಡು ಹೀಗಿತ್ತು:

ಮಂದಿರ್, ಮಸ್ಜಿದ್, ಗಿರ್ಜಾಘರ್ ಮೇಂ
ಬಾಂಟ್ ದಿಯಾ ಭಗ್‌ವಾನ್ ಕೊ
ಧರ್‌ತೀ ಬಾಂಟೀ, ಸಾಗರ ಬಾಂಟಾ,
ಮತ್ ಬಾಂಟೋ ಇನ್‌ಸಾನ್ ಕೊ
(ಗುಡಿ, ಚರ್ಚು, ಮಸೀದಿಗಳಲ್ಲಿ
ದೇವರುಗಳ ಹರಿದು ಹಂಚಿದಿರಿ
ಭೂಮಿ, ಆಗಸ ಹರಿದು ಹಂಚಿದಿರಿ,
ಮನುಜನ ಮಾತ್ರ ಹರಿದು ಹಂಚದಿರಿ)

ಆದ್ದರಿಂದಲೇ, **ಮುನ್ನಡೆ ಭಾರತದ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರವನ್ನು ಬಲಪಡಿಸುವುದಕ್ಕೆ ಇರಬೇಕೇ ವಿನಹ, ಭಾರತದಲ್ಲಿ ಒಂದು ಹಿಂದು–ಪಾಕಿಸ್ತಾನನವನ್ನು ಸೃಷ್ಟಿಸಲು ಅಲ್ಲ.**

ಹಾಗಾಗಿ 'ಕ್ವಿಟ್ ಇಂಡಿಯಾ'ವನ್ನು ನವ–ಉದಾರವಾದಿ ಸುಧಾರಣೆಗಳನ್ನು ತೊಲಗಿಸಿ, ಕೋಮುವಾದವನ್ನು ತೊಲಗಿಸಿ ಎಂದು ಹೇಳುವುದರೊಂದಿಗೆ ಆಚರಿಸೋಣ.

ರಾಜ್ಯಾದ್ಯಂತ ಒಕ್ಕೊರಲಿನ ಕೂಗು "ಕೋಮುವಾದಿ, ಮೂಲಭೂತವಾದಿ, ಭಯೋತ್ಪಾದಕ ಶಕ್ತಿಗಳೇ ! ಭಾರತ ಬಿಟ್ಟು ತೊಲಗಿ !!"

ಕ್ವಿಟ್ ಇಂಡಿಯಾ ಚಳವಳಿಯ 75 ವರ್ಷಗಳ ದಿನಾಚರಣೆಯ ಅಂಗವಾಗಿ ಕೋಮುವಾದಿ, ಮೂಲಭೂತವಾದಿ, ಭಯೋತ್ಪಾದಕ ಶಕ್ತಿಗಳು ದೇಶ ಬಿಟ್ಟು ತೊಲಗುವಂತೆ ಒತ್ತಾಯಿಸಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನೀಡಿದ ಕರೆಯ ಮೇರೆಗೆ ರಾಜ್ಯಾದ್ಯಂತ ಹೆಚ್ಚಿನ ಜಿಲ್ಲಾ ಕೇಂದ್ರಗಳಲ್ಲಿ ವಿಚಾರ ಸಂಕಿರಣ, ಬಹಿರಂಗ ಸಭೆ, ಪ್ರತಿಭಟನೆಗಳನ್ನು ನಡೆಸಿದ ವರದಿಗಳು ಬಂದಿವೆ. ಈ ಸಂದರ್ಭದಲ್ಲಿ ಜಿ.ಎನ್. ನಾಗರಾಜ್ ಬರೆದಿರುವ "ತೊಲಗು ತೊಲಗಾಚೆ ಪರದೇಶಿ ಸುಲಿಗೆಗಾರ" ಎಂಬ ಪುಸ್ತಿಕೆಯನ್ನು ಎಲ್ಲಾ ಕಡೆ ಬಿಡುಗಡೆ ಮಾಡಲಾಯಿತು.

ಕ್ವಿಟ್ ಇಂಡಿಯಾ 75ನೇ ವಾರ್ಷಿಕವನ್ನು ವಿವಿಧ ರೀತಿಯಲ್ಲಿ ಆಚರಿಸಿದ ವರದಿಗಳು –ಬೆಂಗಳೂರು, ಚಿಕ್ಕಬಳ್ಳಾಪುರ, ಮಂಗಳೂರು(ದ.ಕ.), ಕುಂದಾಪುರ (ಉಡುಪಿ), ತುಮಕೂರು, ಗಂಗಾವತಿ (ಕೊಪ್ಪಳ), ಹಾಸನ, ಹೊಸಪೇಟೆ (ಬಳ್ಳಾರಿ), ಕೋಲಾರ, ಮೈಸೂರು, ಶಿವಮೊಗ್ಗ, ತುಮಕೂರು, ದಾಂಡೇಲಿ(ಉ.ಕ.) – ಗಳಿಂದ ಬಂದಿವೆ. ಅವುಗಳಲ್ಲಿ ಕೆಲವು ಇಲ್ಲಿವೆ:



ಮಂಗಳೂರು(ದ.ಕ.) :

ಕ್ವಿಟ್ ಇಂಡಿಯಾ ಚಳುವಳಿಯ 75ನೇ ವಾರ್ಷಿಕ ದಿನವನ್ನು ಮಂಗಳೂರಿನ ಹಂಚಿನ ಕಾರ್ಖಾನೆ ನೌಕರರ ಸಂಘದ ಸಭಾಂಗಣದಲ್ಲಿ ಸಭೆ ಮೂಲಕ ಆಚರಿಸಲಾಯಿತು. ಕ್ವಿಟ್ ಇಂಡಿಯಾ ಚಳುವಳಿ ಹಾಗೂ ಭಾರತ ಸ್ವಾತಂತ್ರ್ಯ ಚಳುವಳಿಗಳಲ್ಲಿ ಕಾಂಗ್ರೆಸಿಗರೊಂದಿಗೆ ಕಮ್ಯೂನಿಸ್ಟರೂ ಕೂಡಾ ಕ್ರಾಂತಿಕಾರಿ ಹೋರಾಟಗಳಲ್ಲಿ ಭಾಗಿಯಾಗಿದ್ದ ಬಗ್ಗೆ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್‍ಯದರ್ಶಿ ವಸಂತ ಆಚಾರಿ ವಿವರಿಸಿದರು. ಆದರೆ ಹಿಂದೂ ಮಹಾಸಭಾ, ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ಯಾರೊಬ್ಬ ಕಾರ್‍ಯಕರ್ತರೂ ಈ ಹೋರಾಟದಲ್ಲಿ ಭಾಗಿಯಾಗಿರಲಿಲ್ಲ. ಒಂದೊಮ್ಮೆ ಧೀರ ಹೋರಾಟದಲ್ಲಿ ಭಾಗಿಯಾಗಿ ಅಂಡಮಾನಿನ ಜೈಲಿನಲ್ಲಿ ಕರಿನೀರಿನ ಶಿಕ್ಷೆಗೊಳಗಾಗಿದ್ದ ವಿ.ಡಿ.ಸರ್ವರ್ಕರ್ ಕ್ಷಮಾ ಯಾಚನೆಯ ಪತ್ರವನ್ನು ಅಂಡಮಾನ್ ಜೈಲಿನಿಂದ ಬ್ರಿಟಿಷ್ ಸರ್ಕಾರಕ್ಕೆ ಬರೆದು ತನ್ನನ್ನು ಬಿಡುಗಡೆಗೊಳಿಸಿದರೆ ಬ್ರಿಟಿಷ್ ಸಾಮ್ರಾಜ್ಯದ ನಮ್ರ ಸೇವಕನಾಗಿರುವೆನೆಂದು ಬೇಡಿಕೊಂಡರು. ಅಂತೆಯೇ ಬಿಡುಗಡೆಗೊಂಡ ಮೇಲೆ ಅವರು ಹಿಂದೂತ್ವದ ಪ್ರಮುಖ ಕಾರ್‍ಯಕರ್ತನಾದರು. ಅಟಲ್ ಬಿಹಾರಿ ವಾಜಪೇಯಿಯವರು ಒಂದು ಸಂದರ್ಭದಲ್ಲಿ ಪೋಲೀಸ್ ಬಂಧನಕ್ಕೆ ಹೆದರಿ, ತಾನು ಪ್ರತಿಭಟನೆಯಲ್ಲಿ ಭಾಗವಹಿಸಲು ಬಂದಿರಲಿಲ್ಲವೆಂದೂ ಸುಮ್ಮನೆ ನೋಡಲು ಬಂದಿದ್ದೇನೆಂದು ಮುಚ್ಚಳಿಕೆ ಬರೆದು ಕೊಟ್ಟು ತಪ್ಪಿಸಿಕೊಂಡರು. ಮುಂದಿನ ದಿನಗಳಲ್ಲಿ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲೇ ಇಲ್ಲ. ಹೀಗೆ ಯಾರೊಬ್ಬ ಹಿಂದೂತ್ವವಾದಿಯೂ ಸ್ವಾತಂತ್ರ್ಯ ಚಳುವಳಿಯಲ್ಲಿ ಇರಲಿಲ್ಲ. ಇದಕ್ಕೆ ವಿರುದ್ಧವಾಗಿ ನೂರಾರು ಕಮ್ಯೂನಿಸ್ಟರು ಸ್ವಾತಂತ್ರ್ಯ ಹೋರಾಟದಲ್ಲಿ ದೇಹ ತ್ಯಾಗ ಮಾಡಿದ, ಸರ್ವಸ್ವವನ್ನು ಕಳೆದುಕೊಂಡ ಉದಾಹರಣೆಗಳಿವೆ ಎಂಬುದಾಗಿ ವಸಂತ ಆಚಾರಿ ವಿವರಿಸಿದರು.

ಚಿಕ್ಕಬಳ್ಳಾಪುರ:

ಬಡತನ, ಭ್ರಷ್ಟಾಚಾರ, ಭಯೋತ್ಪಾದನೆ ಹಾಗೂ ಕೋಮುವಾದದಿಂದ ದೇಶವನ್ನು ಮುಕ್ತಗೊಳಿಸುವ ಮೂಲಕ 2022ರ ವೇಳೆಗೆ ನವಭಾರತವನ್ನು ನಿರ್ಮಾಣ ಮಾಡಬೇಕಾಗಿದೆ. ಇದಕ್ಕಾಗಿ ಪ್ರತಿಯೊಬ್ಬರು ದುಡಿಯಬೇಕಾಗಿದೆ ಎಂದು ಕ್ವಿಟ್ ಇಂಡಿಯಾ ಚಳವಳಿಗೆ 75 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರನ್ನು ಉದ್ದೇಶಿಸಿ ಮಾತನಾಡುತ್ತ ಕರೆ ನೀಡಿದ್ದಾರೆ. ಅದೇ ಇಂದು ಎಲ್ಲಾ ಪತ್ರಿಕೆಗಳಲ್ಲಿ ದೊಡ್ಡ ಜಾಹೀರಾತು ಆಗಿ ಪ್ರಕಟವಾಗಿದೆ. ಇದರಲ್ಲಿ ಎರಡು ವಿಪರ್ಯಾಸಗಳಿವೆ. ಒಂದು ಕ್ವಿಟ್ ಇಂಡಿಯಾ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದಿದ್ದ, ಅದಕ್ಕೆ ದ್ರೋಹವನ್ನೇ ಬಗೆದ ಹಿಂದುತ್ವ ಶಕ್ತಿಗಳ ಪ್ರತಿನಿಧಿಯಾದ ಪ್ರಧಾನಿ ಅದರ ಬಗ್ಗೆ ಮಾತನಾಡುವುದು. ಇನ್ನೊಂದು ಕೋಮುವಾದದ ಮೂಲವಾದ ಈ ಶಕ್ತಿಗಳೇ ದೇಶವನ್ನು ಕೋಮುವಾದದಿಂದ ಮುಕ್ತ ಗೊಳಿಸುವ ಬಗ್ಗೆ ಮಾತನಾಡುವುದು ಎಂದು



ಚಿಕ್ಕಬಳ್ಳಾಪುರದಲ್ಲಿ ನಡೆದ ಚಲೇ ಜಾವ್ ಚಳುವಳಿಯ 75ನೇ ವಾರ್ಷಿಕದ ಸಭೆಯಲ್ಲಿ ಸಿಪಿಐ(ಎಂ) ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಅವರು ಹೇಳಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತು ಸ್ವತಂತ್ರ ಭಾರತದಲ್ಲಿ ಈವರೆಗೆ ಮತ್ತು ಈಗ ಅವರ ನವ-ಉದಾರವಾದಿ ಆಡಳಿತದಲ್ಲಿ ಹಿಂದುತ್ವ ಶಕ್ತಿಗಳ ಧೋರಣೆಗಳ ಬಗ್ಗೆ ವಿವರವಾಗಿ ಮಾತನಾಡಿದ ಅವರು ಈ ಶಕ್ತಿಗಳನ್ನು ದೇಶದಿಂದ ಓಡಿಸದೆ ಸ್ವಾತಂತ್ರ್ಯ ಚಳುವಳಿಯ ಮತ್ತು ಸಂವಿಧಾನದ ಆಶಯಗಳನ್ನು ಪೂರೈಸಲು ಸಾಧ್ಯವಿಲ್ಲ ಎಂದು ಕರೆ ನೀಡಿದರು. ಸಭೆಯಲ್ಲಿ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಮುನಿವೆಂಕಟಪ್ಪ, ಸಿದ್ಧಗಂಗಪ್ಪ, ರಘುರಾಮರೆಡ್ಡಿ, ಜಯರಾಮರೆಡ್ಡಿ, ಮತ್ತಿತರ ನಾಯಕರು ಭಾಗವಹಿಸಿದ್ದರು.

ಬೆಂಗಳೂರು:

ಕ್ವಿಟ್ ಇಂಡಿಯಾ 75 ಅಂಗವಾಗಿ ಸಿಪಿಎಂ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳು ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬಹಿರಂಗ ಸಭೆ ಆಯೋಜಿಸಿದ್ದವು. ಬಹಿರಂಗ ಸಭೆ ಉದ್ದೇಶಿಸಿ ಮಾತನಾಡಿದ ಸಿಪಿಎಂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್ ಮಾತನಾಡಿ, ದೇಶದಲ್ಲಿ ಸ್ವಾತಂತ್ರ್ಯ ಹೋರಾಟವನ್ನು ಮುನ್ನಡೆಸುತ್ತಿದ್ದ ಕಾಂಗ್ರೆಸ್ ಇದುವರೆಗೂ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಎಂದೂ ಬೇಡಿಕೆ ಇಡಲಿಲ್ಲ. ಕೇವಲ ಅಧಿಕಾರ ಹಂಚಿಕೆಗಾಗಿ ಹೋರಾಟ ನಡೆಸುತ್ತಿತ್ತು. ಅದರೆ ಇಡೀ ಹೋರಾಟದಲ್ಲಿ ರೈತರ, ಕಾರ್ಮಿಕರ ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಮೊದಲು ಬೇಡಿಕೆ ಇಟ್ಟು ಅದಕ್ಕೆ ಪೂರಕವಾಗಿ ಚಳವಳಿ, ಹೋರಾಟವನ್ನು ಸಂಘಟಿಸಿದ್ದು ಕಮ್ಯುನಿಷ್ಟ್ ಪಕ್ಷಗಳು ಎಂದರು. ಕಮ್ಯುನಿಷ್ಟ್ ಪಕ್ಷಗಳು ಎತ್ತಿದ ಸಂಪೂರ್ಣ ಸ್ವಾತಂತ್ರ್ಯ ಬೇಡಿಕೆ, ಸಂಘಟಿಸಿದ ಸಮರಶೀಲ ಹೋರಾಟಗಳಿಂದ ಕೇವಲ ಬ್ರಿಟಿಷರಷ್ಟೇ ಅಲ್ಲದೆ ಅಂದಿನ ಕಾಂಗ್ರೆಸ್ ಕೂಡ ಬೆದರಿತ್ತು. ಇಂದು 'ದೇಶಭಕ್ತರು' ಎಂದು ಹೇಳಿಕೊಂಡು ತಿರುಗುವ ಯಾವ ಸಂಘಟನೆಗಳೂ ಅಂದಿನ ಸಂಪೂರ್ಣ ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ಬ್ರಿಟಿಷರಿಗೆ ಕ್ಷಮಾಪಣೆ ಪತ್ರ ಬರೆದುಕೊಟ್ಟ ಸಂಘಟನೆಗಳು, ಅದರ



ನಾಯಕರು ಈಗ ದೇಶಭಕ್ತಿ ಹೆಸರಿನಲ್ಲಿ ಸ್ವಾತಂತ್ರ್ಯ ಹೋರಾಟದ ಆಶಯಗಳನ್ನು ಹಾಳುಮಾಡುತ್ತಾ, ಬಹುರಾಷ್ಟ್ರೀಯ ಕಂಪನಿಗಳಿಗೆ ಮತ್ತು ತಮಗೆ ಚುನಾವಣೆ ವೇಳೆ ದಂಡಿಯಾಗಿ ಹಣ ಪಾವತಿ ಮಾಡಿದವರ ಋಣ ತೀರಿಸಲು ದೇಶವನ್ನು ಅಡವಿಡುತ್ತಿದ್ದಾರೆ. ಇದರಿಂದ ಜನರಿಗೆ ಸಮಾನ ಶಿಕ್ಷಣ, ಉತ್ತಮ, ಉಚಿತ ಆರೋಗ್ಯ ಸಿಗುವುದಿಲ್ಲ. ಜನರು ಮತ್ತೆ ಭಯೋತ್ಪಾದನೆ, ಕೋಮುವಾದ ಜಾತಿ ಪದ್ಧತಿ, ಮತ್ತಿತರ ಅನಿಷ್ಟಗಳ ವಿರುದ್ಧ ಇನ್ನೊಂದು ಕ್ವಿಟ್ ಇಂಡಿಯಾ ಚಳವಳಿ ನಡೆಸಬೇಕಿದೆ ಎಂದು ಕರೆ ನೀಡಿದರು. ಬಹಿರಂಗ ಸಭೆಯಲ್ಲಿ ಬೆಂಗಳೂರು ಉತ್ತರ ಜಿಲ್ಲಾ ಕಾರ್ಯದರ್ಶಿ ಆರ್.ಶ್ರೀನಿವಾಸ್, ಗೌರಮ್ಮ, ಗೋಪಾಲಕೃಷ್ಣ, ಎನ್. ನಾಗರಾಜ್ ಮುಂತಾದ ನಾಯಕರು ಭಾಗವಹಿಸಿದ್ದರು.

ತುಮಕೂರು:

ಸಂಜೆ 7 ಗಂಟೆಗೆ ತುಮಕೂರು ನಗರದ ಗಾಂಧಿನಗರದಲ್ಲಿರುವ ಜನಚಳುವಳಿಯ ಕೇಂದ್ರದಲ್ಲಿ "ಸ್ವಾತಂತ್ರ್ಯ ಚಳುವಳಿಯ ನೈಜ ಇತಿಹಾಸ" ಕುರಿತು ನಡೆದ ವಿಚಾರ ಸಂಕಿರಣದ ಮೂಲಕ ಚಲೇ ಜಾವ್ ಚಳುವಳಿಯ 75ನೇ ವಾರ್ಷಿಕವನ್ನು ಆಚರಿಸಲಾಯಿತು. ಉದ್ಘಾಟಿಸಿ ಮಾತನಾಡಿದ ಜನಪರ ಚಿಂತಕ ಸಿ. ಯತಿರಾಜು ಅವರು ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದ ಬ್ರಿಟೀಷರಿಗೆ ಮುಚ್ಚಳಿಕೆ ಬರೆದುಕೊಟ್ಟ ಬಲಪಂಥಿಯ ನಾಯಕರನ್ನು ರಾಷ್ಟ್ರೀಯ ನಾಯಕರೆಂದು ಬಿಂಬಿಸಲಾಗುತ್ತಿದೆ ಬ್ರಿಟೀಷರೊಂದಿಗೆ ರಾಜಿ ಮಾಡಿಕೊಂಡವರಿಂದು ತಾವೇ ನೈಜ ರಾಷ್ಟ್ರ ಪ್ರೇಮಿಗಳೆಂದು ಮೆರೆದಾಡುತ್ತಿದ್ದಾರೆ, ನೈಜ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ತಿರುಚಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಅಪಾರ ತ್ಯಾಗ ಬಲಿದಾನಗಳನ್ನು ಮಾಡಿದ ಎಡಪಂಥಿಯ ಚಳುವಳಿಗಳು ಹಾಗೂ ಕ್ರಾಂತಿಕಾರಿಗಳ ಹೋರಾಟಗಳನ್ನು ಮರೆಮಾಚಲಾಗುತ್ತಿದೆ ಎಂದು ಆರೋಪಿಸಿದರು. ಅವರು ಸರ್ಕಾರಗಳು ಬಂಡವಾಳಿಗರ, ಬಹುರಾಷ್ಟ್ರೀಯ ಕಂಪನಿಗಳ ಕೈಗೊಂಬೆಯಾಗಿವೆ ನವವಸಹತುಶಾಹಿ, ಬಹುರಾಷ್ಟ್ರೀಯ ಕಂಪನಿಗಳ ರೂಪದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನನು ತನ್ನ ಅಧೀನದಲ್ಲಿರಿಸಿಕೊಂಡು ಜನತೆಯ,



ರೈತ-ಕಾರ್ಮಿಕರ ಶೋಷಣೆಯನ್ನು ತೀವ್ರಗೊಳಿಸಿದೆ. ಸ್ವದೇಶಿ ಮಂತ್ರ ಜಪಿಸುತ್ತಿದ್ದವರು ವಿದೇಶಿ ಕಂಪನಿಗಳ ದಾಸರಂತೆ ವರ್ತಿಸುತ್ತಿದ್ದಾರೆ ರಾಜ್ಯಾಂಗ ವ್ಯವಸ್ಥೆಯನ್ನು ದುಳಿಪಟ ಮಾಡಲಾಗುತ್ತಿದೆ. ಬಲಪಂಥಿಯ ಶಕ್ತಿಗಳು ಚೈನಾದ ವಸ್ತುಗಳನ್ನು ಮಾತ್ರ ವಿರೋಧಿಸುವವರು ಅಮೇರಿಕಾದ ವಸ್ತುಗಳನ್ನೇಕೆ ಬಹಿಷ್ಕರಿಸುತ್ತಿಲ್ಲ ಎಂದು ಟೀಕಿಸಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ಚಿಂತಕ ಪ್ರೊ.ಕೆ. ದೊರೈರಾಜ್‌ರವರು ನೈಜತೆಯನ್ನು ಮರೆಮಾಚಿದ ಕುತಂತ್ರಗಳಿಂದ ಇತಿಹಾಸವನ್ನು ತಿರುಚಿ ಜನತೆಗೆ ಓದಿಸಲಾಗುತ್ತಿದೆ ಇದರ ಬಗ್ಗೆ ಎಚ್ಚರಿಕೆ ಹಾಗೂ ನೈಜ ಇತಿಹಾಸವನ್ನು ಜನಪ್ರಿಯಗೊಳಿಸುವುದು ಅಗತ್ಯವಿದೆ ಎಂದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ರೇವಣ್ಣ, ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಸೈಯದ್‌ಮುಜೀಬ್ ಅವರುಗಳೂ ಮಾತನಾಡಿದರು. ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ವಹಿಸಿದ್ದರು ವೇದಿಕೆಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ಸಿಐಟಿಯು ಜಿಲ್ಲಾಧ್ಯಕ್ಷ ಬಿ. ಉಮೇಶ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಸಿ. ಅಜ್ಜಪ್ಪ ಉಪಸ್ಥಿತರಿದ್ದರು ಆರಂಭದಲ್ಲಿ ಸಿಪಿಐ(ಎಂ) ನಗರ ಸಮಿತಿ ಸದಸ್ಯ ಬಿ.ಷಣ್ಮುಖಪ್ಪ ಸ್ವಾಗತಿಸಿ ನಗರ ಕಾರ್ಯದರ್ಶಿ ಎಸ್. ರಾಘವೇಂದ್ರ ವಂದಿಸಿದರು.

ಕುಂದಾಪುರ :

ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಚಳವಳಿಯ ಸಂಧರ್ಭದಲ್ಲಿ ಬಂಗಾಲದಲ್ಲಿ ಜನಸಂಘದ ಸ್ಥಾಪಕ ಮುಖಂಡ ಶ್ಯಾಮ್ ಪ್ರಸಾದ್ ಮುಖರ್ಜಿಯವರು ಹಿಂದೂ ಮಹಾ ಸಭಾದ ಭಾಗವಾಗಿ ಮುಸ್ಲಿಂ ಲೀಗ್ ಜೊತೆ ಮೈತ್ರಿ ಸರಕಾರ ದಲ್ಲಿ ಅರ್ಥ ಮಂತ್ರಿಯಾಗಿದ್ದರು. ಕ್ವಿಟ್ ಇಂಡಿಯಾ ಚಳುವಳಿಯ ಸಂಧರ್ಭದಲ್ಲಿ ಬ್ರಿಟೀಷರಿಗೆ ಸಹಕರಿಸಬೇಕು ಎಂದು ಕರೆ ನೀಡಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಆರ್ ಎಸ್ ಎಸ್ ನ ಪಾತ್ರ ಹಲವಾರು ಸಂದರ್ಭಗಳಲ್ಲಿ ಬ್ರಿಟೀಷರಿಗೆ ವಿದೇಯಕನಾಗಿರುವುದು ಸ್ಪಷ್ಟವಾಗಿ ಕಾಣಬಹುದಾಗಿದೆ ಎಂದು ಸಿಪಿಐ(ಎಂ) ರಾಜ್ಯ ಮುಖಂಡರಾದ ಕಾಂ.ಕೆ.ಪ್ರಕಾಶ್ ಹೇಳಿದರು. ಹಂಚು ಕಾರ್ಮಿಕ ಭವನದಲ್ಲಿ ಸಿಪಿಐ(ಎಂ) ಪಕ್ಷದ ಆಶ್ರಯದಲ್ಲಿ ನಡೆದ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ "75ನೇ ವರ್ಷಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಐಕ್ಯ ಸ್ವಾತಂತ್ರ್ಯ ಹೋರಾಟದ ಪರಂಪರೆ ಫಲವಾಗಿ ಭಾರತದಲ್ಲಿ ಜಾತ್ಯಾತೀತ ಸಂವಿಧಾನ ರೂಪಗೊಂಡಿತು. ಬ್ರಿಟೀಷರಿಗೆ ವಿದೇಯರಾಗಿದ್ದವರು ಇಂದು ಅಧಿಕಾರದಲ್ಲಿರುವುದು ದೇಶದ ಸಂವಿಧಾನಕ್ಕೆ ದೊಡ್ಡ ಅಪಾಯವಾಗಿದೆ. ಇಂತಹ ಐಕ್ಯತೆ ಒಡೆಯುವ ಕೋಮುವಾದಿ, ಮೂಲಭೂತವಾದಿ, ಭಯೋತ್ಪಾದಕ ಶಕ್ತಿಗಳೇ ದೇಶ ಬಿಟ್ಟು ತೊಲಗಿ ಎಂದು ಸಿಪಿಎಂ ರಾಷ್ಟ್ರ ವ್ಯಾಪಿ ಕರೆ ನೀಡಿದೆ ಎಂದರು. ಸಿಪಿಎಂ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ ಕೆ.ಶಂಕರ್, ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ.ಬಾಲಕ್ರಷ್ಣ ಶೆಟ್ಟಿ ಈ

ಪುಟ 16 ಕ್ಕೆ

ರಾಜಕೀಯ ಎಂಬುದು ವಿಚಾರಗಳ ಸಂಘರ್ಷವಾಗಲಿ, ಆಯುಧಗಳದ್ದಲ್ಲ, ಕೀಳು ತಂತ್ರಗಳದ್ದಲ್ಲ



ಕೇಂದ್ರದ ಹಿರಿಯ ಬಿಜೆಪಿ ಮಂತ್ರಿಗಳಿಗೆ ಕೇರಳದ ಯುವ ಸಿಪಿಐ(ಎಂ) ಸಂಸದನ ಬಹಿರಂಗ ಪತ್ರ

ಜುಲೈ 29 ರಂದು ತಿರುವನಂತಪುರದಲ್ಲಿ ಆರೆಸ್ಸೆಸ್ 'ಕಾರ್ಯವಾಹ' ರಾಜೇಶ್ ಎಂಬಾತನ ಹತ್ಯೆಯನ್ನು ಬಳಸಿಕೊಂಡು ಕೇರಳದ ಎಲ್‌ಡಿಎಫ್ ಸರಕಾರದ ಮೇಲೆ ಕೇಂದ್ರ ಸರಕಾರದ ಹೊಸ ದಾಳ ಆರಂಭಿಸಿತು. ಕೊಲೆ ಮಾಡಿದವರನ್ನು 12 ಗಂಟೆಗಳೊಳಗೆ ಬಂಧಿಸಿದರೂ ರಾಜ್ಯಪಾಲರು ಈ ಬಗ್ಗೆ ಮುಖ್ಯಮಂತ್ರಿಗಳಿಗೆ 'ಸಮನ್ಸ್' ಕಳಿಸುವ ಮಟ್ಟಕ್ಕೆ ಹೋದರು. ಕೇಂದ್ರ ಗೃಹ ಮಂತ್ರಿಗಳು ಮುಖ್ಯಮಂತ್ರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ಹೇಳಿದರು. ಬಿಜೆಪಿ ಹಿಂಸಾತ್ಮಕ ಬಂದ್ ನಡೆಸಿತು. ಮುಖ್ಯಮಂತ್ರಿಗಳು ಬಿಜೆಪಿ ಮತ್ತು ಸಿಪಿಐ(ಎಂ) ಮುಖಂಡರ ಸಭೆ ಕರೆದರೂ ಅದರಿಂದೇನೂ ಪ್ರಯೋಜನವಿಲ್ಲ, ರಾಷ್ಟ್ರಪತಿ ಆಳ್ವಿಕೆ ಹಾಕಬೇಕು ಎಂಬ ಬಿಪೆಪಿ–ಆರೆಸ್ಸೆಸ್ ಮುಖಂಡರ ಕೂಗಾಟದ ನಡುವೆ, ಸರಕಾರದ ವತಿಯಿಂದ ತನ್ನ ಜವಾಬ್ದಾರಿ ಕ್ಷೇತ್ರಗಳಾದ ಹಣಕಾಸು ಅಥವ ರಕ್ಷಣಾ ಇಲಾಖೆಗೆ ಏನೇನೂ ಸಂಬಂಧಪಡದ ವಿಷಯಕ್ಕೆ ಕೇಂದ್ರ ಸಂಪುಟದ ಅತಿ ಹಿರಿಯ ಮಂತ್ರಿಗಳಲ್ಲೊಬ್ಬರಾದ ಅರುಣ್ ಜೇಟ್ಲಿಯವರು ತಿರುವನಂತಪುರಕ್ಕೆ ಧಾವಿಸಿದರು., ರಾಜೇಶ್ ಮನೆಗೆ ಭೇಟಿ ನೀಡಲು, ಎಲ್‌ಡಿಎಫ್ ಸರಕಾರಕ್ಕೆ 'ಎಚ್ಚರಿಕೆ' ನೀಡಲು. ಆದರೆ ಬಿಜೆಪಿ–ಆರೆಸ್ಸೆಸ್‌ನ ಈ ಯೋಜಿತ ತಂತ್ರವೇ ಅವರ ಕುತಂತ್ರವನ್ನು ದೇಶದ ಪ್ರಜಾಪ್ರಭುತ್ವವಾದಿಗಳ ಮುಂದೆ ಬಯಲು ಮಾಡಿದೆ.



ಇತರ ಸಂಘ ಪರಿವಾರದ ಮುಖಂಡರಂತೆ 'ಭಂಡತನ ಮತ್ತು ಕಳಪೆ ಗುಣಮಟ್ಟವೇ ಪ್ರಮುಖ ಲಕ್ಷಣ'ವಾಗಿರುವ ಮುಖಂಡರ ಸಾಲಿಗೆ ಸೇರಿರದ ಹಿರಿಯ ಮುಖಂಡ ಜೇಟ್ಲಿಯವರು 'ಅಲ್ಪ ರಾಜಕೀಯ ಪರಿಗಣನೆಗಳಿಂದ ಮೇಲೆದ್ದು ನಿಂತು ಪ್ರಶ್ನೆಗಳನ್ನು ಪರಿಹರಿಸುವಲ್ಲಿ ಒಂದು ಜವಾಬ್ದಾರಿಯುತ ಪಾತ್ರವನ್ನು' ವಹಿಸುತ್ತಾರೆ ಎಂದು ಆಶಿಸುತ್ತ ಅವರಿಗೆ ತಿರುವನಂತಪುರದ ಭೇಟಿಗೆ ಹೊರಡುವ ಮೊದಲು ಒಂದು ಬಹಿರಂಗ ಪತ್ರವನ್ನು ಸಿಪಿಐ(ಎಂ)ನ ಯುವ ಲೋಕಸಭಾಸದಸ್ಯ ಎಂ.ಬಿ.ರಾಜೇಶ್ ಬರೆದರು. ಸಂಘ ಪರಿವಾರ ಹಣೆಯುತ್ತಿರುವ ಸುಳ್ಳುಗಳನ್ನು ಬಯಲು ಮಾಡಿರುವ ಈ ಪತ್ರದ ಪೂರ್ಣಪಾಠ ಇಲ್ಲಿದೆ. (ಇಲ್ಲಿರುವ ಒತ್ತುಗಳು ನಮ್ಮವು)

ಮಾನ್ಯ ಶ್ರೀ ಅರುಣ್ ಜೇಟ್ಲಿ ಜಿ,

ಉಪರಾಷ್ಟ್ರಪತಿ ಚುನಾವಣೆಯಲ್ಲಿ ನಿಮ್ಮ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ್ದಕ್ಕಾಗಿ ನನ್ನ ಅಭಿನಂದನೆಗಳು. ನೀವು ಎರಡು ಪ್ರಮುಖ ವಿಷಯಗಳ–ಹಣಕಾಸು ಮತ್ತು ರಕ್ಷಣಾ ಇಲಾಖೆಗಳ–ಉಸ್ತುವಾರಿ ನೋಡಿಕೊಳ್ಳುವ ಒಬ್ಬ ಹಿರಿಯ ಸಂಪುಟ ಮಂತ್ರಿಯಾಗಿದ್ದೀರಿ. ಜಿ ಎಸ್ ಟಿ ತಂದೊಡ್ಡಿರುವ ಸಮಸ್ಯೆಗಳನ್ನು ಪರಿಹರಿಸುವುದೂ ಸೇರಿದಂತೆ ಆರ್ಥಿಕ ನಿಧಾನಗತಿ, ಕಡಿಮೆಯಾಗುತ್ತಿರುವ ಉದ್ಯೋಗ ಮೊದಲಾದ ವಿಚಾರಗಳ ಬಗ್ಗೆ ಗಂಭೀರ ಚಿಂತನೆ ನಡೆಸುವ ತುರ್ತು ಇರುವ ಈ ಸಂದರ್ಭದಲ್ಲಿಯೂ ನೀವು ದಕ್ಷಿಣ ಭಾರತದ ತುದಿಯಲ್ಲಿರುವ ನಮ್ಮ ರಾಜ್ಯಕ್ಕೆ ಭೇಟಿ ನೀಡುವ ಶ್ರಮ ವಹಿಸಿದ್ದು ಕೇರಳ ಕುರಿತಾದ ತಮ್ಮ ಕಾಳಜಿಯನ್ನು ಎತ್ತಿ ತೋರುತ್ತದೆ.

ನಿಮಗೆ ನಮ್ಮ ದೇಶಕ್ಕಾಗಿ ಸೇವೆ ಸಲ್ಲಿಸುತ್ತ ಪ್ರಾಣ ತ್ಯಾಗ ಮಾಡಿದ ಧೀರ ಸೈನಿಕರ ಕುಟುಂಬಗಳನ್ನು ಭೇಟಿಯಾಗಲು ನಿಮ್ಮ ಭಾರೀ ಜವಾಬ್ದಾರಿಗಳು ಮತ್ತು ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ಸಮಯ ಎಂದಾದರೂ ಸಿಕ್ಕೀತೋ ಗೊತ್ತಿಲ್ಲ. ಆದರೂ ಸರ್, ಕಳೆದ ವಾರ ಗೂಂಡಾಗಳ ಜಿದ್ದಾಜಿದ್ದಿನಲ್ಲಿ ಪ್ರಾಣ ಕಳೆದುಕೊಂಡ ಒಬ್ಬ ಆರೆಸ್ಸೆಸ್ ಕಾರ್ಯಕರ್ತನ ಮನೆಗೆ ಭೇಟಿ ಕೊಡಲು ಸಮಯ ಹೊಂದಿಸಿಕೊಂಡಿದ್ದೀರಿ. ನಿಮ್ಮ ತತ್ವಸಿದ್ಧಾಂತಗಳು ನನಗೆ ತದ್ವಿರುದ್ಧವಾಗಿದ್ದರೂ, ಅದರೆಡೆಗಿನ ನಿಮ್ಮ ಬದ್ಧತೆಯನ್ನು ಮೆಚ್ಚುತ್ತೇನೆ.

ನಾವು ಕೇರಳೀಯರು ಅತಿಥಿ ಸತ್ಕಾರಕ್ಕೆ ಹೆಸರಾದವರಾದ್ದರಿಂದ ಉತ್ತಮ ಆತಿಥೇಯರಾಗಿ ನಮ್ಮ ಅತಿಥಿಗಳನ್ನು ಉನ್ನತ ಗೌರವದಿಂದ ಸ್ವಾಗತಿಸುತ್ತೇವೆ ಹೊರತು ಕಲ್ಲುಗಳಿಂದಲ್ಲ. ಅದು ಪ್ರತಿಪಕ್ಷಗಳ ನಾಯಕ–ರೇ ಆಗಿರಲಿ ಅಥವಾ **ರಾಜಕೀಯ ಪ್ರವಾಸಕ್ಕಾಗಿ ಭೇಟಿ ಕೊಡುವ ಸಚಿವರಾಗಿರಲಿ, ನಮ್ಮ ಸುಂದರವಾದ ರಾಜ್ಯಕ್ಕೆ ನಾವು ಆದರದಿಂದ ಬರಮಾಡಿಕೊಳ್ಳುತ್ತೇವೆ. ನಮ್ಮ ಗೌರವಾನ್ವಿತ ಮುಖ್ಯಮಂತ್ರಿ ಕಾಮ್ರೇಡ್ ಪಿಣರಾಯಿ ವಿಜಯನ್ ಬೇರೆ ರಾಜ್ಯಗಳಲ್ಲಿ, ನಿಮ್ಮದೇ ಸರಕಾರ ಇರುವ ಮಧ್ಯಪ್ರದೇಶದಲ್ಲಿ ಮತ್ತು ಕರ್ನಾಟಕದಲ್ಲಿ ನಿಮ್ಮ ಪಕ್ಷದ ಕಾರ್ಯಕರ್ತರಿಂದ ಕಹಿ ಅನುಭವವಾಗಿರುವುದನ್ನು ಇಲ್ಲಿ ನೆನಪಿಸುವುದು ಸೂಕ್ತವಾದೀತು ಎಂದು ನಾನು ಭಾವಿಸುತ್ತೇನೆ.** .

ನಿಮ್ಮನ್ನು ಭಂಡತನ ಮತ್ತು ಕಳಪೆ ಗುಣಮಟ್ಟವೇ ಪ್ರಮುಖ ಪಕ್ಷಣವಾಗಿರುವ ಎಂದಿನ ಸಂಘಪರಿವಾರದ ಮುಖಂಡನೆಂದು ಕಾಣಲಾಗುತ್ತಿಲ್ಲ, ಬದಲಾಗಿ ಆಧುನಿಕ ಕಣ್ಣೋಟ ಇರುವ, ಪ್ರಜ್ಞೆ ಇರುವ ದನಿಯೆಂದು ಪರಿಗಣಿಸಲಾಗುತ್ತಿದೆ. ವಿಶಾಲ ಮನೋಭಾವದ ಮತ್ತು ಉನ್ನತ ರಾಜಕೀಯ ಪರಿಜ್ಞಾನವಿರುವ ಸುಶಿಕ್ಷಿತ ಸಮಾಜವಾಗಿರುವ ಕೇರಳ ಇಂಥಾ ನಾಯಕರನ್ನು ಅವರು ಯಾವ ರಾಜಕೀಯ ಪಕ್ಷಕ್ಕೆ ಸೇರಿದ್ದರೂ ಗೌರವದಿಂದ ಕಾಣುತ್ತದೆ. ಆದ್ದರಿಂದ ಅದೇ ಗೌರವ ಹಾಗೂ ಉನ್ನತ ನಿರೀಕ್ಷೆಯೊಂದಿಗೆ, ನಾನು ನಿಮ್ಮೆದುರು ಕೆಲವು ಸರಳ ಸತ್ಯಗಳನ್ನು ತೆರೆದಿಡಲು ಬಯಸುತ್ತೇನೆ.

ನೀವು ನಮ್ಮ ರಾಜ್ಯದ ರಾಜಧಾನಿ ತಿರುವನಂತಪುರಕ್ಕೆ ಮುಖ್ಯಮಂತ್ರಿಗಳು ಒಂದು ಸರ್ವಪಕ್ಷ ಸಭೆಯನ್ನು ಕರೆದಿರುವ ದಿನವೇ ಭೇಟಿ ನೀಡುತ್ತಿದ್ದೀರಿ. ರಾಜಕೀಯ ಹಿಂಸಾಚಾರವನ್ನು ನಿಲ್ಲಿಸಿ ಶಾಂತಿಯನ್ನು ತರಲು ಮತ್ತು ಸೆಳೆತಗಳನ್ನು ನಿವಾರಿಸಲು ಈ ಸಭೆ ಕರೆಯಲಾಗಿದೆ. ಆದ್ದ–ರಿಂದ ಕೆಲವು ಸದ್ಭಾವನೆಯ ಸಂಕೇತಗಳ ಮೂಲಕ ಶಾಂತಿ ಸ್ಥಾಪನೆಯ ಮುತುವರ್ಜಿಗಳಿಗೆ ನಿಮ್ಮ ದೂ ಕಾಣಿಕೆ ನೀಡುವ ಒಂದು ಐತಿಹಾಸಿಕ ಅವಕಾಶವನ್ನು ಪಡೆದಿದ್ದೀರಿ. ರಾಜಧಾನಿಯೊಂದರಲ್ಲೇ ಯಾವುದೇ ಪ್ರಚೋದನೆಯಿಲ್ಲದೆ ಬಿಜೆಪಿ–ಆರೆಸ್ಸೆಸ್ ಯೋಜಿಸಿ, ಕಾರ್ಯರೂಪಕ್ಕಿಳಿಸಿದ ಇತ್ತೀಚಿನ ಹಿಂಸಾತ್ಮಕ ಅತ್ಯಾಚಾರಗಳ ಸರಣಿಯಲ್ಲಿ 120 ಸಿಪಿಐ(ಎಂ) ಕಾರ್ಯಕರ್ತರು ಗಂಭೀರವಾಗಿ ಗಾಯಗೊಂಡಿದ್ದಾರೆ, ನಮ್ಮ ರಾಜ್ಯ ಕಾರ್ಯದರ್ಶಿ ಮತ್ತು ಹಿಂದೆ ರಾಜ್ಯದ ಗೃಹಮಂತ್ರಿಯೂ ಆಗಿದ್ದ ಕಾಂ.ಕೊಡಿಯೇರಿ ಬಾಲಕೃಷ್ಣನ್ ಸೇರಿದಂತೆ ಸಿಪಿಐ(ಎಂ) ಕಾರ್ಯಕರ್ತರು ಮತ್ತು ಮುಖಂಡರ 36 ಮನೆಗಳ ಮೇಲೆ ಹಲ್ಲೆ ಮಾಡಲಾಗಿದೆ ಮತ್ತು ತೀವ್ರ ಹಾನಿಗಳನ್ನುಂಟು ಮಾಡಲಾಗಿದೆ.

ಈ ವೇಳೆಗಾಗಲೇ ನಿಮಗೆ ಕಣ್ಣೂರು ಜಿಲ್ಲೆಯ ಒಬ್ಬ ಯುವತಿ ರಮ್ಯಾಳಿಂದ ಒಂದು ಪತ್ರ ಬಂದಿರಬೇಕು ಎಂದು ಭಾವಿಸುತ್ತೇನೆ. ಈಕೆ ಯಾರೂ ಊಹಿಸಲಾಗದ ಮಾನಸಿಕ ಯಾತನೆಯ ಮೂಲಕ ಹಾದು ಹೋಗುತ್ತಿದ್ದಾಳೆ. ಆಕೆಯ ಗಂಡ , ಶ್ರೀಜನ್ ಬಾಬು, ಒಬ್ಬ ಆಟೋ ರಿಕ್ಷಾ ಡ್ರೈವರ್, ಆತನ ದುಡಿಮೆಯೇ ಅ ಬಡಕುಟುಂಬಕ್ಕೆ ಏಕೈಕ ಆಧಾರ. 'ನಿಮ್ಮ ಸಂಘ ಪರಿವಾರದ ಸದಸ್ಯರು ಆತನ ಮೇಲೆ ಅತ್ಯಂತ ಬರ್ಬರ ಹಲ್ಲೆ ಮಾಡಿದರು. ಕಳೆದ 33 ದಿನಗಳಿಂದ ಆತ ಆಸ್ಪತ್ರೆಯಲ್ಲಿದ್ದಾನೆ, ಹತ್ತಾರು ಸರ್ಜರಿಗಳ ಮೂಲಕ ಆತನ ದೇಹವನ್ನು ಹೊಲೆದಿಡಲಾಗಿದೆ. ಆತ ಇನ್ನೆಷ್ಟು ದಿನ ಆಸ್ಪತ್ರೆಯಲ್ಲಿ ಇರಬೇಕಾದೀತು, ಅಥವ ಜೀವನವಿಡೀ ಹಾಸಿಗೆಯಲ್ಲೆ ಕಳೆಯಬೇಕಾದೀತೇ ಎಂದು ಹೇಳುವ ಸ್ಥಿತಿಯಲ್ಲಿ ಡಾಕ್ಟರುಗಳು ಈಗಲೂ ಇಲ್ಲ. ಇದು ಕೇವಲ ಶ್ರೀಜನ ಬಾಬುವಿನ ಕತೆಯಷ್ಟೇ ಅಲ್ಲ. ಕಳೆದ ಒಂದು ವರ್ಷದಲ್ಲೇ ಆರೆಸ್ಸೆಸ್–ಬಿಜೆಪಿ ಶಕ್ತಿಗಳಿಂದ 400ಕ್ಕೂ ಹೆಚ್ಚು ಸಿಪಿಐ(ಎಂ) ಕಾರ್ಯಕರ್ತರು ಗಂಭೀರ ಪರಿಸ್ಥಿತಿಯಲ್ಲಿದ್ದಾರೆ. ಈ ಅವಧಿಯ;ಲ್ಲಿ ಆರೆಸ್ಸೆಸ್ ಮಂದಿಯಿಂದ 13 ಸಿಪಿಐ(ಎಂ) ಕಾರ್ಯಕರ್ತರು ಮತ್ತು ಇತರರು ಹತರಾಗಿದ್ದಾರೆ.

ಕೆಲವಾದರೂ ರಾಷ್ಟ್ರೀಯ ಟೆಲಿವಿಶನ್ ಚಾನೆಲ್‌ಗಳ ವರದಿಗಾರರು ರಾಜಕೀಯ ಕೊಲೆಗಳ ಕುರಿತು ಸತ್ಯವನ್ನು ಹೊರ ತರುವ ಧೈರ್ಯ ಮಾಡಿದ್ದಾರೆ, ಇದು ಸಂಘ ಪರಿವಾರ ಹೆಣೆದು ಹರಡಿರುವ ಸುಳ್ಳುಗಳನ್ನು ಕೆಡವಿ ಹಾಕಿವೆ. ಅವುಗಳಲ್ಲಿ ಒಂದರತ್ತ ನಿಮ್ಮ ಗಮನ ಸೆಳೆಯ ಬಯಸುತ್ತೇನೆ. 2000

ಪುಟ 10 ಕ್ಕೆ

ಯುವ ಸಂಸದ ಎಂ.ಬಿ.ರಾಜೇಶ್ ಸೂಚಿಸಿದಂತೆ ಬಿಜೆಪಿಯ ಈ ಹಿರಿಯ ಅನುಭವೀ ಮಂತ್ರಿಗಳು ಅಲ್ಪ ರಾಜಕೀಯ ಪರಿಗಣನೆಗಳನ್ನು ಮೀರಿ ನಿಲ್ಲುವ ಪರಿಪಕ್ವತೆಯನ್ನು ತೋರಲಿಲ್ಲ. ಅವರು ರಾಜಭವನದಲಿದ್ದಾಗ ಅಲ್ಲಿಯೇ ಹೊರಗೆ ಪ್ರತಿಭಟನೆಗೆ ನೆರೆದಿದ್ದ ನೂರಾರು ಮಂದಿಯಲ್ಲಿ ಬಿಜೆಪಿ–ಆರೆಸ್ಸೆಸ್ ಕೊಂದಿರುವ 21 ಯುವಜನರ ಕುಟುಂಬದ ಸದಸ್ಯರೂ ಇದ್ದರು. ಜೇಟ್ಲಿಯವರು ಅವರನ್ನು ಭೇಟಿಯಾಗಲಿಲ್ಲ. ರಕ್ಷಣಾ ಮಂತ್ರಿಗಳಾಗಿದ್ದರೂ, ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಗಡಿಗಳಲ್ಲಿ ಪ್ರಾಣತ್ಯಾಗ ಮಾಡಿದ ರಾಜ್ಯದ ಸೈನಿಕರ ಕುಟುಂಬಗಳನ್ನೂ ಭೇಟಿಯಾಗಲಿಲ್ಲ.

ಇದರೊಂದಿಗೆ ಇದೇ ವೇಳೆಯಲ್ಲಿ ದಿಲ್ಲಿ ಮತ್ತು ಉತ್ತರ ಭಾರತದ ಇತರೆಡೆಗಳ ಪತ್ರಿಕೆಗಳಲ್ಲಿ ಪ್ರಕಟವಾದ ಕೇರಳ ರಾಜ್ಯ ಸರಕಾರದ ಜಾಹೀರಾತು ಸಂಘ ಪರಿವಾರದ ಅಪಪ್ರಚಾರವನ್ನು ಬಯಲಿಗೆಳೆಯಿತು. ಕೇರಳ ಏಕೆ ದೇಶದಲ್ಲಿ ನಂ..1 ರಾಜ್ಯವಾಗಿದೆ ಎಂಬುದನ್ನು ಬಿಂಬಿಸುವ ಈ ಜಾಹೀರಾತು ಈ ಏಳು ಅಂಶಗಳನ್ನು ಮುಖ್ಯವಾಗಿ ಪಟ್ಟಿ ಮಾಡಿದೆ: *ಕಾನೂನು–ಸುವ್ಯವಸ್ಥೆಯಲ್ಲಿ ಅತ್ಯುತ್ತಮ–ಅತ್ಯಂತ ಶಾಂತಿಯುತ ರಾಜ್ಯ *ಅತ್ಯುತ್ತಮ ಕೋಮು ಸೌಹಾರ್ದ *ಆಳ್ವಿಕೆಯಲ್ಲಿ ಅತ್ಯುತ್ತಮ *ಕನಿಷ್ಟ ಭ್ರಷ್ಟಾಚಾರದ ರಾಜ್ಯ *ಅತ್ಯುತ್ತಮ ಮಾನವ ಅಭಿವೃದ್ಧಿ ಸೂಚ್ಯಂಕಗಳು *ಅತಿ ಹೆಚ್ಚು ಸಾಕ್ಷರತೆ ಮತ್ತು ತಲಾ ಆದಾಯ *ಅತ್ಯಂತ ಸುರಕ್ಷಿತ, ಆರೋಗ್ಯವಂತ ಮತ್ತು ಪರಿಸರ ಸ್ನೇಹಿ ರಾಜ್ಯ



ಭಾರತದಲ್ಲಿ ಕೇರಳವನ್ನು ನಂಬರ್ 1 ರಾಜ್ಯವಾಗಿ ಮಾಡಿರುವುದೇನು?




ಇಡೀ ದೇಶದಲ್ಲೇ ಅತಿ ಕಡಿಮೆ ಅಪರಾಧ ದರದಿಂದಾಗಿ ಕೇರಳ ಅತಿ ಶಾಂತಿಯುತ ಮತ್ತು ಅತ್ಯುತ್ತಮ ಕಾನೂನು–ಸುವ್ಯವಸ್ಥೆಯ ರಾಜ್ಯ ಎಂದಿದೆ ಇಂಡಿಯಾ ಟುಡೇ ಸರ್ವೆ



ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಕೇರಳ ಮೊದಲ ಸ್ಥಾನದಲ್ಲಿದ್ದು ಅತಿ ಹೆಚ್ಚು ಸರಾಸರಿ ಆಯಸ್ಸು ಮತ್ತು ಅತಿ ಕಡಿಮೆ ಮಗು ಮತ್ತು ತಾಯಿ ಮರಣ ದರಗಳನ್ನು ಹೊಂದಿದೆ.



ಅತಿ ಕಡಿಮೆ ಕೋಮುಗಲಭೆಗಳ ಸಂಖ್ಯೆಯಿಂದ ಕೇರಳ ಇಡೀ ದೇಶದಲ್ಲೇ ಕೋಮುಸೌಹಾರ್ದದ ಪಟ್ಟಿಯಲ್ಲಿ ಅತ್ಯುನ್ನತ ಸ್ಥಾನ ಪಡೆದಿದೆ.



ಇಡೀ ಬಾರತದಲ್ಲಿ ಕೇರಳ ಅತ್ಯಂತ ಆರೋಗ್ಯಕರ ಮತ್ತು ಅತ್ಯಂತ ಪರಿಸರ ಸ್ನೇಹಿ ರಾಜ್ಯವಾಗಿದೆ.

ಅರುಣ್ ಜೇಟ್ಲಿಗೆ ಬಹಿರಂಗ ಪತ್ರ

ಪುಟ 9 ರಿಂದ

ಮತ್ತು 2017ರ ನಡುವಿನ ಅಪರಾಧ ಮಾಹಿತಿಗಳನ್ನು ಆಧರಿಸಿದ ಈ ವರದಿ 86 ಸಿಪಿಐ(ಎಂ) ಮತ್ತು 65 ಆರೆಸ್ಸೆಸ್-ಬಿಜೆಪಿ ಕಾರ್ಯಕರ್ತರು ಜೀವ ಕಳಕೊಂಡಿದ್ದಾರೆ ಎಂದಿದೆ.

ಈ ನೈಜ ಅಂಕಿ-ಅಂಶಗಳು ಕೇರಳದಲ್ಲಿ ಏಕಪಕ್ಷೀಯವಾಗಿ ಆರೆಸ್ಸೆಸ್ ಮೇಲಷ್ಟೇ ಗುರಿಯಿಟ್ಟ ದಾಳಿಗಳು ನಡೆಯುತ್ತಿವೆ ಎಂಬ ಮಿಥ್ಯೆಯನ್ನು ಸ್ಫೋಟಗೊಳಿಸುತ್ತದೆ, ಇಲ್ಲಿನ ರಾಜಕೀಯ ಹಿಂಸಾಚಾರದ ಸತ್ಯವನ್ನು ಹೊರಗೆಡಹುತ್ತದೆ. **ಆರೆಸ್ಸೆಸ್‌ನ ಅತಿ ಹೆಚ್ಚು ಶಾಖೆಗಳು ಇರುವುದು ಮೋದೀಜೀಯವರ ಗುಜರಾತಿನಲ್ಲೂ ಅಲ್ಲ, ಯೋಗೀಜೀಯವರ ಉತ್ತರಪ್ರದೇಶದಲ್ಲೂ ಅಲ್ಲ, ಎಡ ಆಳ್ವಿಕೆಯ ಕೇರಳದಲ್ಲೇ ಅತಿ ಹೆಚ್ಚು.** ಅವರೇ ಒಪ್ಪಿಕೊಂಡಿರುವ ಈ ಒಂದು ಸಂಗತಿಯೇ ಅವರ ಪ್ರಜಾಪ್ರಭುತ್ವ ಹಕ್ಕನ್ನು ಉಲ್ಲಂಘಿಸಲಾಗುತ್ತಿದೆ ಎಂಬ ತರ್ಕವನ್ನು ಬಯಲಿಗೆಳೆಯಲು ಸಾಕು.

ವಿವಿಧ **ಅಪರಾಧಗಳ ಅಂಕಿ-ಅಂಶಗಳು ಕೇರಳ ಉತ್ತಮವೇ,ಅಥವ ನಿಮ್ಮ ಪಕ್ಷ ಅಧಿಕಾರದಲ್ಲಿರುವ ಉತ್ತರ ಪ್ರದೇಶ, ಅಥವ ಮಧ್ಯಪ್ರದೇಶ ಅಥವ ಗುಜರಾತ್ ಉತ್ತಮವೇ ಎಂಬುದನ್ನು ಹೇಳುತ್ತವೆ.** ಈ ರಾಜ್ಯಗಳಲ್ಲಿನ ಅಪರಾಧಗಳು ಮತ್ತು ಅತ್ಯಾಚಾರಗಳು ರಾಷ್ಟ್ರೀಯ ಟೆಲಿವಿಶನ್‌ಗಳಲ್ಲಿ ಪ್ರೈಮ್‌ಟೈಮ್ ಚರ್ಚೆಗಳ ವಿಷಯಗಳಾಗಿಲ್ಲ. ಉತ್ತರ ಪ್ರದೇಶ ವಿಧಾನಸಭೆಯಲ್ಲಿ 18.07.2017ರಂದು ನೀಡಿದ ಒಂದು ಅಧಿಕೃತ ಉತ್ತರ ಯೋಗೀಜೀ ಅಧಿಕಾರಕ್ಕೆ ಬಂದ ನಂತರ ಎರಡೇ ತಿಂಗಳಲ್ಲಿ 729 ಕೊಲೆಗಳು ಮತ್ತು 803 ಮಾನಭಂಗಗಳು ನಡೆದಿವೆ ಎಂಬ ಆಘಾತಕಾರಿ ಅಂಕಿ-ಅಂಶ ಮಾಧ್ಯಮಗಳಲ್ಲಿ ಯಾವುದೇ ಆರ್ಭಟವನ್ನು ಉಂಟು ಮಾಡಲಿಲ್ಲ! ವಿಫಲಗೊಂಡಿರುವ ರಾಜ್ಯಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಆದರೆ ಕೇರಳದಂತಹ ನೂರಕ್ಕೆ ನೂರು ಸಾಕ್ಷರ ಮತ್ತು ಸದಾ ದೇಶದಲ್ಲಿ ಬೆಳಗುವ ರಾಜ್ಯದಲ್ಲಿ ಆಗೊಮ್ಮೆ ಈಗೊಮ್ಮೆ ನಡೆಯುವ ಮತ್ತು ಸಣ್ಣ ಪುಟ್ಟ ಘಟನೆಗಳು ಗಂಭೀರ ಆತಂಕವನ್ನು ಉಂಟು ಮಾಡುತ್ತವೆ. ನಮಗೂ ಈ ಬಗ್ಗೆ ಬಹಳಷ್ಟು ಪ್ರಜ್ಞೆಯಿದೆ, ಆರೆಸ್ಸೆಸ್‌ನಂತಲ್ಲದೆ, ಸಿಪಿಐ(ಎಂ) ಒಂದು ಜವಾಬ್ದಾರಿಯುತ ರಾಜಕೀಯ ಪಕ್ಷ, ನಮ್ಮ ಸರಕಾರ ಈಗಾಗಲೇ ಹಿಂಸಾಚಾರವನ್ನು ಶಾಶ್ವತವಾಗಿ ಕೊನೆಗೊಳಿಸಲು ಅಗತ್ಯ ಹೆಜ್ಜೆಗಳನ್ನು ಇಟ್ಟಿದೆ.

ನಾನು ಈ ಮಾಹಿತಿಗಳನ್ನು ಉದ್ಧರಿಸುತ್ತಿರುವುದು ಕೊಲೆಗಳನ್ನು ಸಮರ್ಥಿಸಲು ಅಲ್ಲ, ಅಥವ ಹೊಲಸು ಆಟವೊಂದರಲ್ಲಿ ತೊಡಗಲು ಅಲ್ಲ, ಬದಲಿಗೆ, 'ಕೆಂಪು ಭಯೋತ್ಪಾದನೆ' ಎಂಬ ಕಥನವನ್ನು ಹೆಣೆಯುವ ಮತ್ತು ಆರೆಸ್ಸೆಸ್-ಬಿಜೆಪಿಯ ಮುಗ್ಧತೆಯ ನಟನೆಯ ಗೋಸುಂಬೆತನವನ್ನು ನಿಮಗೆ ಮನವರಿಕೆ ಮಾಡಿಕೊಡುವುದಕ್ಕಷ್ಟೇ. ರಕ್ತದಿಂದ ತೊಯ್ದ ಕೈಗಳನ್ನು ಹಿಡಿದುಕೊಂಡು ನಾವು ಪೀಡಿತರಷ್ಟೇ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ.

ನೀವು ಆರೆಸ್ಸೆಸ್ ಹಲ್ಲೆಗೊಳಗಾಗಿರುವ ಈ ಎಲ್ಲ ಕುಟುಂಬಗಳನ್ನು ಅಥವ ಸ್ಥಳಗಳಿಗೆ ಭೇಟಿ ನೀಡಬೇಕೆಂದೇನೂ ನಾನು ನಿರೀಕ್ಷಿಸುವುದಿಲ್ಲ. ಅದು ಸಾಧ್ಯವೂ ಇಲ್ಲ. ಆದರೆ ಕೇರಳ ಸರಕಾರ ಮುತುವರ್ಜಿ ವಹಿಸಿರುವ ಶಾಂತಿ ಮಾತುಕತೆಗಳ ಮೊದಲು ಒಂದು ಸಕಾರಾತ್ಮಕ ಸಂದೇಶ ನೀಡಬೇಕೆಂಬ ಪ್ರಾಮಾಣಿಕ ಇಚ್ಛೆ ನಿಮಗಿದ್ದರೆ ಕಾಂ. ವಿಷ್ಣು ಅವರನ್ನು ಕಳಕೊಂಡ ಕುಟುಂಬವನ್ನಾದರೂ ಭೇಟಿ ಮಾಡಿ. ಆತನನು ಹಾಡುಹಗಲೇ, ನಗರದ ಮಧ್ಯದಲ್ಲೇ ಆರೆಸ್ಸೆಸ್ ಮಂದಿ ಅಮಾನುಷವಾಗಿ ಕೊಚ್ಚಿ ಸಾಯಿಸಿದರು. ಇಂತಹ ಇನ್ನೂ ಹಲವಾರು ಉದಾಹರಣೆಗಳನ್ನು ನಿಮಗೆ ನೀಡಬಲ್ಲೆ.

ನಿಮ್ಮ ಆರೆಸ್ಸೆಸ್ ಯಜಮಾನರುಗಳು ಅವರು ಕೊಂದಿರುವ ಯಾವುದೇ ಸಿಪಿಐ(ಎಂ) ಕಾರ್ಯಕರ್ತರ ಕುಟಂಬವನ್ನು ಭೇಟಿ ಮಾಡಲು ನಿಮಗೆ ಬಿಡುವುದಿಲ್ಲ ಎಂಬುದು ಖಂಡಿತವಾಗಿ ನನಗೆ ಗೊತ್ತು. ಆದ-ರೆ ನನ್ನದೊಂದು ಸವಿನಯ ಸೂಚನೆ. ನಿಮಗೆ ಸಾಧ್ಯವಿದ್ದರೆ, ಇಬ್ಬರು ಹದಿಹರೆಯದ ಆರೆಸ್ಸೆಸ್ ಕಾರ್ಯಕರ್ತರ ಕುಟುಂಬಗಳಿಗೆ ಸಾಂತ್ವನ ಹೇಳಲು ಸ್ವಲ್ಪ ಪುರುಸೊತ್ತು ಮಾಡಿಕೊಳ್ಳಿ. ಈ ಇಬ್ಬರು, **ಅಲೆಪ್ಪಿ ಜಿಲ್ಲೆಯ ಅನಂತು ಮತ್ತು ತ್ರಿಶೂರ್ ಜಿಲ್ಲೆಯ ನಿರ್ಮಲ್ ನಿಯಮಿತವಾಗಿ ಶಾಖೆಗಳಿಗೆ ಹೋಗುತ್ತಿದ್ದರು. ಅವರಿಬ್ಬರನ್ನೂ ಅವರ ಆರೆಸ್ಸೆಸ್ ಸಹಯೋಗಿಗಳೇ ಅಮಾನುಷವಾಗಿ ಮುಗಿಸಿ ಬಿಟ್ಟರು! ಈ ಇಬ್ಬರ ಹೆಸರುಗಳು ನಿಮ್ಮ ಪಕ್ಷದ ಎಂಪಿಗಳು ಸಂಸತ್ತಿನಲ್ಲಿ ಓದಿ ಹೇಳಿದ ಪಟ್ಟಿಯಲ್ಲಿ ಏಕೆ ಕಂಡಿಲ್ಲ ಎಂದು ಅವರನ್ನು ದಯವಿಟ್ಟು ಕೇಳಬಲ್ಲಿರಾ?** ತಮ್ಮ ಸಹಯೋಗಿಗಳನ್ನೇ ಕೊಂದುದಕ್ಕಾಗಿ ಬಂಧಿತರಾಗಿರುವ ಯಾವುದೇ ಆರೆಸ್ಸೆಸ್ ಅಥವ ಬಿಜೆಪಿ ಕಾರ್ಯಕರ್ತರ ವಿರುದ್ಧ ಶಿಸ್ತು ಕ್ರಮವನ್ನು ಏಕೆ ಕೈಗೊಂಡಿಲ್ಲ?

ಈ ಪತ್ರವನ್ನು ಮುಗಿಸುವ ಮೊದಲು ಆರೆಸ್ಸೆಸ್ ನಮ್ಮ ರಾಜ್ಯದ ವಿರುದ್ಧ ಬಹಳ ಚಾಕಚಕ್ಯತೆಯಿಂದ ಯೋಜಿಸಿ ಹರಿಯ ಬಿಟ್ಟಿರುವ ಪ್ರಚಾರದತ್ತ ನಿಮ್ಮ ಗಮನ ಸೆಳೆಯ ಬಯಸುತ್ತೇನೆ. ಇಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬೇಕೆಂಬ ಅವರ ಬೇಡಿಕೆಯಿಂದ ಅವರ ಆಶಯಗಳು ಈಗ ಸ್ಪಷ್ಟವಾಗಿ ಕಾಣುತ್ತವೆ. ಆದರೆ ಈ ಸಂಕುಚಿತ ರಾಜಕೀಯ ಉದ್ದೇಶವನ್ನು ಸಾಧಿಸಲು ಅವರು ಕೇರಳದ ಇತಿಹಾಸವನ್ನು ಮಾತ್ರವಲ್ಲ, ಸಾಮಾಜಿಕ-ಆರ್ಥಿಕ ಸಾಧನೆಗಳ ಭವ್ಯ ಮತ್ತು ಅತ್ಯುತ್ತಮ ದಾಖಲೆಗಳನ್ನೂ ಹೀಗಳೆದಿದ್ದಾರೆ.

ರಾಜಕೀಯ ಹತಾಶೆಯಿಂದ ಈ ರಾಜ್ಯವನ್ನು ಹೀಯಾಳಿಸುವ ತಂತ್ರಗಳನ್ನು ಮೊದಲು ಹರಿಬಿಟ್ಟವರು ಬೇರಾರೂ ಅಲ್ಲ, ಸ್ವತಃ ಪ್ರಧಾನ ಮಂತ್ರಿಗಳೇ, ಕಳೆದ ವಿಧಾನಸಭಾ ಚುನಾವಣೆಗಳ ವೇಳೆಯ ಭಾಷಣದಲ್ಲಿ ಕೇರಳವನ್ನು ಸೊಮಾಲಿಯಾದೊಂದಿಗೆ ಹೋಲಿಸುವುದರೊಂದಿಗೆ. ಈ ಹೇಳಿಕೆಗೆ ವಿಶ್ವಾದ್ಯಂತದಿಂದ ಕೇರಳೀಯರು ಬೃಹತ್ ಪ್ರಮಾಣದಲ್ಲಿ ಪ್ರತಕ್ರಿಯಿಸಿದ್ದನ್ನು ಕಂಡಾದರೂ ನೀವೇಕೆ ಪಾಟ ಕಲಿತಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತದೆ. ಆನಂತರ ನಿಮ್ಮ ತುತ್ತೂರಿಯಂತೆ ವರ್ತಿಸುತ್ತಿರುವ ಟೆಲಿವಿಶನ್ ವಾಹಿನಿಯೊಂದು ಕೇರಳವನ್ನು ಪಾಕಿಸ್ತಾನದೊಂದಿಗೆ ಸಮೀಕರಿಸಿದಾಗಲೂ ಮತ್ತೊಮ್ಮೆ ಆಕ್ರೋಶದ ಬಿಸಿಯನ್ನು ಎದುರಿಸಬೇಕಾಯಿತು. ಅದು ಬೇಗನೇ ತಮ್ಮ ಟಿಪ್ಪಣಿಯನ್ನು ಹಿಂತೆಗೆದುಕೊಂಡು ಬೇಷರತ್ ಕ್ಷಮೇ ಕೇಳಬೇಕಾಗಿ ಬಂತು.

ಕೇರಳದ ಜನತೆ, ರಾಜಕೀಯ ಭಿನ್ನಾಭಿಪ್ರಾಯಗಳೇನೇ ಇದ್ದರೂ, ತಮ್ಮ ಆತ್ಮಗೌರವಕ್ಕೆ ಚ್ಯುತಿ ಬರಲು ಎಂದೂ ಬಿಡುವುದಿಲ್ಲ. ನಮ್ಮ **ಆತ್ಮಗೌರವದ ಬೇರುಗಳು ಬ್ರಿಟಿಶ್ ಸಾಮ್ರಾಜ್ಯಶಾಹಿಯ ವಿರುದ್ಧ ಮತ್ತು ಪಾಳೆಯಗಾರೀ ಭೂಮಾಲಕರ ವಿರುದ್ಧ ಹೋರಾಟದ ನಮ್ಮ ಇತಿಹಾಸದಲ್ಲಿ ಕಾಣುತ್ತವೆ. ನಿಮಗೆ ಇದು ಚೆನ್ನಾಗಿ ತಿಳಿದಿದೆ ಎಂದು ನನಗೆ ಗೊತ್ತಿದೆ. ಇಂತಹ ಹೆಮ್ಮೆಯ ಇತಿಹಾಸವನ್ನು ಹೊಂದಿರದವರು ಇದನ್ನು ಸುಲಭವಾಗಿ ಅರಗಿಸಿಕೊಳ್ಳಲಾರರು. ಸಂಘ ಪರಿವಾರದ ಅಳತೆಗೋಲು ಈ ರಾಜ್ಯ ಮತ್ತು ನಮ್ಮ ಪ್ರಗತಿಶೀಲ ಸಮಾಜವನ್ನು ಅಳೆಯಲು ಏನೇನೂ ಸಾಲದು.** ಈ ರಾಜ್ಯ ಎಲ್ಲ ರಂಗಗಳಲ್ಲೂ ಭಾರತದಲ್ಲಿ ಇತರೆಲ್ಲರಿಗಿಂತ ಬಹಳ ಮುಂದಿದೆ ಎಂದು ಹೆಮ್ಮೆಯಿಂದ ಹೇಳಬಲ್ಲೆ. ಈ ಅಂಶವನ್ನು ಸಾಬೀತು ಮಾಡಲು ಎನ್‌ಸಿಆರ್‌ಬಿ(ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ) ಮತ್ತು ಎನ್‌ಎಫ್‌ಹೆಚ್‌ಎಸ್(ರಾಷ್ಟ್ರೀಯ ಕುಟುಂಬ ಆರೋಗ್ಯ ಸರ್ವೆ) ಮಾಹಿತಿಗಳನ್ನು ಲಗತ್ತಿಸಿದ್ದೇನೆ.

ಅಂತಿಮವಾಗಿ, ನಮ್ಮ ದೇಶದ ಒಬ್ಬ ಅತಿ ಹಿರಿಯ ಮುಖಂಡರಾಗಿ ನೀವು ಅಲ್ಪ ರಾಜಕೀಯ ಪರಿಗಣನೆಗಳಿಂದ ಮೇಲೆದ್ದು ನಿಂತು ಪ್ರಶ್ನೆಗಳನ್ನು ಪರಿಹರಿಸುವಲ್ಲಿ ಒಂದು ಜವಾಬ್ದಾರಿಯುತ ಪಾತ್ರವನ್ನು ವಹಿಸುತ್ತೀರಿ ಎಂದು ಆಶಿಸುತ್ತೇನೆ.


ಶಾಂತಿ ಪ್ರಕ್ರಿಯೆಯಲ್ಲಿ ಹೃದಯಾಂತರಾಳದಿಂದ ಭಾಗವಹಿಸಿ ಎಂದು ನಿಮ್ಮ ಸಹಯೋಗಿಗಳಿಗೆ ಸಲಹೆ ನೀಡಿ ಎಂಬುದು ನನ್ನ ಕೋರಿಕೆ. ಪ್ರತಿಯೊಂದು ಮಾನವ ಜೀವದ ಹಾನಿ-ಅವರು ಯಾವುದೇ ಪಕ್ಷ-ಕ್ಕೆ ಸೇರಿದ್ದರೂ- ಖೇದಕರ ಸಂಗತಿ. ರಾಜಕೀಯ ವಿಚಾರಗಳ ಸಂಘರ್ಷವಾಗಲಿ, ಆಯುಧಗಳದ್ದಲ್ಲ. ಅದನ್ನು ಖಾತ್ರಿಪಡಿಸಲು ಒಟ್ಟಾಗಿ ಶ್ರಮಿಸೋಣ.

ಸಂಸತ್ತಿನಲ್ಲಿ ಆಗಸ್ಟ್ 8, 2017ರಂದು ಅಧಿವೇಶನದ ಪುನರಾರಂಭದಲ್ಲಿ ನಿಮ್ಮನ್ನು ಭೇಟಿಯಾಗುತ್ತೇನೆ.


ನಿಮ್ಮ ವಿಶ್ವಾಸಿ

ಎಂ ಬಿ ರಾಜೇಶ್, ಸಂಸತ್ ಸದಸ್ಯ.


ಉತ್ತರ ಪ್ರದೇಶದಲ್ಲಿ ಬಲವಂತದ ಮದುವೆಗಾಗಿ ಮಹಿಳೆಯರ ಅಪಹರಣ ಕೇರಳದ 24 ಪಟ್ಟು!




ಉತ್ತರ ಪ್ರದೇಶದಲ್ಲಿ ದೊಂಬಿಗಳ ಸಂಖ್ಯೆ 724, ಕೇರಳದ್ದು ಸೊನ್ನೆ!




ಕೊಲೆಯ ದರದಲ್ಲಿ ಕೇರಳದ 4.5 ಪಟ್ಟು ಜಾರ್ಖಂಡದ್ದು, ಬಿಜೆಪಿ ರಾಜ್ಯಗಳ ಸರಾಸರಿ ಕೇರಳದ 3 ಪಟ್ಟು




ಗಲಭೆಗಳ ಸಂಖ್ಯೆ -ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಮತ್ತು ಕೇರಳದಲ್ಲಿ




ಪೋಲೀಸ್ ಕಸ್ಟಡಿಯಲ್ಲಿ ಸಾವುಗಳು




ಉತ್ತರ ಪ್ರದೇಶದಲ್ಲಿ ದಲಿತರ ಮೇಲೆ ದೌರ್ಜನ್ಯದ ಪ್ರಕರಣಗಳು 659, ಕೇರಳದ್ದು ಸೊನ್ನೆ!



ವರದಕ್ಷಿಣೆ ಸಾವುಗಳು-ಪ್ರತಿ 10 ಲಕ್ಷದಲ್ಲಿ



ಮಧ್ಯಪ್ರದೇಶದ ಅಪಹರಣಗಳ ದರ ಕೇರಳದ 9 ಪಟ್ಟು



ಚೀನಾ ಭೇಟಿ – 5



ಲೋಂಗ್ ಮಾರ್ಚ್ ಓಪನ್ ಮ್ಯೂಸಿಯಂನಲ್ಲಿ

ವಸಂತ ಆಚಾರಿ

ಮಾವೋ ತ್ಸೆ ತುಂಗ್‌ರವರ ನೇತೃತ್ವದಲ್ಲಿ ಲೋಂಗ್ ಮಾರ್ಚ್ ಪ್ರಾರಂಭಿಸಿದ ಸ್ಥಳವನ್ನು ಪ್ರವಾಸಿಗರಿಗೆ ವೀಕ್ಷಿಸಲು ಸಾಧ್ಯವಾಗುವಂತೆ ಆ ಒಟ್ಟು ಪ್ರದೇಶವನ್ನು ಕ್ರಾಂತಿಕಾರಿ ಓಪನ್ ಮ್ಯೂಸಿಯಂನ ರೀತಿಯಲ್ಲಿ ರಕ್ಷಣೆ ಮಾಡಲಾಗಿದೆ. ದಿನಾ ಸಾವಿರಾರು ಜನ ಬಂದು ವೀಕ್ಷಿಸಿ ಚೀನಾದ ರಾಷ್ಟ್ರಗೀತೆಯನ್ನು ಅಲ್ಲಿ ಹಾಡುತ್ತಾರೆ. ಇದನ್ನು ಕಂಡಾಗ ನಮಗೆ ಮೈ ಜುಮ್ ಎನ್ನುತ್ತಿತ್ತು. ಅಂದಿನ ಕಾಲದಲ್ಲಿ ಆ ಕ್ರಾಂತಿವೀರರು ಪಟ್ಟಿರುವ ಶ್ರಮ ಇಂದು ಚೀನಾದ ಜನತೆ ಸುಖಿ ಜೀವನವನ್ನು ನಡೆಸುವಂತಾಗಿದೆ. ಪ್ರವಾಸಿ ಕೇಂದ್ರವಾಗಿ ಪರಿವರ್ತನೆಯಾಗಿದೆ ಈ ಮ್ಯೂಸಿಯಂ. ಮಾತ್ರವಲ್ಲದೆ ಪ್ರಾರಂಭದ ಹಂತದಲ್ಲಿ 'ಸೋವಿಯತ್ ಸೊಸೈಟಿ ಆಫ್ ಚೈನಾ'ವನ್ನು ಸ್ಥಳೀಯ ಕಮ್ಯೂನಿಸ್ಟ್ ಸರಕಾರದ ರೀತಿಯಲ್ಲಿಯೇ ಸ್ಥಾಪಿಸಿದ್ದಾರೆ. ಅಲ್ಲಿ ಸರಕಾರಕ್ಕೆ ಸಂಬಂಧಿಸಿದ ಚೆಯರ್‌ಮೆನ್, ಬೇರೆ ಬೇರೆ ಇಲಾಖೆಗಳಿಗೆ ಸಚಿವಾಲಯಗಳು, ಆ ಸಚಿವರು ತಮ್ಮ ಕೆಲಸ ಕಾರ್ಯ ನಿರ್ವಹಿಸಲು ಪ್ರತ್ಯೇಕ ಕೊಠಡಿ–ಮೇಜು, ಚಯರ್ ಹಾಗೆನೇ ಆಯಾಸ ಪರಿಹರಿಸಲು ಬೆಡ್ ಹಾಗೂ ಹೊದಿಕೆಗಳನ್ನು ಇಡುವ ವ್ಯವಸ್ಥೆ ಇದ್ದಿರುವ ಆ ಮರದ ಉಪಕರಣಗಳನ್ನು ಹಾಗೆನೇ ರಕ್ಷಿಸಿ ಇಡಲಾಗಿದೆ. ಹಣಕಾಸು ಸಚಿವರ ಕೊಠಡಿ, ಹಣಕಾಸು ಇಲಾಖೆ, ಅಂದು ಸರಕಾರ ಮುದ್ರಿಸಿದ ಹಣ ಹಾಗೂ ಅದರಲ್ಲಿ ಲೆನಿನ್‌ರವರ ಚಿತ್ರವನ್ನು ಮುದ್ರಿಸಲಾಗಿತ್ತು. ಟ್ರೆಜರಿಗೆ ಬೇರೇನೆ ಕೊಠಡಿ, ಅದರಲ್ಲಿ ಮರದ ಕಪಾಟುಗಳು, ಅಂದಿನ ಬ್ಯಾಂಕಿನ ವ್ಯವಹಾರ ಸಂಬಂಧಿಸಿದ ದಾಖಲೆ ಪತ್ರಗಳ ಪ್ರತಿಗಳನ್ನು ಕೂಡಾ ಜೋಪಾನವಾಗಿ ಇಡಲಾಗಿದೆ. ರಕ್ಷಣಾ ಇಲಾಖೆಯ ಮೇಲಾಧಿಕಾರಿಗಳ ಕೊಠಡಿಗಳು, ಆಯುಧ ಸಾಮಾಗ್ರಿಗಳು ಹಾಗೂ ಅವರು ಅಂದು ಧರಿಸುತ್ತಿದ್ದ ಸಮವಸ್ತ್ರಗಳನ್ನು ಕೂಡಾ ಹಾಗೆನೇ ಇಡಲಾಗಿದೆ. ಸರಕಾರದ ಪ್ರತಿನಿಧಿಗಳು ಸಭೆ ಸೇರಲು ಬೇಕಾದ ಮೀಟಿಂಗ್ ಹಾಲ್, ಅದಕ್ಕೆ ಬೇಕಾದ ಸಲಕರಣೆ, ಹಾಗೂ ಮೀಟಿಂಗ್ ಮುಗಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಲು ಪ್ರತ್ಯೇಕ ವ್ಯವಸ್ಥೆಯನ್ನು ಅಲ್ಲಿ ಕಾಣಬಹುದಾಗಿದೆ. ಇವೆಲ್ಲವೂ ಈ ಓಪನ್ ಮ್ಯೂಸಿಯಂ ವ್ಯಾಪ್ತಿಯಲ್ಲಿ ಕಾಣಬಹುದು.

ಲೋಂಗ್ ಮಾರ್ಚ್ ಸಂದರ್ಭದಲ್ಲಿ ಕೆಂಪು ಸೈನಿಕರಿಗೆ ಕುಡಿಯಲು ಶುದ್ಧವಾದ ನೀರಿಗಾಗಿ ಕೆಂಪು ಸೈನಿಕರು ತಾವೇ ತೋಡಿರುವ ಸಣ್ಣ ಬಾವಿ. ಅದಕ್ಕೆ ಭೂಮಿಗೆ ಮೇಲ್ಗಡೆಗೆ ಒಂದು ಅಡಿ ಎತ್ತರದ ಕಲ್ಲಿನ ದಂಡೆಯನ್ನು ಕಟ್ಟಲಾಗಿದೆ. ಬಾವಿಯ ಒಳಗಡೆ ಕಲ್ಲು ಕಟ್ಟಲಾಗಿದೆ. ಕೇವಲ 8 ಅಡಿ ಆಳ, 5 ಅಡಿ ಸುತ್ತಳತೆ ಇರುವ ಬಾವಿ. ಪ್ರವಾಸಿಗರು ಈ ಬಾವಿಯ ಬಳಿ ಬಂದು ಚೀನಿ ಭಾಷೆಯಲ್ಲಿ ಘೋಷಣೆ ಕೂಗುತ್ತಾರೆ. ರಾಷ್ಟ್ರಗೀತೆಯನ್ನು ಹಾಡುತ್ತಾರೆ. ಮಾತ್ರವಲ್ಲದೆ ಆ ಬಾವಿಯಿಂದ ನೀರು ಮೇಲಕ್ಕೆತ್ತಲು ಪ್ರತ್ಯೇಕ ಮರದ (ಬಿದಿರಿನ) ಪಾತ್ರೆ ಇದೆ. ಅವರದ್ದೆ ಕ್ರಮದ ಹಗ್ಗ ಇದೆ. ಅದರಿಂದ ಆ ಮರದ ಪಾತ್ರೆಯನ್ನು ಇಳಿಸಿ ನೀರು ಮೇಲಕ್ಕೆತ್ತಿ, ಬಿದಿರಿನ ಸೌಟ್ ತರದ ಸಲಕರಣೆಯಿಂದ ನೀರು ತೆಗೆದು, ಮೇಲಕ್ಕೆತ್ತಿ ನೀರು ಕುಡಿಯುವುದು. ಈ ನೀರಿಗೆ ಕ್ರಾಂತಿಕಾರಿ ಪಾವಿತ್ರತೆಯನ್ನು ನೀಡಲಾಗಿದೆ. ನಾವು ಕೂಡಾ ಅದೇ ಪಾತ್ರೆಯಿಂದ ಬಾವಿಯ ನೀರನ್ನು ಮೇಲಕ್ಕೆತ್ತಿ ನೀರನ್ನು ಕುಡಿದೆವು. ಇಂಕ್ವಿಲಾಬ್ ಜಿಂದಾಬಾದ್ ಎಂಬ ಘೋಷಣೆಯನ್ನು ಕೂಗಿದೆವು.

ಇನ್ನೊಂದು ವಿಶೇಷವನ್ನು ನಾನಿಲ್ಲಿ ಹೇಳಬೇಕು. ಆ ಒಟ್ಟು ವಠಾರದಲ್ಲಿ ಅಂದಿನ ಹೋರಾಟದ ಪಳೆಯುಳಿಕೆಗಳನ್ನು ಹಾಗೆನೇ ಇರಿಸಲಾಗಿದೆ. ಮಾವೋರವರು ಉಳಿದುಕೊಳ್ಳುವ ಒಂದು ಮನೆಯ ರೀತಿಯ ಕಟ್ಟಡ ಇದೆ. ಅದಕ್ಕೆ ಒಂದು ಮಹಡಿ ಕೂಡಾ ಇದೆ. ಅವರು ಆ ಮಹಡಿಯ ಮೇಲೆ ಕುಳಿತು ಬರವಣಿಗೆ, ಪತ್ರಿಕೆ ಓದುವ ಕೆಲಸ ಅಲ್ಲಿಯೇ ಮಾಡುತ್ತಾರೆ. ಆ ಕಟ್ಟಡಕ್ಕೆ ತಾಗಿಕೊಂಡು ಬೃಹದಾಕಾರದ ಒಂದು ಮರ ಇದೆ. ಆ ಮರದ ಒಂದು ಬದಿ ಮುರಿದು ಬಿದ್ದು ಒಣಗಿದ ರೀತಿಯಲ್ಲಿ ಇದೆ. ಇನ್ನೊಂದು ಬದಿಯಲ್ಲಿ ಮರ ಜೀವಂತವಾಗಿ ಸದಾ ಹಸಿರಿನಿಂದ ಕೂಡಿದೆ. ಆ ಮರದ ಕೊಂಬೆ ಮುರಿದು ಬಿದ್ದ ಭಾಗದಲ್ಲಿ ಒಂದು ಬಾಂಬಿನ ಆಕೃತಿಯನ್ನು ಅಲ್ಲಿ ಇಡಲಾಗಿದೆ. ಈ ಬಗ್ಗೆ ನಮ್ಮ ಗೈಡ್ ನಮಗೆ ವಿವರಿಸುತ್ತಾ ಅಂದಿನ ಕ್ರಾಂತಿ ವಿರೋಧಿಗಳು ಮಾವೋರವರನ್ನು ಕೊಲ್ಲಲು ಅವರು ಇದ್ದ ಕಟ್ಟಡದ ಮೇಲೆ ಬಾಂಬು ಎಸೆಯುತ್ತಾರೆ. ಆ ಬಾಂಬು ಬಂದು ಮರದ ಮೇಲೆ ಬೀಳುತ್ತದೆ. ಕೊಂಬೆಯು ಮುರಿದು ಬೀಳುತ್ತದೆ. ಬಾಂಬು ಕೊಂಬೆಯ ಎಡೆಯಲ್ಲಿ ಸಿಕ್ಕಿ, ಕೆಳಕ್ಕೆ ಬೀಳದೆ ಅಲ್ಲಿಯೇ ಇರುತ್ತದೆ. ಒಂದು ವೇಳೆ ಅದು ಕೆಳಗೆ ಬೀಳುತ್ತಿದ್ದರೆ ಅಂದೇ ಮಾವೋರವರು ಮರಣ ಅಪ್ಪುತ್ತಿದ್ದರು ಎಂದು ಅವರು ವಿವರಿಸಿದಾಗ ನನಗೆ ಮೈ ಬೆವರಿಕೆ ಬಂತು. ಆ ಮರದ ಕೆಳಗಡೆ ಒಂದು ಕಲ್ಲಿನಲ್ಲಿ ಚೀನಿ ಭಾಷೆಯಲ್ಲಿ ಈ ಘಟನೆಯನ್ನು ಬರೆಯಲಾಗಿದೆ.

ಈ ಬಾಂಬು ಬಿದ್ದ ತರುವಾಯ ಮಾವೋರವರ ಪೂರ್ತಿ ತಂಡ, ವಿರೋಧಿಗಳಿಂದ ಕೆಂಪು ಸೈನಿಕರು ಬಾಂಬು ದಾಳಿಗೆ ತುತ್ತಾಗಿ ಮರಣ ಅಪ್ಪಬಾರದು ಎಂಬ ಕಾರಣಕ್ಕಾಗಿ ಬಾಂಬು ಬಿದ್ದರೂ ಏನೂ ಅನಾಹುತವಾಗದಂತೆ ಬೃಹದಾಕಾರದ ನೆಲ ಮಹಡಿಯನ್ನು ಕಟ್ಟಿದ್ದಾರೆ. ಒಂದು ಬದಿಯಿಂದ ಒಳ ಹೊಕ್ಕಿದರೆ ಇನ್ನೊಂದು ಬದಿಯಿಂದ ಹೊರ ಬರಲು ದ್ವಾರ ಇದೆ. ಅದರೊಳಗಡೆ ಕನಿಷ್ಟ 2000 ಮಂದಿ ಕೆಂಪು ಸೈನಿಕರು ನಿಲ್ಲಲು ಮತ್ತು ವಿಶ್ರಾಂತಿ ಪಡೆಯಬಹುದಾಗಿದೆ. ಆ ನೆಲಮಹಡಿಯ ಮೇಲ್ಗಡೆ ಮರಗಳನ್ನು ನೆಡಲಾಗಿದೆ. ಈ ರೀತಿ ಬಾಂಬು ದಾಳಿಯಿಂದ ಕೆಂಪು ಸೈನಿಕರನ್ನು ರಕ್ಷಿಸಲು ಅಂದು ವ್ಯವಸ್ಥೆ ಮಾಡಿರುವುದನ್ನು ನಾವಲ್ಲಿ ಕಾಣಬಹುದು. ಆದರೆ ಈವಾಗ ಅದರ ರಕ್ಷಣೆಯ ದೃಷ್ಟಿಯಿಂದ ಒಳಗಡೆಗೆ ಪ್ರವೇಶ ನಿರಾಕರಿಸಲಾಗಿದೆ.

ಹುತಾತ್ಮರಾದ ಕೆಂಪು ಸೈನಿಕರ ನೆನಪಿನಲ್ಲಿ ಬೃಹದಾದ ಹುತಾತ್ಮ ಸ್ಥಂಭವನ್ನು ಅಲ್ಲಿ ಕಾಣಬಹುದು. ಪ್ರವಾಸಿಗರು ಬಂದು ಅಲ್ಲಿ ತಮ್ಮ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ. ಹುತಾತ್ಮ ಸ್ಥಂಭಕ್ಕೆ ಹೂಮಾಲೆಯನ್ನು ಹಾಕುತ್ತಾರೆ.

ಅಲ್ಲಿಂದ ನಮ್ಮನ್ನು ಲೋಂಗ್ ಮಾರ್ಚಿನಲ್ಲಿ ಹುತಾತ್ಮರಾದ ಅಂದಿನ ಯುವ ಕೆಂಪು ಸೈನಿಕರ ಕುಟುಂಬಸ್ಥರಿಗೆ ಚೀನಿ ಸರಕಾರ ಕಟ್ಟಿಸಿಕೊಟ್ಟ ವಸತಿ ಪ್ರದೇಶಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ಮಕ್ಕಳು ಈಗ ಮುದಿ ಪ್ರಾಯಸ್ಥರಾಗಿದ್ದಾರೆ. ಅವರ ಮಕ್ಕಳು ಹಾಗೂ ಅವರ ಕುಟುಂಬವನ್ನು ಅಲ್ಲಿ ಕಾಣಬಹುದಾಗಿದೆ. ಅವರಲ್ಲಿ ಹೆಚ್ಚಿನವರು ಚೀನಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಆಗಿದ್ದಾರೆ. ಸರಕಾರ ಅವರಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಕೂಡಾ ಮಾಡಿದೆ. ಅವರ ಮನೆಗಳ ರೂಮ್‌ನಲ್ಲಿ ಮಾವೋ ತ್ಸೆ ತುಂಗ್‌ರವರ ಪೋಟೋ, ಬಾವುಟದ ಚಿತ್ರ ಹಾಗೂ ಹುತಾತ್ಮರಾದ ಅವರ ಕುಟುಂಬಸ್ಥರ ಪೋಟೋಗಳು ಇವೆ. ಅವರ ಕುಟುಂಬಸ್ಥರೊಂದಿಗೆ ನಾವು ಮಾತನಾಡಿಸಿದಾಗ ಅವರು ತಮ್ಮ ತಂದೆ ಮತ್ತು ಸಂಬಂಧಿಕರು ಕೆಂಪು ಸೈನ್ಯದಲ್ಲಿ ಸೇರಿ ಹುತಾತ್ಮರಾಗಿರುವ ಬಗ್ಗೆ ವಿಷಾದ ಪಡಿಸುತ್ತಿಲ್ಲ, ಬದಲಾಗಿ ಹೆಮ್ಮೆ ಪಡುತ್ತಾರೆ. ಅವರ ಹಳೇ ಮನೆಗಳನ್ನು ಕೂಡಾ ಅವರಿಗೇ ನೀಡಲಾಗಿದೆ. ಕೆಲವರು ಹಳೇ ಮನೆಯಿಂದ ಹೊಸ ಮನೆಗೆ ಬರಲು ತಯಾರಿಲ್ಲ. ಅವರ ಸಂಪ್ರದಾಯ, ನಂಬಿಕೆಗಳನ್ನು, ಆಚರಣೆಗಳನ್ನು ಹಾಗೆನೇ ಪಾಲಿಸಿಕೊಂಡು ಬರಲು ಸರಕಾರದ ಏನೇನೂ ತಕರಾರು ಇಲ್ಲ. ಹಾಗೆನೇ ಅವರಿಗೆ ಸರಕಾರದಿಂದ ಮಾಸಿಕ ಮಾಸಾಶನ, ಪರಿಹಾರ ಮತ್ತು ವೈದ್ಯಕೀಯ ವಿಮೆಯನ್ನು ಮಾಡಿರುವ ಬಗ್ಗೆ ಕೂಡಾ ಅವರುಗಳು ನಮಗೆ ವಿವರಿಸಿದರು. ಹುತಾತ್ಮರಾದ ಕೆಂಪು ಸೈನಿಕರ ಹೆಸರು, ವಿಳಾಸ ಪ್ರಾಯವನ್ನು ಸಚಿತ್ರ ಸಹಿತ ಅಲ್ಲಿ ಪ್ರದರ್ಶಿಸುವ ವ್ಯವಸ್ಥೆ ಕೂಡಾ ಮಾಡಲಾಗಿದೆ. ಅವರ ಚಿಕ್ಕ ಮಕ್ಕಳಿಗೆ ಬೇಬಿ ಸಿಟ್ಟಿಂಗ್ ತರದ ವ್ಯವಸ್ಥೆ, ಮನರಂಜನೆಗೆ ವ್ಯವಸ್ಥೆ ಹಾಗನೇ ಶಿಕ್ಷಣಕ್ಕೆ ಕೂಡಾ ವ್ಯವಸ್ಥೆಯನ್ನು ಸರಕಾರ ಮಾಡಿದೆ. ಅಲ್ಲಿನ ಪಾರ್ಟಿ ಶಾಖೆಯೇ ಇದರ ಮೇಲುಸ್ತುವಾರಿ ನೋಡುತ್ತಿದೆ. ಅವರು ಪ್ರಯಾಣಿಸಲು ಪ್ರತ್ಯೇಕ ಕಾರು ಹಾಗೂ ವಾಹನ ವ್ಯವಸ್ಥೆ ಕೂಡಾ ಮಾಡಲಾಗಿದೆ.

ನಂತರ ಮಧ್ಯಾಹ್ನ 12.45ಕ್ಕೆ ಸಂದರ್ಶನವನ್ನು ಮುಗಿಸಿ ಹೋಟೇಲಿಗೆ ಬಂದು ಊಟ ಮುಗಿಸಿ 2.30ರ ತನಕ ವಿಶ್ರಾಂತಿಯನ್ನು ಪಡೆದೆವು.

ಊಟದ ತರುವಾಯ ಸ್ಪೋಟ್ ವಿಸಿಟಿಂಗ್‌ಗೆ ನಮ್ಮನ್ನು ಕರೆದೊಯ್ಯಲಾಯಿತು. ವೈಜ್ಞಾನಿಕ ರೀತಿಯಲ್ಲಿ ಕೃಷಿಯನ್ನು ಬೆಳೆಸುವುದನ್ನು ನಾವಲ್ಲಿ ಕಂಡೆವು. ಒಂದಷ್ಟು ಎಕ್ರೆ ಪ್ರದೇಶವನ್ನು ಸುತ್ತಿ ಪೈಬರ್ ಗ್ಲಾಸಿನಲ್ಲಿ ಸುತ್ತು ಕಂಪೌಂಡ್ ಹಾಕಲಾಗಿದೆ. ಒಳಗಡೆ ಪ್ರವೇಶಿಸಲು ಒಂದು ಗೇಟ್ ಇದೆ. ಅದರ ಒಳಗಡೆ ಪ್ರವೇಶಿಸುವಾಗ ನಮ್ಮನ್ನು ಸೆಕ್ಯುರಿಟಿಯವರು ಎಲ್ಲಾ ರೀತಿಯಲ್ಲಿ ಚೆಕ್ಕಿಂಗ್ ಮಾಡುತ್ತಾರೆ. ನಂತರ ನಮ್ಮನ್ನು ಒಳ ಬಿಡುತ್ತಾರೆ. ಅಲ್ಲಿ ದೃಢ ಕಾಯದ ಯುವಕ–ಯುವತಿಯರು ತಮ್ಮ ಸಮವಸ್ತ್ರ ಧರಿಸಿ ಅವರಿಗೆ ನೀಡಲಾಗಿರುವ ನಿರ್ದಿಷ್ಟ ಕೆಲಸಗಳಲ್ಲಿ ತಲ್ಲೀನರಾಗಿರುತ್ತಾರೆ. ತರಕಾರಿ ಗಿಡಗಳಿಗೆ ನೀರು ಹಾಕುವುದು, ಗೊಬ್ಬರ ಹಾಕುವುದು, ಕೆಂಪಾದ ಎಲೆಗಳನ್ನು, ಅನಗತ್ಯ ಕಾಂಡಗಳನ್ನು ಕತ್ತರಿಸಿ ತೆಗೆಯುವುದು ಇತ್ಯಾದಿ ಕೆಲಸವನ್ನು ಮಾಡುತ್ತಲೇ ಇರುತ್ತಾರೆ. ವೈವಿದ್ಯಮಯ ತರಕಾರಿಯನ್ನು ಅಲ್ಲಿ ಬೆಳೆಯುತ್ತಾರೆ. ವಿವಿಧ ನಮೂನೆಯ ಸಿಹಿ ಕುಂಬಳಕಾಯಿ, ಕುಂಬಳಕಾಯಿ, ತೊಂಡೆಕಾಯಿ, ವಿವಿಧ ನಮೂನೆಯ ಬೃಹದಾಕಾರದ ಬದನೆಗಳು, ಟೊಮೆಟೋ, ಸೊಪ್ಪು ತರಕಾರಿಗಳು, ಹೀರೆಕಾಯಿ, ಸೋರೆಕಾಯಿಗಳನ್ನು ಅಲ್ಲಿ ಕಂಡೆವು. ವಿಶೇಷತೆಯಾಗಿ ಹೇಳುವುದಿದ್ದಲ್ಲಿ ಒಂದು ಬಜಾಜ್ ಆಟೋ ರಿಕ್ಷಾದ ಪ್ರಮಾಣದಲ್ಲಿ ಸಿಹಿ ಕುಂಬಳ ಕಾಯಿಯನ್ನು ಬೆಳೆಸಲಾಗಿದೆ. ಅದು ಒಂದು ಕಬ್ಬಿಣದ ಬೆಡ್ ಮೇಲೆ ಹಾಕಲಾದ ಥರ್ಮೋಕೋಲ್ ಮೇಲೆ ಅದು ಮಿಡಿಯಾಗಿ, ದಿನಾ ದಿನಾ ಬೆಳೆದು ಅಷ್ಟು ದೊಡ್ಡದಾಗಿದೆ. ದಿನಾ ಅದಕ್ಕಾಗಿ ರಾತ್ರಿ ಹಗಲು ನಿಗಾವಹಿಸಲು ಕೆಲಸಗಾರರು ಶ್ರಮವಹಿಸುತ್ತಾರೆ. ಇದನ್ನು ಬಾಯಿಯಿಂದ ಹೇಳಿದರೆ ನಂಬುವವರು ಯಾರೂ ಇಲ್ಲ. ಅದನ್ನು ಕಣ್ಣಿಂದ ನೋಡಿದರೆ ಮಾತ್ರವೇ ವಾಸ್ತವ ಸತ್ಯದ ಅರಿವು ಬರುತ್ತದೆ. ಈ ರೀತಿಯ ಕೃಷಿ ವ್ಯವಸ್ಥೆ ಅಲ್ಲಲ್ಲಿ ಮಾಡಲಾಗುತ್ತದೆ. ಕೃಷಿಕರು ಸಹಕಾರಿ ಪದ್ಧತಿಯಲ್ಲಿ ಬೆಳೆಯುತ್ತಾರೆ. ಮಾರಾಟ ಮಾಡುತ್ತಾರೆ. ಅದರಿಂದ ಬಂದ ಸಂಪಾದನೆಯನ್ನು ಹಂಚಿಕೊಳ್ಳುತ್ತಾರೆ. ಇದೇ ರೀತಿ ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಮೀನು ಸಾಕಾಣಿಕೆ, ಬಾತುಕೋಳಿ ಸಾಕಾಣಿಕೆ ಮಾಡುತ್ತಾರೆ ಎಂದು ನಮಗೆ ವಿವರಿಸುತ್ತಾರೆ. ದನವನ್ನು ಕೂಡಾ ಮಾಂಸಕ್ಕಾಗಿ ಸಾಕುತ್ತಾರೆ. ನೀರು ಬಿಡಲು, ಔಷಧಿ ಹಾಕಲು, ಗೊಬ್ಬರ ಸಾಗಿಸಲು ಇತ್ಯಾದಿ ಅದಕ್ಕನುಗುಣವಾದ ಆಧುನಿಕ ಯಂತ್ರಗಳು ಕೂಡಾ ಇದೆ. ಇದು ಚೀನಾದ ವೈಜ್ಞಾನಿಕ ಕೃಷಿ ಪದ್ಧತಿ. ಅಲ್ಲಿಂದ ಸಂಜೆಗೆ ರುಯಿಜಿನ್ ಹೋಟೆಲಿಗೆ ಬಂದು, ಊಟ ಮಾಡಿ ವಿಶ್ರಾಂತಿ ಪಡೆದೆವು. ●

ಈ ವರ್ಷ ಸುಮಾರು ಒಂದೂವರೆ ಪಟ್ಟು ಕಾರ್ಪೊರೇಟ್ ಸಾಲಗಳ 'ಮನ್ನಾ'?



2016–17ರಲ್ಲಿ ಸಾರ್ವಜನಿಕ ವಲಯದ ಬ್ಯಾಂಕುಗಳು 81,683 ಕೋಟಿ ಮೊತ್ತದ ಸಾಲಗಳನ್ನು ವಜಾ ಮಾಡಿವೆ ಎಂದು ವರದಿಯಾಗಿದೆ. ಹಣಕಾಸು ಮಂತ್ರಾಲಯ ಮತ್ತು ರಿಝರ್ವ್ ಬ್ಯಾಂಕ್‌ನ ಮಾಹಿತಿಗಳ ಆಧಾರದಲ್ಲಿ ಇದನ್ನು ವರದಿ ಮಾಡಲಾಗಿದೆ. ಇದು ಕಳೆದ ವರ್ಷದ ಸಾಲ ವಜಾಕ್ಕಿಂತಲೂ 41% ಹೆಚ್ಚು, ಇದುವರೆಗಿನ ಅತಿ ಹೆಚ್ಚು ಸಾಲ–ವಜಾ. ಇವೆಲ್ಲ ಬಹುಪಾಲು ದೊಡ್ಡ ಕಾರ್ಪೊರೇಟ್‌ಗಳು ಮರುಪಾವತಿ ಮಾಡದ ಸಾಲಗಳು ಎಂದು ಬೇರೆ ಹೇಳಬೇಕಾಗಿಲ್ಲ. ಈ ಮೂಲಕ ವಾಸ್ತವವಾಗಿ ಅವರ ಸಾಲಗಳನ್ನು ಮನ್ನಾ ಮಾಡಿದಂತೆಯೇ–ತಾಂತ್ರಿಕವಾಗಿ ಅಲ್ಲ ಎಂದು ಸರಕಾರ ದಹೇಳಿಕೊಂಡರೂ. ಕಳೆದ 5 ವರ್ಷಗಳಲ್ಲಿ ಸಾಲ–ವಜಾದ ಅಂಕಿ–ಅಂಶಗಳು ಹೀಗಿವೆ:(ಮೊತ್ತ ಕೋಟಿ ರೂ.ಗಳಲ್ಲಿ)

ವರ್ಷ	ಸಾಲ–ವಜಾದ ಮೊತ್ತ	ಒಟ್ಟು ನಿವ್ವಳ ಲಾಭ
2012–13	27,231	45,849
2013–14	34,409	31,513
2014–15	49,018	30,868
2015–16	57,586	–20,003
2016–17	81,683	474

ಅಂದರೆ ಕಳೆದ 5 ವರ್ಷಗಳಲ್ಲಿ 2.46ಲಕ್ಷ ಕೋಟಿ ರೂ.ಗಳಷ್ಟು ಸಾಲಗಳನ್ನು ವಜಾ ಮಾಡಲಾಗಿದೆ. ಕಳೆದ 3 ವರ್ಷಗಳಲ್ಲಿ ಅಂದರೆ 'ಒಳ್ಳೆಯ ದಿನ'ಗಳು ಆರಂಭವಾದ ನಂತರ ಮನ್ನಾ ಆಗಿರುವುದರ ಮೊತ್ತವೇ 1.88ಲಕ್ಷ ಕೋಟಿ.

'ಕಾರ್ಯನಿರ್ವಹಿಸದ ಆಸ್ತಿಗಳು' ಅಥವ ಎನ್‌ಪಿಎ ಎಂದು ಹೆಸರಿಸಿರುವ ಕಾರ್ಪೊರೇಟ್‌ಗಳು ಮರುಪಾವತಿ ಮಾಡದ ಸಾರ್ವಜನಿಕರ ಉಳಿತಾಯಗಳ ಮೊತ್ತವನ್ನು ಹಿಂದಕ್ಕೆ ಪಡೆಯಲು ಹಲವು ಕ್ರಮಗಳನ್ನು ಸರಕಾರ ಕೈಗೊಂಡಿದ್ದೇನೆ ಎಂದು ಹೇಳಿದರೂ ಎನ್‌ಪಿಎ ಪ್ರಮಾಣ ಏರುತ್ತಲೇ ಇದೆ, ಅಷ್ಟೇಅಲ್ಲ, ಹಿಂದೆಂದೂ ಕಾಣದಷ್ಟು ವೇಗವಾಗಿ ಏರುತ್ತಿದೆ. ರಿಝರ್ವ್ ಬ್ಯಾಂಕ್ ಮಾಹಿತಿಯ ಪ್ರಕಾರ ಸಪ್ಟಂಬರ್ 2016ದಲ್ಲಿ ಬ್ಯಾಂಕುಗಳು ನೀಡಿದ ಒಟ್ಟು ಸಾಲಗಳಲ್ಲಿ 9.2%ದಷ್ಟು

"ಹಣಕಾಸು ಮಂತ್ರಿಗಳು ತಮ್ಮ ಕೇರಳ ರಜಾ ಪ್ರವಾಸವನ್ನು ಪೂರ್ಣಗೊಳಿಸಿದ್ದರೆ, ಇಷ್ಟೊಂದು ದೊಡ್ಡ ಮೊತ್ತದ ಸಾಲ–ವಜಾ ಹೇಗಾಯಿತು ಎಂದು ಉತ್ತರಿಸುತ್ತಾರೆಯೇ?"

– ಸೀತಾರಾಮ್ ಯೆಚುರಿ

ಹಿಂದಿರುಗಿ ಬರುವ ನಿರೀಕ್ಷೆ ಇಲ್ಲ. ಮಾರ್ಚ್ 2017ರಲ್ಲಿ ಇದು 9.6%ಕ್ಕೆ ಏರಿದೆ.

2012–13ರಲ್ಲಿ 27,231 ಕೋಟಿ ರೂ. ಸಾಲ–ವಜಾ ಮಾಡಿದರೂ ನಿವ್ವಳ ಲಾಭ 45,849 ಕೋಟಿ ರೂ. ಇತ್ತು. ಆದರೆ ಕಳೆದ ವರ್ಷ 57,586 ಕೋಟಿ ರೂ. ಮನ್ನಾ ಆದ ಮೇಲೂ 20 ಸಾವಿರ ಕೋಟಿಯಷ್ಟು ನಷ್ಟವಾಗಿದೆ, ಈ ವರ್ಷ 474 ಕೋಟಿ ರೂ.ಗಳ ಅಲ್ಪ ಲಾಭವಾಗಿದೆ.

ಮೇಲೆ ಹೇಳಿದಂತೆ ಇವುಗಳೆಲ್ಲ ಬಹುಪಾಲು ದೊಡ್ಡ ಕಾರ್ಪೊರೇಟ್‌ಗಳ ಸಾಲಗಳು. ಆ ಸಾಲಗಾರರು ಸೊಂಪಾಗಿಯೇ ಇದ್ದಾರೆ. ಅದರೂ ಸಾಲಮನ್ನಾ, ಅವರ ಹೆಸರನ್ನು ಬಹಿರಂಗಪಡಿಸಲೂ ಈ ಸರಕಾರ ಇಚ್ಛಿಸುತ್ತಿಲ್ಲ. ಅದರೆ ಸಾಲ ತೀರಿಸಲಾಗದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ, ಅವರ ಸಾಲಮನ್ನಾ ಮಾಡಲು ಬಹಳಷ್ಟು ಹೋರಾಟಗಳ ನಂತರ ಭಾಗಶಃ ಒಪ್ಪಿಕೊಂಡರೂ ವಿಶ್ವಾಸಘಾತ.

ಈ ಸುದ್ದಿ ಪ್ರಕಟವಾದಾಗ ಹಣಕಾಸು ಮಂತ್ರಿಗಳು ಕೇರಳ ಪ್ರವಾಸದಲ್ಲಿದ್ದರು– ಯಾವುದೇ ಹಣಕಾಸು ಪ್ರಶ್ನೆಯ ಪರಿಶೀಲನೆಗಾಗಿ ಅಲ್ಲ, ಅವರ ಇನ್ನೊಂದು ಜವಾಬ್ದಾರಿಯಾದ ದೇಶದ ರಕ್ಷಣೆಯ ಪ್ರಶ್ನೆಗಾಗಿಯೂ ಅಲ್ಲ.

ಆದ್ದರಿಂದಲೇ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು "ಹಣಕಾಸು ಮಂತ್ರಿಗಳು ತಮ್ಮ ಕೇರಳ ರಜಾ ಪ್ರವಾಸವನ್ನು ಪೂರ್ಣಗೊಳಿಸಿದ್ದರೆ ಇಷ್ಟೊಂದು ದೊಡ್ಡ ಮೊತ್ತದ ಸಾಲ–ವಜಾ ಹೇಗಾಯಿತು ಎಂದು ಉತ್ತರಿಸುತ್ತಾರೆಯೇ ಎಂದು ಮಾರ್ಮಿಕವಾಗಿ ಕೇಳಿದ್ದಾರೆ.

ಈ ವಾರ ಕಂಡ 'ರಾಷ್ಟ್ರ ನಿರ್ಮಾಣ'ದ ಇನ್ನೆರಡು ಅಮೋಘ ನಿದರ್ಶನಗಳು

ಗುಜರಾತ್ ಮಾಡೆಲ್ ಬಚಾವೊ

ಗುಜರಾತಿನಿಂದ ಮೂರು ರಾಜ್ಯಸಭಾ ಸ್ಥಾನಗಳಿಗಾಗಿ ಚುನಾವಣೆ ಭಾರತದ ರಾಜಕಾರಣ ಯಾವ ಹಂತ ತಲುಪಿದೆ ಎಂಬುದರ ಸಂಕೇತ ನಿಡಿದೆ ಎನ್ನುತ್ತಾರೆ ರಾಜಕೀಯ ವಿಖ್ಷಕರು (ಈ ಕೆಳಗಿರುವ ಕಾರ್ಟೂನ್ ನೋಡಿ)

ಚುನಾವಣೆಯ ಫಲಿತಾಂಶಗಳು ಬಂದಾಗ ಆಳುವ ಪಕ್ಷದ ಅತ್ಯಂತ ಯಶಸ್ವಿ ಅಧ್ಯಕ್ಷರು ರಾಜ್ಯಸಭೆಗೆ ಆರಿಸಿ ಬಂದುದಕ್ಕಿಂತ ಕಾಂಗ್ರೆಸಿನ ಹಿರಿಯ ಸದಸ್ಯ ಮರು ಆಯ್ಕೆಗೊಂಡದ್ದೇ ದೊಡ್ಡ ಸುದ್ದಿಯಾಯಿತು. ಅದೂ ಕೂಡ ಅವರು ಐದನೇ ಬಾರಿಗೆ ಆಯ್ಕೆಗೊಂಡರು ಎಂಬುದಕ್ಕೂ ಅಲ್ಲ! ಅವರು ರಾಜ್ಯಸಭೆಯನ್ನು ತಲುಪದಂತೆ ಮಾಡುವ ಶತಪ್ರಯತ್ನ ಫಲ ಕೊಡಲಿಲ್ಲ ಎಂದು.

ಈ ಚುನಾವಣೆಯ ಮೊದಲು ಗುಜರಾತ್ ವಿಧಾನಸಭೆಯಲ್ಲಿ 57 ಕಾಂಗ್ರೆಸ್ ಸದಸ್ಯರಿದ್ದರು. ರಾಜ್ಯಸಭಾ ಚುನಾವಣೆ ಘೋಷಣೆಯಾಗುವ ವೇಳೆಗೆ ಅದು 51ಕ್ಕೆ ಇಳಿಯಿತು. ಅವರಲ್ಲಿ ಒಬ್ಬರು ಬಿಜೆಪಿ ಸೇರಿ ಆಪಕ್ಷದ ಮೂರನೇ ಅಬ್ಯರ್ಥಿಯೂ ಆದರು. ಶಾಸಕರ ಕುದುರೆ ವ್ಯಾಪಾರ ನಡೆಯುತ್ತಿದೆ ಎಂದು ಕಾಂಗ್ರೆಸ್ ಶಾಸಕರನ್ನು ಕರ್ನಾಟಕದ ರೆಸಾರ್ಟ್‌ಗೆ ಒಯ್ಯಲಾಯಿತು. ಮರುದಿನ ಆ ರೆಸಾರ್ಟ್ ಮೇಲೆ ಮತ್ತು ಈ ಶಾಸಕರ ರೆಸಾರ್ಟ್ ವಾಸದ ಉಸ್ತುವಾರಿ ವಹಿಸಿದ್ದ ಕರ್ನಾಟಕದ ಮಂತ್ರಿಗಳ ಮನೆಯ ಮೇಲೆ ಐಟಿ ದಾಳಿ ನಡೆಯಿತು.

ಇದು ಇಲ್ಲಿಗೇ ನಿಲ್ಲಲಿಲ್ಲ. ಮತ ಹಾಕಿದ ಇಬ್ಬರು ಕಾಂಗ್ರೆಸ್ ಶಾಸಕರು ತಮ್ಮ ಮತವನ್ನು ಅಲ್ಲೇ ಕುರ್ಚಿಯಲ್ಲಿ ಕೂತು ನಿರೀಕ್ಷಣೆ ಮಾಡುತ್ತಿದ್ದ ಬಿಜೆಪಿ ಅಧ್ಯಕ್ಷರಿಗೆ ತೋರಿಸಿದರು–'ಕೆಲಸ' ಮಾಡಿಕೊಟ್ಟದ್ದಕ್ಕೆ ಸಾಕ್ಷಿಯಾಗಿಯಂತೆ. ಕಾಂಗ್ರೆಸ್ ಆಕ್ಷೇಪಿಸಿತು, ಆ ಮತಗಳನ್ನು ಕುಲಗೆಟ್ಟವ್ವು ಎಂದು ಪರಿಗಣಿಸಬೇಕು ಎಂದು. ಚುನಾವಣಾಧಿಕಾರಿ ಒಪ್ಪಲಿಲ್ಲ. ದಿಲ್ಲಿಯ ಮುಖ್ಯ ಚುನಾವಣಾ ಅಯೊಗಕ್ಕೆ ದೂರು ಹೋಯಿತು, ಮುಖಂಡರ ನಿಯೋಗವೊಂದು ಹೋಯಿತು. ಆಳುವ ಪಕ್ಷದ ಮುಖಂಡರೂ ಹೋದರು.. ಕಾಂಗ್ರೆಸ್ ಮುಖಂಡರ ಇನ್ನೊಂದು ನಿಯೋಗ ಹೋಯಿತು. ಪ್ರತಿಯಾಗಿ ಐವರು ಘಟಾನುಘಟಿ ಮಂತ್ರಿಗಳು ಧಾವಿಸಿದರು.

ಚುನಾವಣಾ ಆಯೋಗ ಬೇಗನೇ ಮತ ಎಣಿಕೆ ಆರಂಭಿಸಬೇಕು, ಇಲ್ಲವಾದರೆ ಇಡೀ ಮೋದಿ ಸಂಪುಟ ಮರುದಿನವೂ ರಜಾ ತಗೊಳ್ಳುತ್ತದೆ ಎಂದೊಬ್ಬ ವೀಕ್ಷಕರು ಈ ಬಗ್ಗೆ ಟಿಪ್ಪಣಿ ಮಾಡಿದರು.

ಕೊನೆಗೂ ಚುನಾವಣಾ ಆಯೋಗ ಮತದಾನದ ವೀಡಿಯೋವನ್ನು ತಾನೇ ಪರೀಕ್ಷಿಸುವದಾಗಿ ಹೇಳಿತು. ನೋಡಿ ಆ ಇಬ್ಬರು ಕಾಂಗ್ರೆಸ್ ಸದಸ್ಯರ ಮತಗಳನ್ನು ಅಸಿಂಧುಗೊಳಿಸಿತು. ಫಲಿತಾಂಶ ಪ್ರಕಟವಾಯಿತು.

ಆಪರೇಶನ್ ಬೇಟಾ ಬಚಾವೊ


ಈ ಆಪರೇಶನ್ ಬಗ್ಗೆ ಈ ಸಂಚಿಕೆಯ ಬೇರೆ ಪುಟಗಳಲ್ಲಿ ಪ್ರಕಟವಾಗಿದೆ. ಈ ಪ್ರಕರಣದ ಕೇಂದ್ರ ವ್ಯಕ್ತಿ ಹರ್ಯಾಣ ಬಿಜೆಪಿ ಅಧ್ಯಕ್ಷರ 'ಬೇಟಾ' ತನ್ನ ಮಿತ್ರನೊಂದಿಗೆ ಕೊನೆಗೂ ನ್ಯಾಯಾಂಗ ಕಸ್ಟಡಿಗೆ ಹೋಗಿದ್ದಾನೆ. ಈ ನಡುವೆ ಬಿಜೆಪಿಯ ವಕ್ತಾರರು, ಮಂತ್ರಿಗಳು, ಮುಖಂಡರು, ಅವರ ಭಕ್ತರುಗಳು ಸಂಸ್ಕೃತಿಪ್ರಿಯ ಪಕ್ಷದ ಸಂಸ್ಕೃತಿಯ ಮಹಾಪ್ರದರ್ಶನ ನಡೆಸಿದರು–'ಒಳ್ಳೆಯ ದಿನ'ಗಳ ಸಂಸ್ಕೃತಿಯ ಮುನ್ನೋಟವನ್ನು ಮಗದೊಮ್ಮೆ ದೃಢಪಡಿಸಿದರು–ಎಂದಿನಂತೆ ಈ ದಿನಗಳ ಹರಿಕಾರನ ದಿವ್ಯಮೌನದ ನಡುವೆ.

ಜಾನುವಾರು ಮಾರಾಟ ನಿಷೇಧ ಅಧಿಸೂಚನೆ: ಕನಿಷ್ಟ ಆಳ್ವಿಕೆ, ಗರಿಷ್ಟ ಸರಕಾರ?

ಜಾನುವಾರು ಮಾರಾಟ ನಿಷೇಧದ ಅಧಿಸೂಚನೆಯನ್ನು ಮೇ23 ರಂದು ಹೊರಡಿಸಿದರೂ ಜುಲೈ 27ರ ವರೆಗೂ ಅದನ್ನು ಲೋಕಸಭಾದ ಸಚಿವಾಲಯಕ್ಕೆ ಸಲ್ಲಿಸಲೇ ಇಲ್ಲ ಎಂದು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ಉತ್ತರ ಬಯಲಿಗೆಳೆದಿದೆ. ಈ ಬಗ್ಗೆ ತನಗೇನೂ ಗೊತ್ತಿಲ್ಲ ಎಂದು ಸರಕಾರದ ಅಡಿಶನಲ್ ಸಾಲಿಸಿಟರ್ ಜನರಲ್ ಸುಪ್ರಿಂ ಕೋರ್ಟ್ ಮುಂದೆ ಒಪ್ಪಿಕೊಂಡು ಆಗಸ್ಟ್ 9ರೊಳಗೆ ಈ ಬಗ್ಗೆ ಹೇಳುವುದಾಗಿ ತಿಳಿಸಬೇಕಾಗಿ ಬಂತು. ಯಾವ ಕಾನೂನಿನ ಅಡಿಯಲ್ಲಿ ಈ ಅಧಿಸೂಚನೆ ಹೊರಡಿಸಲಾಗಿತ್ತೋ ಅದರ ಸೆಕ್ಷನ್ 38ಎ ಪ್ರಕಾರ ಈ ಕಾನೂನಿನ ಅಡಿಯಲ್ಲಿ ಸರಕಾರ ಮಾಡುವ ಯಾವುದೇ ನಿಯಮವನ್ನು ಅದನ್ನು ರೂಪಿಸಿದ ಕೂಡಲೇ ಸಂಸತ್ತಿನ ಎರಡೂ ಸದನಗಳ ಮುಂದೆ ಒಟ್ಟು 30 ದಿನಗಳ ವರೆಗೆ ಇಡಬೇಕು. ಎರಡೂ ಸದನಗಳು ಒಪ್ಪುವ ಯಾವುದೇ ಮಾರ್ಪಾಡನ್ನು ಆ ನಿಯಮದಲ್ಲಿ ಸೇರಿಸಬೇಕು, ಇಲ್ಲವಾದರೆ ಅದಕ್ಕೆ ಯಾವುದೇ ಸಿಂಧುತ್ವ ಇರುವುದಿಲ್ಲ. ಆದರೆ ಲೋಕಸಭಾ ಸಚಿವಾಲಯದ ಉತ್ತರದ ಪ್ರಕಾರ ಎರಡು ತಿಂಗಳಾದರೂ ಈ ಅಧಿಸೂಚನೆಯ ಮಾಹಿತಿಯನ್ನು ಪರಿಸರ ಮತ್ತು ಅರಣ್ಯಗಳ ಮಂತ್ರಾಲಯ ಸಲ್ಲಿಸಿರಲಿಲ್ಲ.

"ಸರಕಾರ ಸಂಸತ್ತನ್ನು ಬದಿಗೊತ್ತಿತು, ಜನತೆಯ ಚುನಾಯಿತ ಪ್ರತಿನಿಧಿಗಳಿಂದ ನಿಯಮಗಳನ್ನು ಮುಚ್ಚಿಟ್ಟಿತು. ಮತ್ತು ಆ ಕಾನೂನನ್ನೇ ಕೊಂದಿತು...ಇವೆಲ್ಲವೂ ಜಾನುವಾರು ನಿಯಮಗಳ ಕೆಲವು ಅಂಶಗಳು ದೇಶದ 70% ಜನಗಳನ್ನು ಬಾಧಿಸುವಾಗ" ಎಂದು ಈ ಅಧಿಸೂಚನೆಯ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದ ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತಂದಾಗ ಮುಖ್ಯ ನ್ಯಾಯಾಧೀಶರು "ಸರಕಾರ ನಾನು ಇದನ್ನು ಸಂಸತ್ತಿನ ಮುಂದೆ ಇಡುವುದಿಲ್ಲ ಎಂದು ಹೇಳುವಂತಿಲ್ಲ" ಎಂದು ಖಾರವಾಗಿ ಟಿಪ್ಪಣಿ ಮಾಡಿದರು ಎಂದು ವರದಿಯಾಗಿದೆ. ಒಂದು ಕಾನೂನನ್ನು ಸಂಸತ್ತಿನ ಮುಂದಿಡುವುದು ಬಹಳ ಮಹತ್ವದ್ದು,ಇದು ನಾಡಿನ ಕಾನೂನುಗಳ ಮೇಲೆ ಸಂಸತ್ತಿನ ಹತೋಟಿಯ ಒಂದು ಚಲಾವಣೆ ಎಂದು ಇನ್ನೊಬ್ಬ ನ್ಯಾಯಾಧೀಶರು ಅದಕ್ಕೆ ಸೇರಿಸಿದರು ಎಂದೂ ವರದಿ ಹೇಳುತ್ತದೆ.

ಈ ಅಂಶ 'ಒಳ್ಳೆಯ ದಿನ'ಗಳ ಆಡಳಿತಗಾರರಿಗೆ ತಿಳಿದೇ ಇರಲಿಲ್ಲವೇ, ಅಥವ ಸಂಸತ್ತನ್ನು ಬದಿಗೊತ್ತುವುದು, ಅಧಿಸೂಚನೆಗಳನ್ನು ಮುಚ್ಚಿಡುವುದು ಈ ಆಡಳಿತಗಾರರು ಹೇಳುವ 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ'ಯ ಲಕ್ಷಣವೆಂದು ಭಾವಿಸಿದೆಯೇ? ಬಹುಶಃ ತನ್ನ ಅಜೆಂಡಾವನ್ನು ಹೇಗಾದರೂ ಜಾರಿಗೆ ತರುವುದಷ್ಟೇ ಮುಖ್ಯ, ಅದಕ್ಕೆ ಅಡ್ಡಿಯಾಗುವ ಯಾವುದನ್ನೂ ಲೆಕ್ಕಿಸಬೇಕಾಗಿಲ್ಲ ಎಂಬುದಷ್ಟೇ ಅದರ ಆಡಳಿತ ಸೂತ್ರದ ಸಾರಾಂಶ.



ವ್ಯಂಗ್ಯಚಿತ್ರ: ಕೀರ್ತಿಶ್, ಬಿಬಿಸಿ ಹಿಂದಿ


ದೆವ್ವಗಳೂ ದಲಿತರು ಮತ್ತು ಮುಸ್ಲಿಮರ ಮೇಲೆಯೇ ಗುರಿಯಿಡುತ್ತವೆಯೇ?

ಹೌದು, ಇದೂ ಒಳ್ಳೆಯ ದಿನಗಳ ಮತ್ತೊಂದು 'ಸಾಧನೆ' ಇರಬೇಕು ಎಂದು ಆಗಸ್ಟ್ 4 ರ ವರದಿಯನ್ನು ನೋಡಿದರೆ ಅನಿಸುತ್ತದೆ. ಈ ತಿಂಗಳ ಮೊದಲ ವಾರದಿಂದ ಹರ್ಯಾಣ, ಉತ್ತರಪ್ರದೇಶದ ಪಶ್ಚಿಮ ಬಾಗ, ರಾಜಸ್ತಾನ ಮತ್ತು ರಾಜಧಾನಿ ದಿಲ್ಲಿಯಲ್ಲೂ ಮಹಿಳೆಯರ ಜಡೆ ಕತ್ತರಿಸುವ ದೆವ್ವ ಅಥವ ಮಾಯಾವಿಗಳು ಓಡಾಡುತ್ತಿದ್ದಾರೆ ಎಂಬ ವದಂತಿ ದಟ್ಟವಾಗಿ ಹರಡಿದೆ.

ಇದಕ್ಕೆ ಉತ್ತರಪ್ರದೇಶದ ಆಗ್ರಾದಲ್ಲಿ ಒಬ್ಬ ವೃದ್ಧೆ ಮತ್ತು ರಾಜಸ್ತಾನದ ಸಿಕ್ರಿಯಲ್ಲಿ ಒಬ್ಬ ಯುವಕ ಬಲಿಯಾಗಿದ್ದಾರೆ. ಜನಜಂಗುಳಿ ವೃದ್ಧೆಯನ್ನು ಕೊಂದೇ ಬಿಟ್ಟಿದೆ, ಯುವಕನ ಪ್ರಾಣ ತೆಗೆದಿಲ್ಲ, ಆದರೆ ನಜ್ಜುಗುಜ್ಜು ಮಾಡುವುದರಲ್ಲಿ 'ಯಶಸ್ವಿ'ಯಾಗಿದೆ

ಪ್ರಾಣ ಕಳಕೊಂಡ ವೃದ್ದೆ ಮಾನ್ ದೇವಿ ದಲಿತಳಾಗಿರುವುದು, ಮತ್ತು ಸಿಕ್ರಿಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಯುವಕ್ಝಾಫಿರುಝ್ ಮುಕಿಂ ಮುಸ್ಲಿಮನಾಗಿರುವುದು ಕೇವಲ ಆಕಸ್ಮಿಕವೇ, ಅಥವ ದೆವ್ವಗಳಿಗೂ ಜಾತಿ ಮತ್ತು ಧರ್ಮದ ಐಡೆಂಟಿಟಿ ಕಾಡುವ ದಿನಗಳನ್ನು ನಾವು ಕಾಣುತ್ತಿದ್ದೇವೆಯೇ ಎಂದು ಒಬ್ಬ ವಿಶ್ಲೇಷಕರು ಪ್ರಶ್ನಿಸುತ್ತಾರೆ. ಜಡೆ ಕತ್ತರಿಸುವ ದೆವ್ವದ ವದಂತಿ ಯಾರೋ ಉದ್ದೇಶಪೂರ್ವಕವಾಗಿ ಹರಡಿಸಿದ್ದು ಎಂದು ಪೋಲೀಸ್ ಅಧಿಕಾರಿಗಳು ಈಗ ಜನಗಳನ್ನು ಎಚ್ಚರಿಸಿದ್ದಾರಂತೆ.

ಒಳಚರಂಡಿ ಸ್ವಚ್ಛಗೊಳಿಸುವಾಗ 100ದಿನಗಳಲ್ಲಿ 42 ನೈರ್ಮಲ್ಯ ಕಾರ್ಮಿಕರ ಸಾವು



ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಮ್ಸ್ ಆಫ್ ಇಂಡಿಯ





ದೇಶಾದ್ಯಂತ 'ವಿಜ್ಞಾನಕ್ಕಾಗಿ ನಡಿಗೆ'

'ವಿಜ್ಞಾನವನ್ನು ಪ್ರೋತ್ಸಾಹಿಸಿ-ಅವಿಜ್ಞಾನವನ್ನಲ್ಲ', 'ವಿಜ್ಞಾನವನ್ನು ಕಲಿಸಿ, ಪುರಾಣ ಕಂತೆಗಳನ್ನಲ್ಲ', 'ವಿಚಾರ-ಪ್ರಶ್ನೆ-ಕ್ರಿಯೆ', 'ವೈಜ್ಞಾನಿಕ ಮನವ ಮೂಕಗೊಳಿಸಲಾಗದು' 'ವಿಜ್ಞಾನಕ್ಕಾಗಿ ನಡಿಗೆ, ಮಾನವತೆಗಾಗಿ ನಡಿಗೆ', 'ವಿಜ್ಞಾನದ ಉಪೇಕ್ಷೆ ಎಂದರೆ ವಿನಾಶ'- ಇವು ಆಗಸ್ಟ್ 9 ರಂದು ದೇಶದ 25-30 ನಗರಗಳಲ್ಲಿ ಮೊಳಗಿದ ಘೋಷಣೆಗಳಲ್ಲಿ ಕೆಲವು. ಅಂದು ದೇಶಾದ್ಯಂತ 'ವಿಜ್ಞಾನಕ್ಕಾಗಿ ನಡಿಗೆ' ಕಾರ್ಯಕ್ರಮದಲ್ಲಿ ಸಾವಿರಾರು ವಿಜ್ಞಾನಿಗಳು, ಸಂಶೋಧಕರು, ವಿದ್ಯಾರ್ಥಿಗಳು ಭಾಗವಹಿಸಿದರು.

ಈ ಕಾರ್ಯಕ್ರಮದ ಸಂಘಟಕರು ಈ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟಿದ್ದರು.

1. ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಶೋಧನೆಗೆ ಜಿಡಿಪಿಯ 3% ಮತ್ತು ಶಿಕ್ಷಣಕ್ಕೆ 10% ನೀಡಬೇಕು.
2. ಅವೈಜ್ಞಾನಿಕತೆ, ಕುರುಡುನಂಬಿಕೆಗಳು ಮತ್ತು ಅಸಹಿಷ್ಣುತೆಯ ಪ್ರಚಾರ ನಿಲ್ಲಬೇಕು, ಸಂವಿಧಾನದ 51ಎ ವಿಧಿ ಹೇಳಿರುವಂತೆ ವೈಜ್ಞಾನಿಕ ಮನೋಭಾವ, ಮಾನವೀಯ ಮೌಲ್ಯಗಳು ಮತ್ತು ಶೋಧನೆಯ ಭಾವವನ್ನು ಬೆಳೆಸಬೇಕು.
3. ಶಿಕ್ಷಣ ವ್ಯವಸ್ಥೆ ವೈಜ್ಞಾನಿಕ ಸಾಕ್ಷಿ ಇರುವ ವಿಚಾರಗಳನ್ನು ಮಾತ್ರ ಕಲಿಸುವಂತಿರಬೇಕು.
4. ಸಾಕ್ಷಿ-ಆಧಾರಿತ ವಿಜ್ಞಾನದ ಆಧಾರದಲ್ಲಿಯೇ ಧೋರಣೆಗಳನ್ನು ರೂಪಿಸಬೇಕು.

ಗಮನಾರ್ಹ ಸಂಶೋಧನೆ ಮಾಡುವ ಹೆಚ್ಚಿನ ದೇಶಗಳಲ್ಲಿ ವೈಜ್ಞಾನಿಕ ಸಂಶೋಧನೆಗೆ ಜಿಡಿಪಿಯ 3% ದಷ್ಟು ನೀಡಲಾಗುತ್ತದೆ. ಆದರೆ ಭಾರತದಲ್ಲಿ 0.8ರಿಂದ 0.9 ಶೇಕಡಾ ಮಾತ್ರ. ಇತ್ತೀಚೆಗೆ ಇದರಲ್ಲೂ ಕಡಿತ ತರಲಾಗುತ್ತಿದೆ, ಇನ್ನೊಂದೆಡೆಯಲ್ಲಿ ಅವೈಜ್ಞಾನಿಕ ವಿಚಾರಗಳನ್ನು ಪ್ರೋತ್ಸಾಹಿಸಲಾಗುತ್ತಿದೆ ಎಂದು ಈ ನಡಿಗೆಯಲ್ಲಿ ಭಾಗವಹಿಸಿದವರು ಅಭಿಪ್ರಾಯ ಪಡುತ್ತಾರೆ.

ಭಾರತದಲ್ಲಿ ವೈಜ್ಞಾನಿಕ ಸಂಶೋಧನೆಯ ಪ್ರಮುಖ ಸಂಸ್ಥೆಯಾದ ಸಿಎಸ್ಐಆರ್(ವಿಜ್ಞಾನ ಮತ್ತು ಔದ್ಯಮಿಕ ಸಂಶೋಧನಾ ಮಂಡಳಿ) ಗೆ ನೀಡಲಾಗುತ್ತಿರುವ ಹಣದಲ್ಲಿ 50% ದಷ್ಟು ಕಡಿತವಾಗಿದೆ, ಈ ಸರಕಾರದ ಅಡಿಯಲ್ಲಿ ಸಂಶೋಧಕರನ್ನು ಭಿಕ್ಷುಕರ ಮಟ್ಟಕ್ಕೆ ಇಳಿಸಲಾಗಿದೆ, ವಿಜ್ಞಾನ ನಡೆಸಬೇಕಾದರೆ ಹಣಕ್ಕಾಗಿ ಯಾಚಿಸಬೇಕು, ಇದರಿಂದಾಗಿ ಹಲವು ಪ್ರಾಜೆಕ್ಟುಗಳು ನಿಂತು ಹೋಗಿವೆ, ವಿವಿಧ ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿರುವವರಿಗೆ ತಿಂಗಳ ಸಂಬಳವೂ ಸಿಗದಂತಹ ಪರಿಸ್ತಿತಿ ಉಂಟಾಗಿದೆ.

ನಮ್ಮ ಸಂಶೋಧನಾ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಚಟುವಟಿಕೆಗಳನ್ನು ಪ್ರೋತ್ಸಾಹಿಸದೆ 'ಮೇಕ್ ಇನ್ ಇಂಡಿಯ' ಹೇಗೆ ಸಾಧ್ಯ ಎಂದೊಬ್ಬ ಪ್ರತಿಭಟನಾಕಾರರು ಕೇಳುತ್ತಾರೆ.

ಭಾರತದ ವಿಜ್ಞಾನ ರಂಗದಲ್ಲಿನ ಮತ್ತೊಂದು ಪ್ರಶ್ನೆಯೆಂದರೆ ಶಿಕ್ಷಣ ವ್ಯವಸ್ಥೆ. ಹೆಚ್ಚೆಚ್ಚು ವಿದ್ಯಾರ್ಥಿಗಳು 'ಏಕೆ' ಎಂದು ಕೇಳುವಂತಹ ಸುಧಾರಣೆಗಳು ಬರಬೇಕು, ಬದಲಿಗೆ ಸಾಮಾಜಿಕ ಜೀವನದಲ್ಲಿ ವಿಜ್ಞಾನವನ್ನು ಉಪೇಕ್ಷಿಸಿದರೆ ಸಮಾಜ ಮತ್ತಷ್ಟು ಕಂದಾಚಾರಿಯಾಗುತ್ತದೆ ಎಂಬ ಆತಂಕವೂ ಪ್ರತಿಭಟನಾಕಾರರಲ್ಲಿ ಕಾಣುತ್ತಿತ್ತು.

ಐದು ವರ್ಷಗಳ ಹಿಂದೆ ಪಾಕಿಸ್ತಾನದಲ್ಲಿನ ವಿಜ್ಞಾನದ ಕುರಿತು ತಮಾಷೆ ಮಾಡುತ್ತಿದ್ದೆ, ಭೂಮಿ ಮತ್ತು ಸ್ವರ್ಗದ ನಡುವಿನ ಅಂತರ ಹೆಚ್ಚುತ್ತಿದೆ ಎಂದೊಂದು ಸಂಶೋಧನಾ ಪ್ರಬಂಧ ಹೇಳುತ್ತದೆ ಎಂದು ನಗೆಯಾಡಿದ್ದೆ. ಆದರೆ ಈಗ ಭಾರತದಲ್ಲೂ ಇಂತಹ ಅಸಂಬದ್ಧ ವಿಚಾರಗಳನ್ನು ವಿಜ್ಞಾನದ ಹೆಸರಲ್ಲಿ ಹರಡಲಾಗುತ್ತಿದೆ ಎಂದೊಬ್ಬ ಪ್ರತಿಭಟನಾಕಾರು ಖೇದ ವ್ಯಕ್ತ ಪಡಿಸಿದರು.

ದಿಲ್ಲಿಯ ಒಂದು ಶಾಲೆಯ ವಿಜ್ಞಾನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಈ ನಡಿಗೆಗೆ ಕರೆದು ತಂದಿದ್ದರು. ವಿದ್ಯಾರ್ಥಿಗಳ ನಡುವೆ ಅವೈಜ್ಞಾನಿಕ ಮನೋಭಾವ ಹೆಚ್ಚುತ್ತಿದೆ, ಉದಾಹರಣೆಗೆ, ಗೋಮೂತ್ರದ ಪ್ರಯೋಜನಗಳು ಇತ್ಯಾದಿ. ಮಕ್ಕಳು ಯಾವುದಾದರೂ ವಿಷಯವನ್ನು ನಂಬುವ ಮೊದಲು ಅದನ್ನು ಪ್ರಶ್ನಿಸುವುದನ್ನು ಕಲಿಯಬೇಕು ಎಂದು ಈ ವಿದ್ಯಾರ್ಥಿಗಳನ್ನು ಇಲ್ಲಿಗೆ ಕರೆ ತಂದಿದ್ದೇನೆ ಎಂದು ಅವರು ಹೇಳಿದರು.

ವಿಜ್ಞಾನದ ವಿಷಯದಲ್ಲಂತೂ ಭಾರತದಲ್ಲಿ ಹಿಮ್ಮುಖ ಚಲನೆ ಕಾಣುತ್ತಿದೆ ಎಂದು ಹಲವರಲ್ಲಿ ಖೇದವಿದೆ. ಈ ಹಿನ್ನಡಿಗೆಯನ್ನು ಈಗಲಾದರೂ ನಿಲ್ಲಿಸಬೇಕು, ಹಲವು ವರ್ಷಗಳ ವೈಜ್ಞಾನಿಕ ಸಂಶೋಧನೆ ವ್ಯರ್ಥವಾಗಲು ಬಿಡಬಾರದು ಎಂಬುದಕ್ಕಾಗಿ ಇದರಲ್ಲಿ ಅವರು ಬಾಗವಹಿಸಿದ್ದಾರೆ.

ಆದರೆ ಈ ನಡಿಗೆಯಿಂದ ಏನಾದರೂ ಪ್ರಯೋಜನವಾದೀತೇ ಎಂಬ ಪ್ರಶ್ನೆ ಸಹಜವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಹಲವರಲ್ಲಿದೆ. ಎಲ್ಲವೂ ವೇದಗಳಲ್ಲಿವೆ ಎಂದು ಆಧುನಿಕ ವಿಜ್ಞಾನದ ಚಟುವಟಿಕೆಗಳನ್ನು ತುಚ್ಛೀಕರಿಸುವವರಿಗೆ ಕಪಾಳಮೋಕ್ಷದ ಕೆಲಸವನ್ನು ಇದು ಮಾಡಬಹದು, ಈ ನಡಿಗೆಯಲ್ಲಿ ಭಾಗವಹಿಸಿದವರನ್ನು ನೋಡಿದರೆ ಹೊಸ ಸ್ಫೂರ್ತಿ ಬಂದಿದೆ ಎಂದು ಬೆಂಗಳೂರಿನಲ್ಲಿ ಒಬ್ಬರು ಹೇಳಿದರೆ, ದಿಲ್ಲಿಯಲ್ಲಿ ಒಬ್ಬರು 'ಈ ಸರಕಾರ ಕಿವುಡಾಗಿದೆ, ಮೂಕವಾಗಿದೆ, ಏನನ್ನಾದರೂ ನಿರೀಕ್ಷಿಸುವುದು ಕಷ್ಟಸಾಧ್ಯ' ಎಂದರು.

ಆದರೆ ಮತ್ತೊಬ್ಬರು, ಎಲ್ಲವೂ ರಾತ್ರಿ ಹಗಲಾಗುವಷ್ಟರಲ್ಲಿ ಸಾಧ್ಯವಿಲ್ಲ, ಸರಕಾರ ಈಗಲಾದರೂ ಎದ್ದು ಕೂತು ಗಮನಿಸುತ್ತದೆ, ಸರಕಾರ ಮತ್ತು ವಿಜ್ಞಾನಿಗಳ ನಡುವೆ ಸಂವಾದವನ್ನು ಆರಂಭವಾಗಿ ಮುನ್ನಡೆಯುವ ಮುತುವರ್ಜಿ ಮೂಡಿ ಬರಬಹುದು ಎಂದು ಆಶಾಭಾವನೆಯನ್ನೂ ವ್ಯಕ್ತಪಡಿಸಿದರು. ಸರಕಾರ ವಿಜ್ಞಾನ ತಂತ್ರಜ್ಞಾನಕ್ಕೆ ಜಿಡಿಪಿಯ 3% ನ್ನು ನೀಡಬೇಕು ಎಂಬ ಬೇಡಿಕೆಯನ್ನಾದರೂ ಪರಿಶೀಲಿಸಬೇಕು ಎಂದು ಇನ್ನೊಬ್ಬರು ಆಶಿಸಿದರು. ಹಲವರಿಗೆ ಈ ನಡಿಗೆಯಲ್ಲಿ ಯುವಜನರ ಭಾಗವಹಿಸುವಿಕೆಯೂ ಹೊಸ ಆಶಾಬಾವನೆಯನ್ನು ಮೂಡಿಸಿರುವಂತೆ ಕಾಣುತ್ತದೆ.

ದಿಲ್ಲಿಯ ಹಲವಾರು ಸಿಎಸ್ಐಆರ್ ಸಂಸ್ಥೆಗಳಲ್ಲಿ ದುಡಿಯುತ್ತಿರುವ ವಿಜ್ಞಾನಿಗಳು, ಸಂಶೋಧನಾ ವಿದ್ಯಾರ್ಥಿಗಳು, ವಿಶ್ವವಿದ್ಯಾಲಯಗಳು, ಕಾಲೇಜುಗಳು, ಶಾಲೆಗಳ ವಿದ್ಯಾರ್ಥಿಗಳು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ, ಜನಹರಲಾಲ್ ನೆಹರೂ ಆನ್ವಯಿಕ ಸಂಶೋಧನಾ ಸಂಸ್ಥೆ, ಐಸಿಟಿಎಸ್, ಎನ್ಐಎಎಸ್,ನಲ್ಲಿ ಕೆಲಸ ಮಾಡುವ ಸಂಶೋಧಕರು, ಕಲಿಯುತ್ತಿರುವ ವಿದ್ಯಾರ್ಥಿಗಳು, ಕಾಲೇಜುಗಳು, ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪುಣೆಯಲ್ಲಿ ಐಐಎಸ್ಇಆರ್, ಐಯುಸಿಎಎಇತ್ಯಾದಿ ಸಂಸ್ಥೆಗಳ ಬೋಧಕರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಹಲವಾರು ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಜನವಿಜ್ಞಾನ ಆಂದೋಲನದ ಕಾರ್ಯಕರ್ತರು ಭಾಗವಹಿಸಿದ್ದರು ಎಂದು ವರದಿಗಳು ಬಂದಿವೆ.

ಸಹಜವಾಗಿಯೇ ಇತ್ತಿಚೆಗೆ ನಿಧನರಾಗಿರುವ ದಿಗ್ಗಜ ವಿಜ್ಞಾನಿಗಳಾದ ಪ್ರೊ.ಯಶಪಾಲ್, ಪ್ರೊ. ಭಾರ್ಗವ ಮತ್ತು ಡಾ.ಯು.ಆರ್.ರಾವ್ ಹಾಗೂ ವೈಜ್ಞಾನಿಕ ವಿಚಾರಗಳ ಪ್ರಸಾರದಲ್ಲಿ ತೊಡಗಿರುವಾಗ ಕಂದಾಚಾರಿಗಳ ಬಂದೂಕುಗಳು ಬಲಿತೆಗೆದು-ಕೊಂಡ ಡಾ.ನರೇಂದ್ರ ಧಬೋಲ್ಕರ್, ಡಾ.ಎಂ.ಎಂ. ಕಲಬುರ್ಗಿ ಮತ್ತು ಕಾಂ.ಪನ್ಸರೆಯವರ ಆದರ್ಶಗಳನ್ನು ಅನುಸರಿಸುವ ಪ್ರತಿಜ್ಞೆಗಳನ್ನೂ ಕೈಗೊಳ್ಳಲಾಯಿತು.





ರಾಜ್ಯಗಳ ಸುತ್ತ

ಮಧ್ಯಪ್ರದೇಶ: ನರ್ಮದಾ ನಿರ್ವಸಿತರಿಗೆ 'ರಕ್ಷಾಬಂಧನ'ದ ದಿನ 'ಲಾಠಿ ಬಂಧನ'

ಮಧ್ಯಪ್ರದೇಶದ ಮುಖ್ಯಮಂತ್ರಿಗಳು ರಾಜ್ಯದ ಚಿಖಲ್ದದಲ್ಲಿ ಸುಪ್ರಿಂ ಕೋರ್ಟ್ ಆದೇಶದಂತೆ ಪೂರ್ಣ ಮರುವಸತಿ ಕಲ್ಪಿಸದೆ ಒಕ್ಕಲೆಬ್ಬಿಸುವುದನ್ನು ವಿರೋಧಿಸಿ ಉಪವಾಸ ಕೂತಿರುವ ಮಹಿಳೆಯರಿಗೆ 'ರಕ್ಷಾಬಂಧನ'ದ ದಿನ ಲಾಠಿಗಳಿಂದ 'ರಾಖಿ' ಕಟ್ಟಿ ತಮ್ಮ ಅಸಲೀ ರೂಪವನ್ನು ಪ್ರದರ್ಶಿಸಿದ್ದಾರೆ. ಎಂದು ಸಿಪಿಐ(ಎಂ)ನ ಮಧ್ಯಪ್ರದೇಶ ರಾಜ್ಯ ಕಾರ್ಯದರ್ಶಿ ಬಾದಲ್ ಸರೋಜ್ ಉಪವಾಸ ಸತ್ಯಾಗ್ರಹ ನಡೆಸುತ್ತಿರುವವರ ಮೇಲೆ ಲಾಠಿ ಪ್ರಹಾರ ಮಾಡಿ ಉಪವಾಸ ನರತರೂ ಸೇರಿದಂತೆ ಹಲವರನ್ನು ಬಂಧಿಸಿರುವುದನ್ನು ಖಂಡಿಸುತ್ತ ಹೇಳಿದ್ದಾರೆ. ಮೇಧಾ ಪಾಟ್ಕರ್ ಮತ್ತು ಇತರ ಉಪವಾಸ ಸತ್ಯಾಗ್ರಹಿಗಳ ಬಂಧನ ಒಂದು ಅತ್ಯಂತ ಶಾಂತಿಪೂರ್ಣ ಮತ್ತು ನ್ಯಾಯಯುತ ಹೋರಾಟದೊಂದಿಗೆ ಅಸಂವಿಧಾನಿಕ ಮತ್ತು ಅಮಾನುಷ ವ್ಯವಹಾರ ಎಂದಿರುವ ಅವರು ಯಾವುದೇ ಸರಕಾರ ಕಾರ್ಪೊರೇಟ್ ಕಂಪನಿಗಳ ಸೇವೆಯಲ್ಲಿ ಮತ್ತು ಒಬ್ಬ ವ್ಯಕ್ತಿಯ ಅಹಂನ ತುಷ್ಟೀಕರಣಕ್ಕೆ ಇಷ್ಟು ಕೆಳಮಟ್ಟಕ್ಕೆ ಇಳಿಯಬಹುದೆಂದು ನಿರೀಕ್ಷಿಸಲೂ ಸಾಧ್ಯವಿಲ್ಲ ಎಂದಿದ್ದಾರೆ.

ಇದಕ್ಕೆ ಮೊದಲು ಉಪವಾಸ ಮುಷ್ಕರದಲ್ಲಿದ್ದ ಮೇಧಾ ಪಾಟ್ಕರ್ ಅವರನ್ನು ಭೇಟಿ ಮಾಡಿದ ಮಧ್ಯಪ್ರದೇಶ ಕಿಸಾನ್ ಸಭಾದ ಅಧ್ಯಕ್ಷ ಜಸ್‌ವಿಂದರ್ ಸಿಂಹ ಅವರು ಕೂಡ ಅಖಂಡ ರಾಷ್ಟ್ರದ ಜಪ ಮಾಡುವವರು ಒಂದು ರಾಜ್ಯದಲ್ಲಿ ಚುನಾವಣೆ ಗೆಲ್ಲಲು ಇನ್ನೊಂದು ರಾಜ್ಯದ 40000 ಕುಟುಂಬಗಳನ್ನು ಪೀಡಿಸುತ್ತಿರುವುದು ಸಂಕುಚಿತ ರಾಜಕಾರಣದ ಬಹುಶಃ ಅತ್ಯಂತ ಕೆಟ್ಟ ಉದಾಹರಣೆ ಎಂದು ಅವರು ಹೇಳಿದ್ದಾರೆ. ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಪ್ರಧಾನಿ ಮೋದಿ ಮತ್ತು ಪಕ್ಷದ ಅಧ್ಯಕ್ಷ ಅಮಿತ್ ಶಹಾ ಅವರ ಒತ್ತಡದಲ್ಲಿ ಈ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ. ತಕ್ಷಣ ಸರ್ದಾರ್ ಸರೋವರದ ಗೇಟುಗಳನ್ನು ತೆರೆಯಬೇಕು, ಮರುವಸತಿ ಪೂರ್ಣಗೊಳ್ಳುವವರೆಗೆ ಅವನ್ನು ಮುಚ್ಚಬಾರದು ಎಂದು ಮಧ್ಯಪ್ರದೇಶ ಕಿಸಾನ್ ಸಭಾ ಆಗ್ರಹಿಸಿದೆ.

ಮಧ್ಯಪ್ರದೇಶದಲ್ಲಿ ಸುಪ್ರಿಂ ಕೋರ್ಟಿನ ನಿರ್ಣಯವನ್ನು ತಪ್ಪಾಗಿ ವ್ಯಾಖ್ಯಿಸಿ ಸರ್ದಾರ್ ಸರೋವರ ಆಣೆಕಟ್ಟಿನ ಗೇಟ್‌ಗಳನ್ನು ಜುಲೈ 31ರಿಂದ ಮುಚ್ಚಲಾಗಿದೆ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸುಪ್ರಿಂ ಕೋರ್ಟ್ ಈ ಹಿಂದೆ ಜುಲೈ 31ರೊಳಗೆ ಎಲ್ಲ ಸಂತ್ರಸ್ಥರಿಗೂ ಪುನರ್ವಸತಿ ಕಲ್ಪಿಸಬೇಕು ಎಂದು ಸ್ಪಷ್ಟವಾಗಿ ಹೇಳಿತ್ತು. ಆದರೆ ಬಹುಪಾಲು ನಿರ್ವಸಿತರಿಗೆ ಸರಿಯಾದ ಮರುವಸತಿ ಕಲ್ಪಿಸದೆಯೇ ಮುಳಗಡೆಯಾಗುವ ಆ ಪ್ರದೇಶದಲ್ಲಿ ಇರುವವರನ್ನು ಬಲವಂತದಿಂದ ಸ್ಥಳಾಂತರ ಮಾಡಲು ಮುಂದಾದುದನ್ನು ವಿರೋಧಿಸಿ ನಡೆಯುತ್ತಿರುವ ಮೇಧಾ ಪಾಟ್ಕರ್ ನೇತೃತ್ವದ ಹೋರಾಟವನ್ನು ಬೆಂಬಲಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಮಧ್ಯಪ್ರದೇಶ ಸರಕಾರದ ಧೋರಣೆಯನ್ನು ಬಲವಾಗಿ ಖಂಡಿಸಿದ್ದಾರೆ. ಕೇಂದ್ರ ಸರಕಾರ ತಕ್ಷಣ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದ್ದಾರೆ.

ಈಗ ಪ್ರತಿಭಟನಾ ಉಪವಾಸ ಸತ್ಯಾಗ್ರಹ ಈಗ ಗಂಭೀರ ಮಟ್ಟವನ್ನು ತಲುಪಿದೆ. ಮಧ್ಯಪ್ರದೇಶ ಸರಕಾರ ಪ್ರತಿಭಟನೆಯನ್ನು ದಮನ ಮಾಡಲು ಪಣ ತೊಟ್ಟಂತಿದೆ. ಇದನ್ನು ಗುಜರಾತ್ ಚುನಾವಣೆಯ ಮೇಲೆ ಗಮನ ಕೇಂದ್ರೀಕರಿಸಿರುವ ಪ್ರಧಾನ ಮಂತ್ರಿಗಳು ತಮ್ಮ ಎಂದಿನ ಮೌನವ್ರತದಿಂದ ಸಮ್ಮತಿಸುತ್ತಿರುವಂತೆ ಕಾಣುತ್ತದೆ. ಉಪವಾಸ ಮುಷ್ಕರದಲ್ಲಿದ್ದ ಮೇಧಾ ಪಾಟ್ಕರ್ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿತ್ತು. ಆಗಸ್ಟ್ 9ರಂದು ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ಪೋಲಿಸರು ಮತ್ತೆ ಬಂಧಿಸಿದ್ದಾರೆ. ಅವರು ಮತ್ತು ಇತರ ಎಲ್ಲ 9 ಮಂದಿ ಬಂಧನದಲ್ಲೇ ಎರಡು ವಾರಗಳಿಂದ ನಡೆಸುತ್ತಿರುವ ಉಪವಾಸ ಸತ್ಯಾಗ್ರಹವನ್ನು ಮುಂದುವರೆಸಿದ್ದಾರೆ.

ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ, ಬಂಧನ ಮತ್ತು ಇತರ ದಮನಚಕ್ರಕ್ಕೆ ದೇಶಾದ್ಯಂತ ಪ್ರತಿಭಟನೆಗಳು ವ್ಯಕ್ತವಾಗಿವೆ. ಆಗಸ್ಟ್ 9ರಂದು ದಿಲ್ಲಿಯ ಜಂತರ್ ಮತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಲಾಗಿದೆ.. ಪ್ರತಿಭಟನಾಕಾರರೊಂದಿಗೆ ಮಧ್ಯಪ್ರದೇಶ ಪೋಲಿಸರ ಹಿಂಸಾಚಾರದ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಮಾನವ ಹಕ್ಕು ಅಯೋಗಕ್ಕೆ ಅರ್ಜಿ ಸಲ್ಲಿಸಲಾಗಿದೆ.



ಗೋವಾ ಸಿಪಿಐ(ಎಂ) ಕಾರ್ಯದರ್ಶಿ ಥಾಲ್ಮನ್ ಪೆರೇರಾ ನಿಧನ

ಸಿಪಿಐ(ಎಂ)ನ ಗೋವಾ ರಾಜ್ಯ ಸಂಘಟನಾ ಸಮಿತಿಯ ಕಾರ್ಯದರ್ಶಿ ಕಾಂ. ಥಾಲ್ಮನ್ ಜೆರಾಲ್ಡ್ ಪೆರೇರಾ ಆಗಸ್ಟ್ 6 ರಂದು ನಿಧನರಾಗಿದ್ದಾರೆ. ಅವರಿಗೆ 54 ವರ್ಷ.

ವಿದ್ಯಾರ್ಥಿ ದೆಸೆಯಲ್ಲೇ ಪ್ರಜಾಪ್ರಭುತ್ವ ಆಂದೋಲನಕ್ಕೆ ಧುಮುಕಿದ ಪೆರೇರ ಕಮ್ಯುನಿಸ್ಟ್ ಕುಟುಂಬದಿಂದ ಬಂದವರು. ಅವರ ತಂದೆ ಮತ್ತು ತಾಯಿ ಇಬ್ಬರೂ ರಾಜ್ಯದ ಕಾರ್ಮಿಕ ಆಂದೋಲನ ಮತ್ತು ಕಮ್ಯುನಿಸ್ಟ್ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು. ಪೆರೇರ ಕೂಡ ರಾಜ್ಯದ ಕಾರ್ಮಿಕ ಮತ್ತು ರೈತ ಆಂದೋಲನಕ್ಕೆ ನೇತೃತ್ವ ನೀಡುತ್ತಿದ್ದವರು.

ದಿಲ್ಲಿಯಲ್ಲಿ ಮತ್ತೆ ಮೂವರು ಒಳಚರಂಡಿ ಕಾರ್ಮಿಕರು ಬಲಿ

ದಿಲ್ಲಿಯ ಲಾಜಪತ್‌ನಗರದಲ್ಲಿ ಸ್ವಚ್ಛಗೊಳಿಸಲು ಒಳಚರಂಡಿಗಿಳಿದ ಮೂವರು ಕಾರ್ಮಿಕರು ಉಸಿರುಗಟ್ಟಿ ಸತ್ತಿರುವ ಸುದ್ದಿ ಬಂದಿದೆ. ಕಳೆದ ಒಂದು ತಿಂಗಳಲ್ಲಿ ದಕ್ಷಿಣ ದಿಲ್ಲಿ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಇದು ಎರಡನೇ ಇಂತಹ ಘಟನೆ. ಘಿಟೋಮಿ ಎಂಬಲ್ಲಿ ನಾಲ್ಕು ಮಂದಿ ಹೀಗೆಯೇ ಉಸಿರುಗಟ್ಟಿ ಸತ್ತಿದ್ದರು.

ಸಾವಿಗೀಡಾದವರು ಕಾಂಟ್ರಾಕ್ಟ್ ಕಾರ್ಮಿಕರು ಎಂದು ವರದಿಯಾಗಿದೆ. ತಮ್ಮ ಕಂಟ್ರಾಕ್ಟರ್ ಮತ್ತು ದಿಲ್ಲಿ ಜಲ ಮಂಡಳಿಯ ಒಬ್ಬ ಜೂನಿಯರ್ ಇಂಜಿನಿಯರ್ ಆದೇಶದ ಮೇರೆಗೆ ಇವರು ಒಳಚರಂಡಿಯನ್ನು ಸ್ವಚ್ಛಗೊಳಿಸಲು ಇಳಿದಿದ್ದರು ಎನ್ನಲಾಗಿದೆ.

ಒಳಚರಂಡಿ ಸ್ವಚ್ಛಗೊಳಿಸಲು ಯಂತ್ರಗಳಿದ್ದರೂ ಸಾಮಾನ್ಯವಾಗಿ ಅವು ಕೆಲಸ ಮಾಡದಿರುವುದರಿಂದಾಗಿ ಈ ರೀತಿ ಕಾರ್ಮಿಕರೇ ಒಳಚರಂಡಿಗಿಳಿದು ಸ್ವಚ್ಛವಾಡುವುದು ಅದನ್ನು ಕಾನೂನುಪ್ರಕಾರ ನಿಷೇಧಿಸಿದ್ದರೂ ಸಾಮಾನ್ಯ ಸಂಗತಿಯಾಗಿದೆ. ಒಳಚರಂಡಿ ಸ್ವಚ್ಛತೆಯ ಕೆಲಸವನ್ನು ಹೊರಗುತ್ತಿಗೆ ನೀಡಲಾಗಿದೆ. ಗುತ್ತಿಗೆ ಪಡೆದ ಕಂಟ್ರಾಕ್ಟರುಗಳು ತಮ್ಮ ಕೆಲಸಗಾರರಿಗೆ ಗಂಬೂಟ್, ಗ್ಲೋವ್ಸ್, ಮಾಸ್ಕ್ ಇತ್ಯಾದಿ ರಕ್ಷಣಾ ಸಾಧನಗಳನ್ನು ಒದಗಿಸುವುದಿಲ್ಲೆಂದೂ ತಿಳಿದುಬಂದಿದೆ.

ಈ ಘಟನೆಯ ಬಗ್ಗೆ ಆಕ್ರೋಶ ವ್ಯಕ್ತಪಡಿಸಿರುವ ಸಿಪಿಐ(ಎಂ)ನ ದಿಲ್ಲಿ ರಾಜ್ಯ ಸಮಿತಿ ಈ ದುರಂತಕ್ಕೆ ಜೂನಿಯರ್ ಇಂಜಿನಿಯರ್, ಕಂಟ್ರಾಕ್ಟರ್ ಮತ್ತು ದಕ್ಷಿಣ ದಿಲ್ಲಿ ಕಾರ್ಪೊರೇಷನ್‌ನ ಅಧಿಕಾರಿಗಳನ್ನು ಹೊಣೆ ಮಾಡಬೇಕು, ಅವರನ್ನು ವಜಾ ಮಾಡಿ ಐಪಿಸಿಯ 307 ಸೆಕ್ಷನ್ ಅಡಿಯಲ್ಲಿ ಅವರ ಮೇಲೆ ಆರೋಪ ಹಾಕಬೇಕು ಎಂದು ಆಗ್ರಹಿಸಿದೆ. ಸಾವಿಗೀಡಾದವರ ಕುಟುಂಬಗಳಿಗೆ 10 ಲಕ್ಷ ರೂ.ಗಳ ಪರಿಹಾರ ನೀಡಬೇಕು ಮತ್ತು ಕೈಗಳಿಂದ ಒಳಚರಂಡಿ ಸ್ವಚ್ಛಗೊಳಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು ಹಾಗೂ ಅದರ ಬದಲು ಯಂತ್ರಗಳನ್ನು ಬಳಸಬೇಕು ಎಂದೂ ಸಿಪಿಐ(ಎಂ) ಆಗ್ರಹಿಸಿದೆ.

ಸಿಪಿಐ(ಎಂ)ನ ಒಂದು ನಿಯೋಗ ಈ ಕಾರ್ಮಿಕರ ಕುಟುಂಬಗಳನ್ನು ಭೇಟಿ ಮಾಡಿತು.

ಜುನೈದ್ ಕುಟುಂಬಕ್ಕೆ ಕೇರಳ ಸಿಪಿಐ(ಎಂ)ನಿಂದ 10ಲಕ್ಷ ರೂ. ನೆರವು

ದಿಲ್ಲಿಯಿಂದ ಹರ್ಯಾಣದಲ್ಲಿರುವ ತನ್ನ ಊರಿಗೆ ಹಿಂದಿರುಗುವಾಗ ರೈಲಿನಲ್ಲಿ 'ಗೋರಕ್ಷಕ'ರ ಅಮಾನುಷ ಹಲ್ಲೆಗೆ ಬಲಿಯಾದ ಜುನೈದನ ಕುಟುಂಬಕ್ಕೆ ಸಿಪಿಐ(ಎಂ)ನ ಕೇರಳ ರಾಜ್ಯಸಮಿತಿ 10 ಲಕ್ಷ ರೂ.ಗಳ ನೆರವು ನೀಡಿದೆ. ಕೆಲವು ದಿನಗಳ ಹಿಂದೆ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನು ಜುನೈದನ ತಂದೆ –ತಾಯಿ ಭೇಟಿಯಾಗಿದ್ದರು. ಆಗ ಅವರಿಗೆ ತಮ್ಮ ಈಗಿನ ಆರ್ಥಿಕ ಪರಿಸ್ಥಿತಿಯಿಂದಾಗಿ ಹಣಕಾಸಿನ ನೆರವಿನ ಅಗತ್ಯವಿದೆ ಎಂದು ತಿಳಿದಾಗ ಕೇರಳ ರಾಜ್ಯ ಸಮಿತಿ ಅದನ್ನು ಒದಗಿಸಲು ನಿರ್ಧರಿಸಿತು.

ಸಿಪಿಐ(ಎಂ) ಕೇಂದ್ರ ಸಮಿತಿಯ ಮೂಲಕ ಇದನ್ನು ಅವರಿಗೆ ತಲುಪಿಸಲಾಗುವುದು.

ಬೇಟೀ ಬಚಾವೋ ಘೋಷಣೆಯ ಬಿಜೆಪಿಯ ಅಸಲೀ ಮುಖ ಬಯಲು

ವರ್ಣಿಕಾ ಅವರ ದೂರಿನ ಮೇಲೆ ಇವರಿಬ್ಬರನ್ನು ಬಂಧಿಸಿ ಚಂಡೀಗಡ ಪೋಲಿಸರು ಮೊದಲು ಅವರ ಮೇಲೆ ಕೇಸ್ ಹಾಕಿದರೂ ನಂತರ ಅದನ್ನು ಹಗುರಗೊಳಿಸಿ ಜಾಮೀನಿನಲ್ಲಿ ಬಿಡುಗಡೆ ಮಾಡಿದರು. ಅ ಮೇಲೆ ಕೆಲವು ಸಂಚಾರ ಸಿಸಿಟಿವಿ ಕ್ಯಾಮರಾಗಳು ಕೆಲಸ ಮಾಡುತ್ತಿರಲಿಲ್ಲವಾದ್ದರಿಮದ ದಾಖಲೆಗಳು ಸಿಕ್ಕಿಲ್ಲ ಎಂದು ಹೇಳಲಾಯಿತು. ಈ ನಡುವೆ ವಿವಿಧ ಬಿಜೆಪಿ ಮಂದಿಗಳ ಹೇಳಿಕೆಗಳು, ಟ್ವಿಟ್‌ಗಳು ಪೋಲೀಸರ ಮೇಲೆ ಈ ಕೇಸನ್ನು ಮುಚ್ಚಿ ಹಾಕುವಂತೆ ಒತ್ತಡ ಹಾಕಲಾಗುತ್ತಿದೆ ಎಂದು ಸಂದೇಹವನ್ನು ಬಲಪಡಿಸಿದಾಗ 'ವ್ಯಾಪಕ ಆಕ್ರೋಶ ವ್ಯಕ್ತವಾಯಿತು.

ಎಐಡಿಡಬ್ಲ್ಯುಎ ನ ಹರ್ಯಾಣ ಮತ್ತು ಪಂಜಾಬ್ ರಾಜ್ಯ ಸಮಿತಿಗಳ ನೇತೃತ್ವದಲ್ಲಿ ಚಂಡೀಗಡದಲ್ಲಿ ಪ್ರತಿಭಟನೆ ನಡೆಯಿತು. ಎಐಡಿಡಬ್ಲ್ಯುಎ ನ ಉಪಾಧ್ಯಕ್ಷರೂ, ಸಿಪಿಐ(ಎಂ)ನ ಹಿರಿಯ ಮುಖಂಡರೂ ಆದ ಸುಭಾಷಿಣಿ ಅಲಿಯವರೂ ಈ ಪ್ರತಿಭಟನೆಯಲ್ಲಿ ಭಾಗವಹಿಸಿದರು. ಹರ್ಯಾಣ ಮುಖ್ಯಮಂತ್ರಿಗಳನ್ನು ಭೇಟಿ ಮಾಡಬೇಕೆಂದ ಪ್ರತಿಭಟನಾಕಾರರನ್ನು ಪೋಲಿಸರು ತಡೆದಾಗ ಅಲ್ಲೇ ಮತಪ್ರದರ್ಶನ ನಡೆಸಿದರು. "ಚಂಡೀಗಡ ಪೋಲಿಸರು ಎಫ್‌ಐಆರ್‌ನಲ್ಲಿ ಜಾಮೀನಿರದ ಸೆಕ್ಷನ್‌ಗಳನ್ನೂ ಸೇರಿಸಬೇಕು. ಆಪಾದಿತನ ತಂದೆ

ಪುಟ 2 ರಿಂದ

ಸುಭಾಷ್ ಬರಾಲಾ ಹರ್ಯಾಣದ ಬಿಜೆಪಿ ಅಧ್ಯಕ್ಷರ ಹುದ್ದೆಯಿಂದ ರಾಜಿನಾಮೆ ನೀಡಬೇಕು, ಏಕೆಂದರೆ ಹರ್ಯಾಣದಲ್ಲೂ, ಕೇಂದ್ರದಲ್ಲೂ ಬಿಜೆಪಿಯದ್ದೇ ಸರಕಾರವಿದ್ದು ಆತ ತನಿಖೆಯ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ" ಎಂದು ಸುಭಾಷಿಣಿ ಅಲಿಯವರು ಬಿಜೆಪಿ ದೂರು ಕೊಟ್ಟವಳ ಹಳೆಯ ಫೋಟೋವನ್ನು ಹಾಕಿ ಅವಮಾನ ಮಾಡಲು, ಆಕೆಯ ಜೀವನಶೈಲಿಯನ್ನು ಪ್ರಶ್ನಿಸುವುದನ್ನು ಖಂಡಿಸಿದರು.

"ಈ ಘಟನೆ ಮತ್ತು ನಂತರದ ಬಿಜೆಪಿ ಮುಖಂಡರ ಹೇಳಿಕೆಗಳು ಅವರ 'ಬೇಟಿ ಬಚಾವೊ, ಬೇಟಿ ಪಢಾವೊ' ಘೋಷಣೆ ಎಷ್ಟು ಟೊಳ್ಳು ಎಂಬುದನ್ನು ತೋರಿಸುತ್ತವೆ. ಚಂಡೀಗಡ ಪೋಲಿಸರು ರಾಜಕೀಯ ಒತ್ತಡದ ಅಡಿಯಲ್ಲಿ ಕೆಲಸ ಮಾಡುತ್ತಿರುವಂತೆ ಕಾಣುತ್ತದೆ. ಮೊದಲಿಗೆ ಸಿಸಿಟಿವಿಗಳು ಕೆಲಸ ಮಾಡುತ್ತಿಲ್ಲ ಎಂದ ಅವರುಗಳು ಈಗ ಎರಡು ಕಾರುಗಳಿರುವ ಫೂಟೇಜ್ ಸಿಕ್ಕಿದೆ ಎಂದಿದ್ದಾರೆ. ಮಾಧ್ಯಮಗಳು ಮತ್ತು ಜನಗಳ ಒತ್ತಡಗಳಿಲ್ಲದಿದ್ದರೆ ಅವರು ದೂರು ನೀಡಿದ ವರ್ಣಿಕಾ ಮೇಲೆ ರಾಜಿಯೊಂದನ್ನು ಹೇರುತ್ತಿದ್ದರು" ಎಂದು ಸುಭಾಷಿಣಿಯವರು ಹೇಳಿದರು.

ಸುಭಾಷಿಣಿ ಅಲಿ, ಜಗ್ಮತಿ ಸಂಗ್ವಾನ್ ಹಾಗೂ ಹರ್ಯಾಣ ಮತ್ತು ಪಂಜಾಬ್ ಎಐಡಿಡಬ್ಲ್ಯುಎ ಘಟಕಗಳ ಮುಖಂಡರಿದ್ದ ಎಐಡಿಡಬ್ಲ್ಯುಎ ನಿಯೋಗ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಅಪಹರಣ ಮತ್ತು ಮಾನ ಕಳೆಯುವ ಪ್ರಯತ್ನದ ಸೆಕ್ಷನ್ 365 ಮತ್ತು 511ನ್ನು ಸೇರಿಸಿ ಆಪಾದಿತರನ್ನು ಜೈಲಿಗೆ ಹಾಕಬೇಕು ಎಂದು ಆಗ್ರಹಿಸಲಾಯಿತು. ನಂತರ ಚಂಡೀಗಡ ಎಸ್‌ಪಿಯವರಿಗೂ ಮನವಿ ಪತ್ರ ಸಲ್ಲಿಸಲಾಯಿತು.

ಈ ನಡುವೆ ಎಐಡಿಡಬ್ಲ್ಯುಎ ಮುಖಂಡರು ವರ್ಣಿಕಾ ಮತ್ತು ಅವರ ಕುಟುಂಬದವರನ್ನು ಭೇಟಿ ಮಾಡಿ ರಾಜಕೀಯ ಪ್ರಭಾವ ಹೊಂದಿರುವವರ ವಿರುದ್ಧ ನಡೆಯುವ ಈ ಹೋರಾಟದಲ್ಲಿ ಸಂಘಟನೆಯ ಸಂಪೂರ್ಣ ಬೆಂಬಲದ ಭರವಸೆ ನೀಡಿದರು.

ವ್ಯಾಪಕ ಆಕ್ರೋಶದ, ಪ್ರತಿಭಟನೆಗಳ ನಂತರ ಕೊನೆಗೂ ಆಪಾದಿತರ ಮೇಲೆ ಅಪಹರಣ ಮತ್ತು ಮಾನ ಕಳೆಯುವ ಪ್ರಯತ್ನದ ಅಂಶಗಳನ್ನು ಸೇರಿಸಿ, ಇಬ್ಬರನ್ನೂ ಬಂಧಿಸಲಾಗಿದೆ. ಈ ಮೂಲಕ ಮೊದಲ ಹಂತದಲ್ಲಿ ಸತ್ಯ ಮತ್ತು ನ್ಯಾಯಕ್ಕೆ ಗೆಲುವು ಸಿಕ್ಕಿದೆ, ಆದರೆ ಹೋರಾಟ ಇನ್ನೂ ದೀರ್ಘಕಾಲ ನಡೆಯಲಿದೆ, ಇದರಲ್ಲಿ ಎಐಡಿಡಬ್ಲ್ಯುಎ ವರ್ಣಿಕಾ ಮತ್ತು ಆಕೆ–ಯ ಕುಟುಂಬದ ಜತೆಗಿದೆ ಎಂದು ಹರ್ಯಾಣ ರಾಜ್ಯ ಕಾರ್ಯದರ್ಶಿ ಸವಿತಾ ಹೇಳಿದ್ದಾರೆ. ಈ ಇಡೀ ಪ್ರಕರಣದಲ್ಲಿ ಬಿಜೆಪಿಯ ಅಸಲೀ ಮುಖ ಬಯಲಾಗಿದ್ದು, ಅವರು ಇನ್ನಾದರೂ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ನಿರೀಕ್ಷೆಯನ್ನು ಅವರು ವ್ಯಕ್ತಪಡಿಸಿದ್ದಾರೆ.

ದೇಶಪ್ರೇಮಿಗಳು ಎಲ್ಲಿ.....

ಪುಟ 6 ರಿಂದ

ಆ ಗುಂಪಿನಲ್ಲಿ ವಾಜಪೇಯಿಯವರೂ ಇದ್ದರು, ಜೈಲು ವಾಸವನ್ನೂ ಅನುಭವಿಸಿದರು ಎಂಬ ಪುರಾಣವನ್ನು ಸೃಷ್ಟಿಸಲಾಯಿತು. ಆದರೆ ಫ್ರಂಟ್ ಲೈನ್ ಪತ್ರಿಕೆಯ ತನಿಖೆ ವಾಜಪೇಯಿಯವರೇ ಕೋರ್ಟ್‌ನಲ್ಲಿ ನೀಡಿದ ಪ್ರಮಾಣ ಪತ್ರದಲ್ಲಿ ನಾನು ಆ ಸಂದರ್ಭದಲ್ಲಿ ಕೇವಲ ದೂರ ನಿಂತು ನೋಡುವ ಕುತೂಹಲಿಯಾಗಿದ್ದನೆ ಹೊರತು ಭಾಗಿಯಲ್ಲ, ಅರಣ್ಯ ಇಲಾಖೆ ಕಛೇರಿಯ ಒಳಕ್ಕೆ ಹೋಗಲೇ ಇಲ್ಲ ಎಂದು ಹೇಳಿಕೆ ನೀಡಿರುವುದನ್ನು ಪತ್ತೆ ಹಚ್ಚಿತು. ಆ ಬಗ್ಗೆ ವಾಜಪೇಯಿಯವರನ್ನು ಪ್ರಶ್ನಿಸಲಾಗಿ ಅವರೂ ಅದನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಅದೇ ಸಮಯದಲ್ಲಿ ಬೆಳಕಿಗೆ ಬಂದ ವಿಚಾರವೆಂದರೆ ವಾಜಪೇಯಿಯುವರು ಆ ಚಳುವಳಿಯ ಭಾಗವಹಿಸಲಿಲ್ಲ ಸರಿ. ಆದರೆ ಅದರ ನೇತೃತ್ವ ವಹಿಸಿದ ಇಬ್ಬರು ಮುಖ್ಯಸ್ಥರ ಹೆಸರನ್ನು ಮತ್ತು ಅವರೆಲ್ಲ ಹೇಗೆ ಅ ಕಛೇರಿ ನಾಶ ಮಾಡಿದರೆಂಬ ಬಗ್ಗೆ ವಿವರವಾಗಿ ಕೋರ್ಟ ಮುಂದೆ ನೀಡಿದ ಹೇಳಿಕೆ ಆ ಚಳುವಳಿಗಾರರನ್ನು ಜೈಲಿಗಟ್ಟಲು ಸಹಾಯಕವಾಯಿತು. ಇಡೀ ಊರಿಗೆ ಮುಂಡುಗಂದಾಯ ವಿಧಿಸಲು ಕಾರಣವಾಗಿದೆ ಎಂದು. ಇದು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದಿದ್ದರೆ ಹೋಗಲಿ, ಆದರೆ ಸ್ವಾತಂತ್ರ್ಯ ಚಳುವಳಿಗೆ ದ್ರೋಹ ಬಗೆದಂತಾಗಲಿಲ್ಲವೆ ಎಂಬ ಪ್ರಶ್ನೆ ಹುಟ್ಟಿತು.

ಬ್ರಿಟಿಶರಿಗೆ ಸಾವರ್ಕರ್ ಅವರ "ವೀರ" ಶರಣಾಗತಿ!

ಇನ್ನು ಬಿಜೆಪಿ ಮತ್ತು ಆರೆಸ್ಸೆಸ್ ನ "ವೀರ" ಸಾವರ್ಕರ್ ರವರ ಹೆಸರನ್ನು ಪದೇ ಪದೇ ಬಳಸಲಾಗುತ್ತಿದೆ. ವಿವಿಧ ನಗರಗಳ ರಸ್ತೆ, ಸೇತುವೆಗಳಿಗೆ ಹೆಸರಿಡಲು ಕೂಡಾ ಜನ ಒಪ್ಪುವ ಹೆಸರುಗಳು ಇಲ್ಲದಿರುವುದು ಬಿಜೆಪಿಗೆ ದೊಡ್ಡ ಕೊರತೆಯಾಗಿದೆ. ಆದ್ದರಿಂದ ಸಾವರ್ಕರ್ ರವರ ಹೆಸರನ್ನು ಉಪಯೋಗಿಸುವ ಅನಿವಾರ್ಯತೆ ಇದೆ. ದೇಶದಲ್ಲಿ ಮೊತ್ತಮೊದಲು ಹಿಂದೂ ರಾಷ್ಟ್ರದ ಪರಿಕಲ್ಪನೆಗೆ ತಾತ್ವಿಕವಾಗಿ ವಿವರಣೆ ನೀಡಿದವರು ಎಂಬ ಹೆಗ್ಗಳಿಕೆಯೂ ಬಿಜೆಪಿಗೆ ಅವಶ್ಯವಾದ ಗುಣವೇ. ಆದರೆ ಇವರನ್ನು "ವೀರ" ಎಂದು ಕರೆಯುವುದು ವೀರ ಎಂಬ ಹೆಸರಿಗೆ ಅಪಮಾನ. ಆದರೆ ಇವರ ಹೆಸರನ್ನು ಅಂಡಮಾನ್ ವಿಮಾನ ನಿಲ್ದಾಣಕ್ಕೆ ಇಡಲಾಗಿದೆ. ನೂರಾರು ಮಂದಿ ಕ್ರಾಂತಿಕಾರಿಗಳು ಸೆರೆಯಾಗಿದ್ದ ಆ ಜಾಗಕ್ಕೆ ಸಾವರ್ಕರ್ ರವರ ಹೆಸರನ್ನಿಟ್ಟಿರುವುದು ದೊಡ್ಡ ಅಪಹಾಸ್ಯ. ಏಕೆ–ಂದರೆ ಸೆರೆಯಿಂದ ಹೇಗಾದರೂ ಮಾಡಿ ಹೊರಗೆ ಬರಬೇಕೆನ್ನುವ ತವಕದಲ್ಲಿ 1913 ರಲ್ಲಿ ಶರಣಾಗತಿ ಪತ್ರ ಬರೆದುಕೊಡುವ ಮತ್ತು ಆ ಪತ್ರದಲ್ಲಿ "ನೀವು ಏನು ಹೇಳಿದರೂ ಶಿರಸಾವಹಿಸಿ ಮಾಡುತ್ತೇನೆ. ನನ್ನ ಅನುಯಾಯಿಗಳನ್ನೆಲ್ಲ ಸ್ವತಂತ್ರ್ಯ ಚಳುವಳಿಯ ಹಾದಿಯಿಂದ ಬಿಡಿಸುತ್ತೇನೆ" ಎಂದು ಬರೆದಿರುವುದು ಚಳುವಳಿಗೆ ಬಗೆದ ದ್ರೋಹದ ಮತ್ತೊಂದು ಮಾದರಿ. ಇದನ್ನು ಆಗು ಮಾಡಲೋ ಎಂಬಂತೆ ಮುಂದೆ 1942ರ ಚಲೇಜಾವ್ ಚಳುವಳಿಗೆ ಬಗೆದ ದ್ರೋಹ ಇನ್ನೂ ಒಂದು ಮಾದರಿಯದು.

ಆ ಸಮುಯದಲ್ಲಿ ಕಾನ್ಪುರದಲ್ಲಿ ಹಿಂದೂ ಮಹಾಸಭೆಯ ಸಮಾವೇಶವೊಂದನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದ ಸಾವರ್ಕರ್ ರವರು ಚಲೇಜಾವ್ ಚಳುವಳಿಯ ನಿರ್ಣಯದಲ್ಲಿ ಚುನಾಯಿತ ಸದಸ್ಯರೆಲ್ಲ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕು, ಪ್ರಾಂತಗಳಲ್ಲಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಗಳಿಗೂ ರಾಜೀನಾಮೆ ನೀಡಿ ಹೊರಬರಬೇಕು ಎಂಬ ಕರೆಯನ್ನು ತಿರಸ್ಕರಿಸಲು ಸಲಹೆ ಮಾಡಿದರು. ಅದಕ್ಕೊಂದು ತಾತ್ವಿಕ ರೂಪ ನೀಡಿ ಸಮರ್ಥಿಸಿಕೊಂಡರು 'ನಮ್ಮ ತತ್ವ ಜವಾಬ್ದಾರಿಯುತ ಸಹಕಾರ. ವಿವಿಧ ಸ್ಥಾನಗಳಿಗೆ ಚುನಾಯಿತರಾಗಿರುವವರೆಲ್ಲರೂ ಅವರವರ ಸ್ಥಾನಗಳಲ್ಲಿ ಮುಂದುವರೆಯಬೇಕು. ಆ ಅಧಿಕಾರ ಕೇಂದ್ರಗಳನ್ನು ಹಿಂದೂಗಳ ನ್ಯಾಯಬದ್ಧವಾದ ಹಕ್ಕುಗಳನ್ನು ರಕ್ಷಿಸಲು ಮತ್ತು ಉತ್ತೇಜನ ನೀಡಲು ಬಳಸಿಕೊಳ್ಳಬೇಕು ನಮ್ಮ ಗುರಿಗಳನ್ನು ಸಾಧಿಸಲು ಸಕಾರಣವಾದ ರಾಜಿಗಳನ್ನು ಮಾಡಿಕೊಳ್ಳುವುದು ಅನಿವಾರ್ಯ 'ದೇಶದ ಸ್ವಾತಂತ್ರ್ಯದ ಚಳುವಳಿ ಬೆಳೆಯುತ್ತಿಲುವ ಸಂದರ್ಭದಲ್ಲಿ ಇಂತಹ ಅವಕಾಶವಾದಿ ಸಲಹೆ ನೀಡುವವರು ಮತ್ತು ಅದನ್ನು ತಾತ್ವೀಕರಿಸುವವರು ಸ್ವಾತಂತ್ರ್ಯ ಹೋರಾಟಗಾರರು!! ಅ ಸಂದರ್ಭದಲ್ಲಿ ಹಿಂದೂ ಮಹಾಸಭಾ ಮೂರು ಪ್ರಾಂತಗಳಲ್ಲಿ ಮುಸ್ಲಿಂ ಲೀಗಿನ ಜೊತೆಗೆ ಮೈತ್ರಿ ಸರ್ಕಾರಗಳನ್ನು ನಡೆಸುತ್ತಿತ್ತು. ಬಂಗಾಲ, ಸಿಂದ್ ಮತ್ತು ವಾಯುವ್ಯ ಪ್ರದೇಶ. ಸಿಂದ್ ನ ವಿಧಾನಸಭೆ ಪಾಕಿಸ್ತಾನಕ್ಕೆ ಸೇರಬೇಕೆಂದು ನಿರ್ಣಯ ಪಾಸು ಮಾಡಿದಾಗಲೂ ಕೂಡ ಪ್ರತಿಭಟನೆ ಇಲ್ಲ.

ಬ್ರಿಟಿಶರಲ್ಲಿ ನಂಬಿಕೆಯಿಡಿ:

– ಶ್ಯಾಮ ಪ್ರಸಾದ್ ಮುಖರ್ಜಿ

ಇನ್ನು ಸಂಘ ಪರಿವಾರದ ಮತ್ತೊಬ್ಬ ಹೀರೋ, ಜನಸಂಘದ ಸ್ಥಾಪಕರಲ್ಲೊಬ್ಬರಾದ ಶ್ಯಾಮಪ್ರಸಾದ ಮುಖರ್ಜಿಯವರ ಅಣಿ ಮುತ್ತುಗಳನ್ನು ನೋಡೋಣ. ಚಲೇಜಾವ್ ಚಳುವಳಿಯ ಸಂದರ್ಭದಲ್ಲಿ ಅವರು ಬಂಗಾಲದಲ್ಲಿ ಮುಸ್ಲಿಂ ಲೀಗಿನ ಜೊತೆ ಮೈತ್ರಿ ಸರಕಾರದಲ್ಲಿ ಅರ್ಥ ಮಂತ್ರಿ.

"ಬಂಗಾಲದಲ್ಲಿ ಚಲೇಜಾವ್ ಚಳುವಳಿಯನ್ನು ಎದುರಿಸುವುದು ಹೇಗೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಮ್ಮ ಪ್ರಾಂತದ ಆಡಳಿತವನ್ನು ನಾವು ಹೇಗೆ ನಡೆಸಬೇಕೆಂದರೆ, ಕಾಂಗ್ರೆಸ್ ತನ್ನ ಅತ್ಯುತ್ತಮ ಪ್ರಯತ್ನ ಮಾಡಿದರೂ ಈ ಚಳುವಳಿ ನಮ್ಮ ಪ್ರಾಂತದಲ್ಲಿ ಬೇರು ಬಿಡಲು ಸಾಧ್ಯವಾಗಬಾರದು. ಜನರಿಗೆ ನಾವು ಹೇಳಬೇಕು, ಕಾಂಗ್ರೆಸ್ ಬಯಸುವಂತಹ ಸ್ವಾತಂತ್ರ್ಯ ನಮಗೆ ಚುನಾಯಿತ ಪ್ರತಿನಿಧಿಗಳಿಗೆ ಈಗಾಗಲೇ ಸಿಕ್ಕಿದೆ. ಕೆಲ ಮಿತಿಗಳಿರಬಹುದಷ್ಟೆ. ಭಾರತೀಯರು ಬ್ರಿಟಿಷರಲ್ಲಿ ನಂಬಿಕೆಯಿಡಬೇಕು"

ಹಲವಾರು ದಶಕಗಳ ಕಾಲದ ಅನುಭವ ಬ್ರಿಟಿಷರನ್ನು ನಂಬುವುದು ಸಾಧ್ಯವಿಲ್ಲ, ನಮಗೆ ಅವರು ಸ್ವಾತಂತ್ರ್ಯ ಕೊಡಲು ಸಿದ್ದವಿಲ್ಲ ಎಂದು ಸಾಬೀತಾಗಿರುವಾಗ, ದೇಶಪ್ರೇಮೀ ಹೋರಾಟವೊಂದು ಬಿರುಸಾಗಿ ನಡೆಯುತ್ತಿರುವಾಗ ಅದನ್ನು ತುಳಿಯುವ ಮಾತನಾಡುವವರು ದೇಶಪ್ರೇಮಿಗಳು?!. ಇವರು ಬೇರೆಯವರ ದೇಶಪ್ರೇಮದ ಬಗ್ಗೆ ಪ್ರಮಾಣ ಪತ್ರ ನೀಡುವ ಅರ್ಹತೆ ತಮಗೆ ಮಾತ್ರ ಇದೆ ಎಂದು ಘೋಷಿಸಿಕೊಳ್ಳುತ್ತಿದ್ದಾರೆ.

ಪಾಕಿಸ್ತಾನದ ಜನಕ ಸಾವರ್ಕರ್ "ಎರಡು–ರಾಷ್ಟ್ರ ಸಿದ್ಧಾಂತ"

ಆರೆಸ್ಸೆಸ್ ಸ್ವಾತಂತ್ರ್ಯ ಸಾಧನೆಗೆ ಉಂಟು ಮಾಡಿದ ತೊಡಕುಗಳು ಅವರ ಭಾಗವಹಿಸುವಿಕೆಗೆ/ಭಾಗವಹಿಸದಿರುವಿಕೆಗಷ್ಟೇ ಸೀಮಿತವಾಗಿಲ್ಲ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿಯೆ ಕೋಮು ಗಲಭೆ ಎಬ್ಬಿಸುವುದು, ಎದ್ದ ಕೋಮು ಗಲಭೆಗಳಿಗೆ ತುಪ್ಪ, ಎಣ್ಣೆ ಹೊಯ್ದು ಅದನ್ನು ಮತ್ತಷ್ಟು ಹಬ್ಬುವಂತೆ ಮಾಡುವುದು, ಕೋಮು ದ್ವೇಷ ಹಬ್ಬಿಸಲು ನಿರಂತರ ಪ್ರಯತ್ನ. ಇಂತಹವುಗಳ ಮೂಲಕ ಮುಸ್ಲಿಮರಲ್ಲಿ ಈ ದೇಶದಲ್ಲಿ ತಮಗೆ ಸುರಕ್ಷತೆ ಸಾಧ್ಯವಿಲ್ಲ. ಆದ್ದರಿಂದ ಬೇರೆ ದೇಶಕ್ಕಾಗಿ ಹೋರಾಟ ಮಾಡಿ ಪಡೆಯಲೇಬೇಕು ಎಂಬ ಹಠ ಮುಸ್ಲಿಮ್ ಜನ ಸಾಮಾನ್ಯರಲ್ಲಿ ಮೂಡುವಂತಾಯಿತು. ನಮಗೆ ಪಾಕಿಸ್ತಾನ ಬೇಕೆ ಬೇಕು ಎಂದು ಮುಸ್ಲಿಂ ಲೀಗ್ ಹೋರಾಟಕ್ಕೆ ಇಳಿಯಿತು. ಈ ಎರಡು ರಾಷ್ಟ್ರ ಸಿದ್ಧಾಂತವನ್ನು ನಮ್ಮ ದೇಶದಲ್ಲಿ ಎಲ್ಲರಿಗಿಂತ ಮೊದಲು ಮಂಡಿಸಿದ್ದೇ ಇವರ ವೀರ ಸಾವರ್ಕರ್. ಹೀಗೊಂದು ವಿಶಾಲ ಭಾರತದ ಬದಲಾಗಿ ವಿಭಜಿತ ಭಾರತವಾಗಿ ಇಂದು ಕೂಡ ಹಲವು ಸಮಸ್ಯೆಗಳಿಗೆ ಬೀಜ ಬಿತ್ತಿದ್ದೇ ಹಿಂದೂ ರಾಷ್ಟ್ರವಾದಿಗಳು. ದೇಶ ವಿಭಜನೆಯಾಗುವ ಸಮಯದಲ್ಲಿನ ಗಲಭೆಗಳು ಸಾವಿರಾರು ಸಾವು ನೋವುಗಳು, ಲಕ್ಷಾಂತರ ಜನರು ಇಲ್ಲಿಂದ ಅಲ್ಲಿಗೆ ಕರುಳು ಕಿತ್ತುಕೊಂಡು ನಿರಾಶ್ರಿತರಾಗಿ ವಲಸೆ ಬರುವ ಸಂಕಟಗಳು ಒಂದೇ ಎರಡೇ!! ಈ ಎಲ್ಲದರಲ್ಲಿ ಆರೆಸ್ಸೆಸ್ ನ ಪಾತ್ರ ಅನೇಕ ಅಧ್ಯಯನಗಳಲ್ಲಿ, ತನಿಖಾ ವರದಿಗಳಲ್ಲಿ ದಾಖಲಾಗಿದೆ. ಅಂದಿನ ಬಹು ಘೋರ ಕೋಮು ಗಲಭೆಗಳು ಸಂಭವಿಸಿದ್ದೇ ರಾಜರ ಆಡಳಿತದಲ್ಲಿದ್ದ ಸಂಸ್ಥಾನಗಳಲ್ಲಿ. ಹೈದರಾಬಾದ್, ಜಮ್ಮು, ಆಲ್ವಾರ್, ಭರತ್‌ಪುರ್, ಮೇವತ್, ಪಾಟಿಯಾಲ ಹೆಸರಿಸಬಹುದಾದ ಕೆಲವು. ಇನ್ನು ದೆಹಲಿಯಲ್ಲಿ ಮತ್ತು ಸುತ್ತ ಮುತ್ತ ಇದ್ದ, ಭಾರತದಲ್ಲಿಯೇ ತಮ್ಮ ಬದುಕು ಕಂಡುಕೊಳ್ಳಬೇಕೆಂದು ನಿಶ್ಚಯು ಮಾಡಿದ್ದ ಮುಸ್ಲಿಮರನ್ನು ಕೋಮು ಗಲಭೆಗಳನ್ನು ಸೃಷ್ಟಿಸಿ ಪಾಕಿಸ್ತಾನಕ್ಕೆ ಓಡಿಸಿದ್ದರಲ್ಲಿ ಆರೆಸ್ಸೆಸ್ ನ ಪಾತ್ರವೇ ಪ್ರಧಾನ. ಸ್ವತಂತ್ರ ಭಾರತದಲ್ಲಿ ಉಂಟು ಮಾಡಿದ ನೂರಾರು ಕೋಮುಗಲಭೆಗಳ ಬಗ್ಗೆ ವಿವರಿಸಲು ಇಲ್ಲಿ ಸಾಧ್ಯವಿಲ್ಲ.

ಈ ಕೋಮು ದಂಗೆಗಳನ್ನು ಹುಟ್ಟು ಹಾಕುವುದರಲ್ಲಿ ಭಾರತ ಸ್ವತಂತ್ರವಾಗುವ ಹೊಸ್ತಿಲಲ್ಲಿರುವಾಗ ನೀಡಿದ ಡೈರೆಕ್ಟ್ ಆಕ್ಷನ್ ಎಂಬ ಕರೆಯ ಮತ್ತು ಮುಸ್ಲಿಂ ಲೀಗಿನ ಪಾತ್ರವನ್ನು ಕೂಡ ನೆನಪಿನಲ್ಲಿಟ್ಟುಕೊಳ್ಳಬೇಕು. ಕಲಕತ್ತಾ ಒಂದೇ ನಗರದಲ್ಲಿ 5,000ಕ್ಕಿಂತ ಹೆಚ್ಚು ಕೊಲೆಗಳು ನಡೆದವು.

ಆರೆಸ್ಸೆಸನ "ರಾಷ್ಟ್ರಪ್ರೇಮ"ದ ಚರಿತ್ರೆಗೆ ಈ ಅಂಶಗಳೂ ಸೇರದಿದ್ದರೆ ಪೂರ್ತಿಯಾಗುತ್ತದೆಯೇ? ಇದಕ್ಕೆ ಸರಿಯಾದ ಹೆಸರು ರಾಷ್ಟ್ರದ್ರೋಹವಲ್ಲವೇ? ಭಾರತದ ನೈಜ ರಾಷ್ಟ್ರಪ್ರೇಮಿ ಪ್ರಜೆಗಳು ತೀರ್ಮಾನ ಮಾಡಬೇಕು.

ಜಿಲ್ಲಾ ಜನಶಕ್ತಿ ಉತ್ಸವಗಳು



ಗುಲ್ಬರ್ಗಾ



ಗುಲ್ಬರ್ಗಾ



ತುಮಕೂರು

ಬೆಳ್ತಂಗಡಿಯಲ್ಲಿ "ಆಟಿ ತಿಂಗಳ ಒಂದು ದಿನ"

ಕರ್ನಾಟಕ ಪ್ರಾಂತ ರೈತ ಸಂಘ, ಬೆಳ್ತಂಗಡಿ ತಾಲೂಕು ಸಮಿತಿ ಮತ್ತು ಕಾರ್ಮಿಕರ ಸಂಗಾತಿ ಸ್ವಸಹಾಯ ಗುಂಪು ಯೋಜನೆಗಳ ಜಂಟಿ ಆಶ್ರಯದಲ್ಲಿ ಸಂಗಾತಿ ಮಹಾಸಂಗಮವನ್ನು ಆಗಸ್ಟ್ 6 ರಂದು ಬೆಳ್ತಂಗಡಿಯ ಸಿವಿಸಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. "ಆಟಿ ತಿಂಗಳ ಒಂದು ದಿನ" ಎಂಬ ಈ ಕಾರ್ಯಕ್ರಮದಲ್ಲಿ ಸಾವಿರಕ್ಕೂ ಮೀರಿ ರೈತರು, ಕಾರ್ಮಿಕರು ಭಾಗವಹಿಸಿದ್ದರು. ಉಪನ್ಯಾಸಕಿ ಹಾಗೂ ಲೇಖಕಿ ಜ್ಯೋತಿ ಚೇಳ್ಯಾರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಪ್ರತಿ ರೈತ ಕುಟುಂಬವೂ ತಲಾ 5 ಎಕರೆ ಪಡೆದುಕೊಳ್ಳಲು ಹೋರಾಟಕ್ಕೆ ಸಿದ್ಧರಾಗಬೇಕು, ಕಸ್ತೂರಿರಂಗನ್ ವರದಿಯು ಮಲೆನಾಡು ಪ್ರದೇಶದ ಅಭಿವೃದ್ಧಿ ಹೊಂದುತ್ತಿರುವ ಗ್ರಾಮಗಳಿಗೆ ಕುಡಾರ ಪ್ರಾಯವಾಗಿದ್ದು ಅದನ್ನು ಹಿಂತೆಗೆಯಬೇಕು. ಸಂಗಾತಿ ಸ್ವಸಹಾಯ ಗುಂಪುಗಳಿಗೆ ಸಬ್ಸಿಡಿ ಹಾಗೂ ಬಡ್ಡಿರಹಿತ ಸಾಲವನ್ನು ನೀಡಬೇಕು ಈ ಮುಖ್ಯ ಬೇಡಿಕೆಗಳನ್ನು ರಾಜ್ಯ ಕೇಂದ್ರ ಸರಕಾರಗಳು ಈಡೇರಿಸಬೇಕು ಎಂಬ ಒತ್ತಾಯವನ್ನು ರೈತ ಕಾರ್ಮಿಕ ಮಹಾಸಂಗಮ ಮಾಡಿರುತ್ತದೆ.

ಕಾರ್ಯಕ್ರಮವನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಬಿ.ಎಂ.ಭಟ್, ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಭಟ್ ಕೊಜಂಬೆ ಮಾತನಾಡಿದರು. ಪ್ರಾಂತ ರೈತ ಸಂಘದ ತಾಲೂಕು ಸಮಿತಿ ಸದಸ್ಯರು, ತಾಲೂಕು ಸಂಗಾತಿ ಸಮಿತಿ, ಆದಿವಾಸಿ ಹೋರಾಟ ಸಮಿತಿ, ಡಿವೈಎಫ್‌ಐ ಸಮಿತಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

– ವಾಸುದೇವ ಉಚ್ಚಿಲ

ರಾಜ್ಯಾದ್ಯಂತ ಒಕ್ಕೊರಲಿನ ಕೂಗು...........

ಪುಟ 8 ರಿಂದ



ಸಂದರ್ಭದಲ್ಲಿ ಮಾತನಾಡಿದರು. ಕಾಂ.ಸುರೇಶ್ ಕಲ್ಲಾಗರ ಸ್ವಾಗತಿಸಿ, ಕಾಂ ಹೆಚ್ ನರಸಿಂಹ ವಂದಿಸಿದರು

ಹಾಸನ :

ಕ್ವಿಟ್ ಇಂಡಿಯಾ ಚಳುವಳಿಗೆ 75 ವರ್ಷಗಳು ಸಂದಿದ್ದರೂ ಅಂದಿನ ಆಶಯಗಳು ಇಂದಿಗೂ ಈಡೇರದೆ ದೇಶದಲ್ಲಿ ಕೋಮುವಾದಿ, ಜಾತಿವಾದಿ, ಭಯೋತ್ಪಾದಕ ಶಕ್ತಿಗಳು ಮೇಲುಗೈ ಸಾಧಿಸುತ್ತಿವೆ. ಸ್ವಾತಂತ್ರ್ಯ ಚಳುವಳಿಯ ಕನಸಿನ ಭಾರತವನ್ನು ನಿರ್ಮಾಣ ಮಾಡಬೇಕಾದರೆ ದೇಶ ಒಡೆಯುವ ಈ ಶಕ್ತಿಗಳನ್ನು ಭಾರತದಿಂದ ತೊಲಗಿಸಬೇಕು ಎಂದು ಜನಶಕ್ತಿ ವಾರಪತ್ರಿಕೆಯ ಕಾರ್ಯನಿರತ ಸಂಪಾದಕರಾದ ಎನ್.ಕೆ.ವಸಂತರಾಜ್ ಅಭಿಪ್ರಾಯಪಟ್ಟರು, ನಗರದ ಸ್ವಾಭಿಮಾನಿ ಭವನದಲ್ಲಿ ಜನಶಕ್ತಿ ಓದುಗರ ಬಳಗದ ವತಿಯಿಂದ ನಡೆದ ಕ್ವಿಟ್ ಇಂಡಿಯಾ ಚಳುವಳಿ ಭಾರತ ಬಿಟ್ಟು ತೊಲಗಿ 75 ವರ್ಷಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸ್ವಾತಂತ್ರ್ಯ ಚಳುವಳಿಯಲ್ಲಿ ಎಂದೂ ಭಾಗವಹಿಸದ ಮತಾಂಧ ಶಕ್ತಿಗಳು ಇಂದು ದೇಶಪ್ರೇಮದ ಹೆಸರಿನಲ್ಲಿ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸಂಘಪರಿವಾರದ ಪ್ರಕಾರ ಬ್ರಿಟೀಷರು ಈ ದೇಶದ ಶತ್ರುಗಳಲ್ಲ. ಬದಲಿಗೆ ದೇಶದಲ್ಲಿರುವ ಮುಸಲ್ಮಾನರು, ಕ್ರಿಶ್ಚಿಯನ್ನರು ನಮ್ಮ ಶತ್ರುಗಳು ಎಂದು ವಾದ ಮಾಡಿದ್ದರು ಜೊತೆಗೆ ದೇಶದ ತ್ರಿವರ್ಣ ಧ್ವಜವನ್ನು ಒಪ್ಪಲಿರಲಿಲ್ಲ ಮತ್ತು ಸಂವಿಧಾನವನ್ನೇ ಅವರು ಒಪ್ಪಿಕೊಂಡಿರಲಿಲ್ಲ ಎಂದರು. ಮುಖ್ಯ ಅತಿಥಿಗಳಾಗಿ ಡಾ.ಎಚ್.



ಆರ್ ಸ್ವಾಮಿಯವರು ಭಾಗವಹಿಸಿ ಮಾತನಾಡುತ್ತಾ ಗಾಂಧಿಜಿ ಕನಸು ಬ್ರಿಟೀಷರು ಭಾರತದಿಂದ ಹೋದ ನಂತರದಲ್ಲೂ ದೇಶದೊಳಗಿರುವ ಜಾತೀಯತೆ, ಕೋಮುವಾದ ಮತ್ತು ಅಸ್ಪೃಶ್ಯತೆಯಂತಹ ಕರಾಳ ಆಚರಣೆಗಳಿಂದ ಭಾರತಕ್ಕೆ ಮುಕ್ತಿ ಸಿಗಬೇಕಿದೆ, ಮೌಢ್ಯ ತೊಲಗಿಸಿ ವೈಜ್ಞಾನಿಕ ಮನೋಧರ್ಮವನ್ನು ಬಿತ್ತಬೇಕಿದೆ ಎಂದರು. ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ನವೀನ್ ಕುಮಾರ್ ರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಮೈಸೂರು:

ಸಿಪಿಐ(ಎಂ) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ನಗರದ ಹೋಟೆಲ್ ಗೋವರ್ಧನ ಸಭಾಂಗಣದಲ್ಲಿ ಕ್ವಿಟ್ ಇಂಡಿಯಾ



ಚಳುವಳಿಯ 75ನೇ ವರ್ಷಾಚರಣೆಯ ಅಂಗವಾಗಿ ವಿಚಾರ ಮಂಥನ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ವಿ.ಜೆ.ಕೆ.ನಾಯರ್, ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ, ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಎನ್.ವಿಜಯಕುಮಾರ್ ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಬಸವರಾಜು ವಹಿಸಿದ್ದರು. ಪುಸ್ತಿಕೆ ಬಿಡುಗಡೆಯನ್ನು ವಿ.ಜೆ.ಕೆ.ನಾಯರ್ ನೆರವೇರಿಸಿದರು.

ಹೊಸಪೇಟೆ (ಬಳ್ಳಾರಿ):

ದೇಶದ ಸಂಪತ್ತನ್ನು ಲೂಟಿ ಮಾಡುತ್ತಿದ್ದವರ ವಿರುದ್ಧ ಚಕಾರವೆತ್ತದ ಸಂಘ ಪರಿವಾರದವರು ಇಂದು ದೇಶಪ್ರೇಮದ ಬಗ್ಗೆ ಮಾತನಾಡುವುದಕ್ಕೆ ಯವುದೇ ನೈತಿಕತೆ ಇಲ್ಲ. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದಿದ್ದವರು ಇಂದು ದೇಶಭಕ್ತರೆಂದು ಹೇಳಿಕೊಳ್ಳುವರನ್ನು ಜನ ಎಚ್ಚರಿಕೆಯಿಂದ ಗಮನಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ರತ್ನಾಕರ ಶೆಣೈ ಹೊಸಪೇಟೆಯಲ್ಲಿ ನಡೆದ "ಕ್ವಿಟ್ ಇಂಡಿ-



ಯಾ ಚಳುವಳಿಯ 75ನೇ ವರ್ಷ : ಒಂದು ಐತಿಹಾಸಿಕ ವಿಶ್ಲೇಷಣೆ" ಸಭೆಯಲ್ಲಿ ಎಚ್ಚರಿಸಿದರು. ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಆರ್.ಎಸ್.ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಜಂಬಯ್ಯ ನಾಯಕ, ಭಾಸ್ಕರ ರೆಡ್ಡಿ, ಮಾಳಮ್ಮ, ಸತ್ಯಾಬಾಬು, ತಿಪ್ಪಯ್ಯ, ಜಗನ್ನಾಥ, ಗಾಳಿ ಬಸವರಾಜ್ ಭಾಗವಹಿಸಿದ್ದರು.

ಕೋಲಾರ:

ಕ್ವಿಟ್ ಇಂಡಿಯಾ ಚಳವಳಿಯ 75 ವರ್ಷಗಳ ದಿನಾಚರಣೆಯ ಅಂಗವಾಗಿ ಕೋಮುವಾದಿ ಶಕ್ತಿಗಳು, ಮೂಲಭೂತ ಶಕ್ತಿಗಳು, ಭಯೋತ್ಪಾದಕರು ದೇಶ ಬಿಟ್ಟು ತೊಲಗುವಂತೆ ಒತ್ತಾಯಿಸಿ ಕೋಲಾರ ನಗರದ ಗಾಂಧಿವನದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಪಿ.ಶ್ರೀನಿವಾಸ್, ವಿ.ಗೀತಾ, ಟಿ.ಎಂ.ವೆಂಕಟೇಶ್, ಪಾತಕೋಟೆ ನವೀನ್ ಕುಮಾರ್, ವಿಜಯಕೃಷ್ಣ, ಚಲಪತಿ ಮತ್ತಿತರರಿದ್ದರು.

ದಾಂಡೇಲಿ(ಉ.ಕ.):

ಸಿಪಿಐ(ಎಂ) ಉತ್ತರಕನ್ನಡ ಜಿಲ್ಲಾ ಸಮಿತಿ ವತಿಯಿಂದ ದಾಂಡೇಲಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ 75ನೇ ವರ್ಷಾಚರಣೆಯ ಅಂಗವಾಗಿ



ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಸ್ ವರಲಕ್ಷ್ಮೀ, ಮೀನಾಕ್ಷಿ ಸುಂದರಂ, ಕೆಎನ್ ಉಮೇಶ್, ಜಿಲ್ಲಾ ಸಮಿತಿಯ ಕಾರ್ಯದರ್ಶಿ ಯಮುನಾ ಗಾಂವ್ಕರ್, ಸದಸ್ಯರಾದ ಹರೀಶ್ ನಾಯ್ಕ, ಡಿ. ಸ್ಯಾಮ್ಸನ್ ಉಪಸ್ಥಿತರಿದ್ದರು.

ಗಂಗಾವತಿ(ಕೊಪ್ಪಳ):

ಗಂಗಾವತಿ ನಗರದಲ್ಲಿ ಕ್ವಿಟ್ ಇಂಡಿಯಾ ನೆನಪಿಗಾಗಿ ಸ್ವಾತಂತ್ರ್ಯ ಚಳುವಳಿಯ ಆಶಯಗಳನ್ನು ಗಾಳಿಗೆ ತೂರಿ ದೇಶವನ್ನು ಮತ್ತೆ ವಿದೇಶೀ ಕಾರ್ಪೋರೇಟರ್ ಹಿಡಿತಕ್ಕೆ ದೂಡುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಚಳುವಳಿಯನ್ನು ಮಾಡಲಾಯಿತು ಇಸ್ಲಾಂಪುರ ದಿಂದ ಕಲ್ಮಾಡಿಗಿಯ ಮುಖಾಂತರ ಶ್ರೀ ಕೃಷ್ಣದೇವರಾಯನ ಸರ್ಕಲ್ ವರೆಗೂ ಮೆರವಣಿಗೆ ಮಾಡಲಾಯಿತು.



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**